UNIVERSAL
LIBRARY
OU_198693
UNIVERSAL
LIBRARY

NIVERSITY LIBRARY

Accession No. 151555

n or before the date last marked below

ಅರವಿಂದ ಗ್ರಂಥಮಾಲೆಯ ಕಾಣಿಕೆಯ ಕಮಲ

# ಕನ್ನಡಿಗರ ಕುಲಗುರು

( ಶ್ರೀ ವಿದ್ಯಾರಣ್ಯರು )

ಲೇಖಕರು:—

ಶ್ರೀ. ಮಧುರಚೆನ್ನ

ಶ್ರೀ. ಸಿಂಪೀ ಲಿಂಗಣ್ಣ

## ವಿಜಯನಗರ ಮಹೋತ್ಸವದ
## ಸ್ಮರಣಾರ್ಥವಾಗಿ

ಡಿಶೆಂಬರ್ ] ಆರಾಣೆ [ ೧೯೩೬

ಪ್ರಕಾಶಕರು:—

**ಬಿ. ಡಿ. ಅಕ್ಕಿ, ಬಿ. ಎ., ಎಲ್ ಎಲ್. ಬಿ.**

" ಅರವಿಂದ ಗ್ರಂಥಮಾಲಾ "

ಹ ಲ ಸಂ ಗಿ.

[ ಜಿಲ್ಹಾ:- ವಿಜಾಪುರ ]

ಸಂಪಾದಕರು:—

'ಮಧುರಚೆನ್ನ'

ಮುದ್ರಕರು:—

**ಎನ್. ಬಿ. ಕೆಂದೂರ,**

ದಿ ಬಾಗಲಕೋಟ ಪ್ರಿಂಟಿಂಗ್ ವರ್ಕ್ಸ್,

ಬಾ ಗ ಲ ಕೋ ಟ.

## ಅರ್ಪಣ

ಕನ್ನಡಿಗರ ಕುಲದೇವತೆಯಾದ

ಶ್ರೀ ಭುವನೇಶ್ವರೀ ಮಾತೆಯ

ಅಡಿದಾವರೆಗಳಲ್ಲಿ

ಓಂ ಶ್ರೀ ಓಂ

ಓಂ

ಶ್ರೀ

# ಜಯ ಭುವನೇಶ್ವರೀ

ಉದ್ಯದಿನ ದ್ಯುತಿ ಮಿಂದು ಕಿರೀಟಾಮ್
ತುಂಗ ಕುಚಾಂ ನಯನ ತ್ರಯ ಯುಕ್ತಾಮ್ ||
ಸ್ಮೇರ ಮುಖೀಂ ವರದಾಂಕುಶ ಪಾಶಾ-ಽ
ಭೀತಿಕರಾಂ ಪ್ರಭಜೇ **ಭುವನೇಶೀಮ್** ||

ಯಾ ದೇವೀ ಸರ್ವ ಭೂತೇಷು
ಮಾತೃ ರೂಪೇಣ ಸಂಸ್ಥಿತಾ ||
ನಮಸ್ತಸ್ಯೈ ನಮಸ್ತಸ್ಯೈ
ನಮಸ್ತಸ್ಯೈ ನಮೋನಮಃ ||

ಓಂ ಶ್ರೀ ಓಂ

**Aum**

ಓಂ ಶ್ರೀ ಓಂ

# ಸ್ವವಿಷಯ

ಎಲ್ಲಕ್ಕೂ ಮೊದಲನೆಯ ಮಾತೆಂದರೆ ನಮ್ಮ ಮಾಲೆಯ ಈ ವರ್ಷದ ಕಾಣಿಕೆಯ ಪುಸ್ತಕವು ಇದೇ ಆದದ್ದಕ್ಕೆ ಒಂದು ಮಹತ್ವದ ಕಾರಣವಿದೆ. ನಮ್ಮ ನಾಡಿನ ಭಾಗ್ಯೋದಯದ ಮಹಾ ಪರ್ವಕಾಲವು ಬಂದಿರುವಾಗ ಆ ವಿಷಯವನ್ನೇ ಒಳಕೊಂಡ ಪುಸ್ತಕವೊಂದು ನಮ್ಮ ಗ್ರಂಥಮಾಲೆಯಿಂದ ಪ್ರಕಟಿಸಲ್ಪಡಬೇಕೆಂಬ ವಿಚಾರವು ನಮ್ಮಲ್ಲಿ ಉತ್ಸವವು ಸನಿಯಾದ ಹಾಗೆಲ್ಲ ಪ್ರಬಲಿಸತೊಡಗಿತು. ಆದುದರಿಂದ ನಮ್ಮ ಗೆಳೆಯರು ಬರೆದ "ಅರಬ್ಬಿಯದ ಅಭಿಮನ್ಯು" ಎಂಬ ಧ್ಯೇಯಾತ್ಮಕ ಗೀತಗಳ ಗುಚ್ಛವನ್ನು ಮೂರು ತಿಂಗಳು ಮುಂದಕ್ಕೆ ಸರಿಸಿ (ದ್ವಿತೀಯ ವರ್ಷದ ಆರಂಭಕ್ಕೇ ಕಾಣಿಕೆಯ ಪುಸ್ತಕವಾಗಿ ಹೊರಡಿಸುವುದನ್ನು ಗೊತ್ತುಪಡಿಸಿ) ಈ ವರುಷದ ನಮ್ಮ ಸುಹೃದಯರಾದ ವಾಚಕರಿಗೆ ಸಮಯಕ್ಕೆ ತಕ್ಕಂಥ ಈ ಬೇರೊಂದು ಪುಸ್ತಕವನ್ನು ಕಾಣಿಕೆಯಾಗಿ ಕೊಡಬೇಕಾಯಿತು. ಇದಲ್ಲದೆ ಈ ವರುಷ ಪ್ರಕಟವಾದ ಪುಸ್ತಕಗಳಲ್ಲಿ "ಮಿಲನ" ವೂ ಒಂದು ಕಾವ್ಯವೇ ಆಗಿರುವದರಿಂದ ನಮ್ಮ ವಾಚಕರಿಗೆ ಇನ್ನೂ ಒಂದು ಕಾವ್ಯವನ್ನೇ ಕೈಯ್ಯಲ್ಲಿರಿಸಿದರೆ ವಿರಸವಾಗುವ ಹೆದರಿಕೆಯೂ ಇದ್ದಿತು. ಆದುದರಿಂದ ಈ ಹೊಸ ಯೋಜನೆಯನ್ನು ನಮ್ಮ ತಲೆಯಲ್ಲಿ ಹೊಗಿಸಿ ನಾಡತಾಯಿಯು ನಮ್ಮನ್ನೂ ನಮ್ಮ ವಾಚಕರನ್ನೂ ಹರುಷದೊಳೋಲಾಡಿಸಿದಳೆಂದೇ ನಾವು ಭಾವಿಸುತ್ತೇವೆ. ಈ ಯೋಜನೆಯಿಂದ ಮುಂದಿನ ವರುಷವೂ ನಮ್ಮ ವಾಚಕರಿಗೆ ಒಂದು ಕವಿತಾಗ್ರಂಥದ ರುಚಿಯು ಲಭಿಸಲಿಕ್ಕೆ ಮಾರ್ಗವಾಯಿತು.

ಈ ಪುಸ್ತಕದಲ್ಲಿ ಮೂರು ಬೇರೆ ಬೇರೆ ಸ್ವತಂತ್ರ ಪ್ರಬಂಧಗಳಿವೆ. ಇವುಗಳ ರೀತಿಯು ತೀರ ಹೊಸದು. ವಾಚಕರು ಒಮ್ಮೆ ಓದಿ ಮುಗಿಸಿದರೆ ಎಂದೆಂದೂ ಕೇಳಲಾರದ ಅತಿ ನೂತನ ವಿಷಯಗಳ ಪರಿಚಯವಾಗುವದರಲ್ಲಿ ಸಂದೇಹವಿಲ್ಲ.

"ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ" ಎಂಬ ಪ್ರಬಂಧಕ್ಕೆ ಬೇಕಾದ ಐತಿಹಾಸಿಕ ಅಂಶಗಳನ್ನೆಲ್ಲ ಮ|| ರಾ|| ರಾ|| ಡಿ. ವ್ಹಿ. ಗುಂಡಪ್ಪನವರ ಲೇಖನಗಳಿಂದ ಸಂಗ್ರಹಿಸಲಾಗಿರುವದರಿಂದ ನಾವು ಆ ಮಹನೀಯರಿಗೆ ಅತ್ಯಂತ ಉಪಕೃತರಾಗಿದ್ದೇವೆ. ಉಳಿದೆರಡು ಪ್ರಬಂಧಗಳ ಆರಂಭದಲ್ಲಿ ಕೊಟ್ಟಿರುವ ಶ್ರೀ ವಿದ್ಯಾರಣ್ಯರ ವಚನಗಳನ್ನು ಅವರ ವಿಖ್ಯಾತ ಗ್ರಂಥವಾದ "ಜೀವನ್ಮುಕ್ತಿ ವಿವೇಕ" ದಿಂದ ಶೇಖರಿಸಲಾಗಿದೆ. ಮೂಲವನ್ನು ಓದಬಯಸುವವರು ಆ ಗ್ರಂಥವನ್ನು ಪರಿಶೀಲಿಸಬೇಕು.

ನಾಡತಾಯಿಯ ಇಂಥ ಮಂಗಲ ಪ್ರಸಂಗದಲ್ಲಿ ಹೊರಟ ಅದೇ ವಿಷಯವನ್ನೊಳಕೊಂಡ ಈ ಪುಸ್ತಕದ ಆರುನೂರು ಪ್ರತಿಗಳನ್ನು ಆರುನೂರು ವರುಷಗಳ ಸ್ಮಾರಕೋತ್ಸವದಲ್ಲಿ ಉಚಿತವಾಗಿ ಹಂಚಬೇಕೆಂದು ನಮ್ಮ ಮನಸ್ಸಿನೊಳಗೆ ಉದ್ಭವಿಸಿದ ಮಹಾ ಅಭಿಲಾಷೆಯನ್ನು ನೆರವೇರಿಸುವುದಕ್ಕೆ ಇಲಕಲ್ಲಿನ ಶ್ರೀ ಸಕ್ಕರೀ ಬಂಧುಗಳ ಕಾಲೋಚಿತ ಧನ ಸಹಾಯವು ಅತಿಶಯವಾಗಿ ನೆರವಾಯಿತು. ಈ ಮಹನೀಯರಿಗೆ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

ಪ್ರತಿ ಸಾರೆಯಂತೆ ಈ ಪುಸ್ತಕದ ಕೊನೆಯಲ್ಲಿ ನಾವು ನಮ್ಮ ಹಿತೈಷಿಗಳ ಪಟ್ಟಿಯನ್ನೂ, ನಮ್ಮ ವಿನಿಮಯ ಕರ್ತರ ಜಾಹಿರಾತುಗಳನ್ನೂ ಸ್ಥಳಸಂಕೋಚದ ಮೂಲಕವೂ, ಕಾಲಾಭಾವದ ಮೂಲ-

ಕವೂ ಪ್ರಕಟಿಸಲು ಶಕ್ಯವಾಗಲಾರದ್ದಕ್ಕೆ ನಮ್ಮ ಹಿತವನ್ನೇ ಕೋರುವ ಆ ಮಹನೀಯರೆಲ್ಲರೂ ನಮ್ಮನ್ನು ಮನ್ನಿಸುವರೆಂದು ನಂಬಿದ್ದೇವೆ.

ಇಷ್ಟೊತ್ತಿಗೆ ಪ್ರಕಟವಾಗಬೇಕಾಗಿದ್ದ "ಬಂಧನದ ಆಚೆ" ಎಂಬ ಪುಸ್ತಕದ ಪ್ರಥಮ ಖಂಡದ ಮುದ್ರಣವು ಮುಗಿಯುತ್ತ ಬಂದಿದ್ದರೂ ನಮ್ಮ ಬಹುಜನ ತಜ್ಞ ಹಿತಚಿಂತಕರು— "ಎರಡೂ ಖಂಡಗಳನ್ನು ಬಿಡಿ ಬಿಡಿಯಾಗಿ ಕೊಡದೆ ಇಡಿಯಾಗಿ ಒಂದೇ ದೊಡ್ಡ ಪುಸ್ತಕವನ್ನಾಗಿ ಮಾಡಿ ಕೊಡುವುದೇ ಒಳ್ಳೆಯದು." ಎಂದು ಸೂಚಿಸಿದ್ದರಿಂದ ಹಾಗೇ ಮಾಡುವುದನ್ನು ನಿರ್ಧರಿಸಿದೆವು. ಮುಂದಿನ ತಿಂಗಳಲ್ಲಿ ತಪ್ಪದೆ ಆ ಸಂಯುಕ್ತ ಪುಸ್ತಕವು ( ೫—೬ ) ನಮ್ಮ ನಲುಮೆಯ ವಾಚಕರ ಕೈಸೇರುವದು.

ಇಂಥ ಅವಸರದ ಹೊತ್ತಿನಲ್ಲಿ, ಅತ್ಯಂತ ಅಲ್ಪಾವಧಿಯಲ್ಲಿ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ದಿ ಬಾಗಲಕೋಟ ಪ್ರಿಂಟಿಂಗ್ ವರ್ಕ್ಸ್‌ನ ಒಡೆಯರಿಗೂ, ಮ್ಯಾನೇಜರರಾದ ಶ್ರೀ ಬಂಡರಗಲ್ಲ ಮಹಾದೇವಪ್ಪನವರಿಗೂ ನಾವು ಕೃತಜ್ಞರಾಗಿದ್ದೇವೆ.

**—ಸಂಪಾದಕ ಮತ್ತು ಪ್ರಕಾಶಕ.**



# ಅಭಿವಂದನ

ಉದಾರ ಚರಿತ್ರರೂ ತತ್ವಪ್ರಿಯರೂ ಆಗಿದ್ದ “ದೇವಾಂಗ ಕುಲಭೂಷಣ” ಕೈ. ವಾ. **ಸಕ್ಕರಿ ಶಂಕರಪ್ಪ**ನವರ ಪುಣ್ಯಾನುಸ್ಮರಣಾರ್ಥವಾಗಿ ಅವರ ಸತ್ಪುತ್ರರಾದ ಶ್ರೀಮಂತ **ಸಕ್ಕರೀ** ಬಂಧುಗಳು ಈ ಪುಸ್ತಕದ ಮುದ್ರಣದ ಭಾರವನ್ನು ವಹಿಸಿರುವದಕ್ಕಾಗಿ ನಮ್ಮ ಹೃತ್ಪೂರ್ವಕ ಅಭಿವಂದನಗಳು.

---

ವಿಶೇಷ:- ಈ ಪುಸ್ತಕದ ಆರುನೂರು ಪ್ರತಿಗಳನ್ನು ವಿಜಯನಗರ ಮಹೋತ್ಸವದಲ್ಲಿ ಉಚಿತವಾಗಿ ಹಂಚಲಾಗುವದು.

# ಕನ್ನಡಿಗರ ಕುಲಗುರು

( ಶ್ರೀ ವಿದ್ಯಾರಣ್ಯರು )

" ಜ್ಞಾನಿನಾಚರಿತುಂ ಶಕ್ಯಂ ಸಮ್ಯಗ್ರಾಜಾದಿ ಲೌಕಿಕಮ್ "

( ಜ್ಞಾನಿಗಳಿಗೆ ರಾಜ್ಯಾದಿ ಲೌಕಿಕಗಳನ್ನು ಧಾರಾಳವಾಗಿ ಆಚರಿಸಲು ಶಕ್ಯವಿರುತ್ತದೆ— ಶ್ರೀ ವಿದ್ಯಾರಣ್ಯರು. )

## ಮುಂದಿನ ಪುಸ್ತಕ

ಮಾಲೆಯ ೫ ಹಾಗು ೬ ನೆಯ ಪುಷ್ಪಗಳಾದ

# " ಬಂಧನದ ಆಚೆ " ಎಂಬ ಕಾದಂಬರಿಯು

## ಎರಡೂ ಖಂಡಗಳು

## — ಒಮ್ಮೆಲೆ —

ಸಂಯುಕ್ತವಾಗಿಯೇ ಕೊಡಲ್ಪಡುವವು

**ಜನುವರಿ ತಿಂಗಳ ಕೊನೆಯಲ್ಲಿ**

# ಕನ್ನಡಿಗರ ಕುಲಗುರು
## ( ಶ್ರೀ ವಿದ್ಯಾರಣ್ಯರು )

**Aum**

ಓಂ ಶ್ರೀ ಓಂ

# ೧. ದೈವ ಮತ್ತು ಪ್ರಯತ್ನ

## § (೧)

ಕನ್ನಡಿಗರ ಕುಲಗುರುಗಳಾದ ಶ್ರೀ ವಿದ್ಯಾರಣ್ಯ ಮುನಿವರ್ಯರ ಅಮೃತವಾಣಿಯಿದು: —

"ಅದೃಷ್ಟ— ಅಥವಾ ಅದೃಶ್ಯ ಸ್ವರೂಪದಲ್ಲಿರುವ ಕರ್ಮವೆಂಬುದು ದೃಶ್ಯ ನಿಮಿತ್ತಗಳ ಸಹಾಯವಿಲ್ಲದೆ ಫಲಿಸಲು ಅಸಮರ್ಥವಾಗಿರುವದರಿಂದ ಕೃಷಿ ಮೊದಲಾದವುಗಳಲ್ಲಿ ಮನುಷ್ಯ ಪ್ರಯತ್ನದ ಅಗತ್ಯವಿದೆ........ ಹೀಗಿದ್ದರೂ ಮಾನುಷ ಪ್ರಯತ್ನದಿಂದ ಕೃಷಿ ಮುಂತಾದವುಗಳ ಫಲ ಪರಿಣಾಮವು ಕಂಡು ಬಾರದಿದ್ದಲ್ಲಿ ಪ್ರಬಲತರವಾದ ಕರ್ಮಾಂತರದಿಂದ ಪ್ರತಿಬಂಧವುಂಟಾಯಿತೆಂದು ಕಲ್ಪಿಸಬೇಕಾಗುತ್ತದೆ. ಆ ಪ್ರಬಲವಾದ ಕರ್ಮವೂ ಸಹ ತನಗೆ ಅನುಕೂಲವಾದ ಅನಾವೃಷ್ಟಿ ಮೊದಲಾದ ದೃಶ್ಯ ಸಾಮಗ್ರಿಗಳ ಸಹಾಯದಿಂದಲೇ ಪ್ರತಿಬಂಧವನ್ನುಂಟುಮಾಡುತ್ತದೆ. ಆ ಪ್ರತಿಬಂಧವು ತದ್ವಿರುದ್ಧವಾದ ಬೇರೊಂದು ಪ್ರಬಲತರ ಕರ್ಮದಿಂದ— ಅಂದರೆ 'ಕಾರೀರೀ' ಮುಂತಾದ ಯಜ್ಞಾದಿ ಕರ್ಮದಿಂದ— ನಿವಾರಿಸಲ್ಪಡುತ್ತದೆ. ಈ ನಿವಾರಕ ಕರ್ಮವೂ ಕೂಡ ತನಗೆ

ಅನುಕೂಲವಾದ ಸುವೃಷ್ಟಿ ಮೊದಲಾದ ದೃಶ್ಯ ಸಾಮಗ್ರಿಯನ್ನು ಒದಗಿಸಿ
ಕೊಂಡೇ ಪ್ರತಿಬಂಧವನ್ನು ನಿವಾರಿಸುತ್ತದೆ........... ಈ ಶಾಸ್ತ್ರೀಯ
ಪ್ರಯತ್ನದ ಪ್ರಾಬಲ್ಯವನ್ನು ಅಂಗೀಕರಿಸದೆ ಹೋದಲ್ಲಿ ವೈದ್ಯಶಾಸ್ತ್ರ
ಮೊದಲ್ಗೊಂಡು ಮೋಕ್ಷಶಾಸ್ತ್ರದ ವರೆಗಿನ ಸರ್ವ ಶಾಸ್ತ್ರಗಳು ಅನರ್ಥಕ
ವೆಂದು ಸಿದ್ಧವಾಗಬೇಕಾಗುತ್ತದೆ. ಯಾವಾಗಲೋ ಒಮ್ಮೊಮ್ಮೆ ಇಂಥ
ಶಾಸ್ತ್ರೀಯ ಕರ್ಮಗಳ ಫಲವು ವಿಪರೀತವಾಗುವದುಂಟೆಂದ ಮಾತ್ರಕ್ಕೆ
ಅವುಗಳ ದೌರ್ಬಲ್ಯವನ್ನು ಪ್ರತಿಪಾದಿಸುವುದು ಶಕ್ಯವಿಲ್ಲ. ಯಾರಿಗೊ
ಒಬ್ಬರಿಗೆ ಎಂದೋ ಪರಾಜಯವುಂಟಾಯಿತೆಂದ ಮಾತ್ರಕ್ಕೆ ಅದನ್ನು
ನೋಡಿ ಸರ್ವ ಭೂಪಾಲರು ಗಜ ತುರಗಾದಿ ಸೇನಾಬಲವನ್ನೇ ಧಿಕ್ಕ
ರಿಸುವರೋ ? ಅಜೀರ್ಣವಾದೀತೆಂಬ ಭಯದಿಂದ ಯಾರೂ ಆಹಾರ
ವನ್ನೇ ತ್ಯಜಿಸಲಾರರು; ಭಿಕ್ಷುಕರ ಕಾಟಕ್ಕೆ ಅಂಜಿ ಯಾರೂ ಅಡಿಗೆ
ಮಾಡಿಕೊಳ್ಳುವದನ್ನು ಬಿಡಲಾರರು; ಹೇನು ಸೀರುಗಳ ಭಯದಿಂದ
ಯಾರೂ ಅರಿವೆ ಅಂಚಡಿಗಳನ್ನು ಧರಿಸದಿರಲಾರರು........... ಇಲ್ಲಿ
ಸಾಂಪ್ರದಾಯಿಕವಾಗಿ ಬಂದ ಒಂದು ಕಥೆಯನ್ನು ಹೇಳುತ್ತೇನೆ.—
ಒಂದಾನೊಂದು ಹಕ್ಕಿಯ ತತ್ತಿಗಳು ಸಮುದ್ರದ ದಂಡೆಯಲ್ಲಿ ಇದ್ದ
ದ್ದರಿಂದ ನೀರಿನ ಉಬ್ಬರಕ್ಕೆ ಅವು ಮುಳುಗಿ ಹೋದವು. ಆಗ ಆ
ಹಕ್ಕಿಯು ಸಮುದ್ರವನ್ನೇ ಬತ್ತಿಸುವೆನೆಂದು ತನ್ನ ಚುಂಚಿನಿಂದ
ಒಂದೊಂದೇ ಹನಿಯನ್ನು ಎತ್ತಿ ಹೊರಗೆ ಚೆಲ್ಲಹತ್ತಿತು. ಅದನ್ನು
ಕಂಡು ಅದರ ಬಂಧು ವರ್ಗದ ಬಹು ಪಕ್ಷಿಗಳು ಅದಕ್ಕೆ ಈ ಸಾಹಸ
ವನ್ನು ಬಿಡ ಹೇಳಿದರೂ ಕೇಳದೆ, ತಿರುಗಿ ಅದೇ ಅವುಗಳಿಗೆ ನೆರ
ವಾಗಿರೆಂದು ಕೇಳಿಕೊಂಡಿತು. ಅವುಗಳೆಲ್ಲ ಕೂಡಿ ಏಳ ಬೀಳುತ್ತ ಬಹು
ಪರಿಯಿಂದ ಕಷ್ಟಪಡುತ್ತಿರುವುದನ್ನು ಕಂಡು ನಾರದರು ಪಕ್ಷಿರಾಜನಾದ
ಗರುಡನ ಬಳಿಗೆ ಹೋಗಿ ಅರುಹಿದರು. ಆಗ ಗರುಡನು ತನ್ನ ರೆಕ್ಕೆ
ಗಳನ್ನು ಬೀಸುತ್ತ ಬರಲು ಆ ಬಿರುಗಾಳಿಗೆ ಬತ್ತಿ ಭಯಭೀತನಾದ
ಸಮುದ್ರನಾಥನು ಮುಳುಗಿ ಹೋದ ಆ ತತ್ತಿಗಳನ್ನು ಹಕ್ಕಿಗಳಿಗೆ

ಕೊಟ್ಟನು. ಹೀಗೆ ಖಿನ್ನನಾಗದೆ ಪ್ರಯತ್ನಿಸುವವನಿಗೆ ಈಶ್ವರನು ಅನುಗ್ರಹಿಸುತ್ತಾನೆ."

ಶ್ರೀ ವಿದ್ಯಾರಣ್ಯರ ಮೇಲ್ಕಾಣಿಸಿದ ವಚನದಿಂದ ಹೊರಡುವ ಸಿದ್ಧಾಂತಗಳು ಐದು, ಅವು ಯಾವವೆಂದರೆ—

(೧) ಅದೃಶ್ಯವಾದ ಕರ್ಮವು ಫಲಕಾರಿಯಾಗಬೇಕಾದರೆ ಅದಕ್ಕೆ ದೃಶ್ಯ ಸಾಮಗ್ರಿಯ ಅವಲಂಬನವಿಲ್ಲದೆ ಸಾಗುವದಿಲ್ಲ. ಮಾನುಷ ಪ್ರಯತ್ನವು ದೃಶ್ಯ ಸಾಮಗ್ರಿಗಳಲ್ಲೊಂದಾಗಿದೆ.

(೨) ಪ್ರಯತ್ನವು ನಿಷ್ಫಲವಾಗುವದಕ್ಕೆ ಪ್ರಬಲತರವಾದ ಬೇರೊಂದು ಕರ್ಮವೇ ಕಾರಣವು. ಅದಕ್ಕೂ ಕೂಡ ದೃಶ್ಯ ಸಾಮಗ್ರಿಯ ಅವಲಂಬನವಿಲ್ಲದೆ ನಡೆಯುವದಿಲ್ಲ.

(೩) ಪ್ರತಿಬಂಧಕ ಕರ್ಮವನ್ನು ಪರಿಹರಿಸುವುದಕ್ಕೆ ಅದಕ್ಕಿಂತ ಪ್ರಬಲವಾದ ಇನ್ನೂ ಒಂದು ಬಗೆಯ ಕರ್ಮವಿದೆ. ಅದೇ ಶಾಸ್ತ್ರೀಯ ಪ್ರಯತ್ನ. ಇದಕ್ಕೂ ದೃಶ್ಯ ಸಾಮಗ್ರಿಯ ಅವಲಂಬನವಿಲ್ಲದೆ ನಡೆಯುವಂತಿಲ್ಲ.

(೪) ಶಾಸ್ತ್ರೀಯ ಪ್ರಯತ್ನವೂ ಒಮ್ಮೊಮ್ಮೆ ನಿಷ್ಫಲವಾಗುತ್ತಿರುವ ಸಂಭವವು ಕೆಲಮಟ್ಟಿಗೆ ಇರುವದರಿಂದ ಖೇದಪಡದೆ ನಿರಂತರವಾಗಿ ಪ್ರಯತ್ನಿಸುವದರ ಅಗತ್ಯವಿದೆ.

(೫) ಖೇದವಿಲ್ಲದ ನಿರಂತರ ಪ್ರಯತ್ನಕ್ಕೆ ಪರಮೇಶ್ವರನ ಅನುಗ್ರಹದ ಬೆಂಬಲವು ಲಭಿಸುತ್ತದೆ.

ಈ ಐದು ದಿವ್ಯೋಪದೇಶಗಳ ಬಗೆಗೆ ನಾವು ಎಷ್ಟೆಷ್ಟು ವಿಚಾರ ಮಾಡಿದರೆ ಅಷ್ಟಷ್ಟು ನಮಗೆ ಉತ್ಸಾಹವೂ ಧೈರ್ಯವೂ ಲಭಿಸುವದರಲ್ಲಿ ಸಂದೇಹವಿಲ್ಲ. ಆದುದರಿಂದ ಇದೀಗ ಇವುಗಳ ಬಗೆಗೆ ಆಲೋಚಿಸುವಾ.

§ (೨)

ಮೊದಲಿಗೆ ಕರ್ಮವೆಂದರೇನೆಂಬುದನ್ನು ತಿಳಿದುಕೊಳ್ಳೋಣ. ಅದೃಷ್ಟ, ಪ್ರಾರಬ್ಧ, ದೈವ, ಹಣೇಬರಹ, ದತ್ತ, 'ನಸೀಬ', ಭೋಗ, ವಿಧಿ ಮುಂತಾದ ಶಬ್ದಗಳು ಈ ಕರ್ಮವೆಂಬುದರ ಭಿನ್ನ ಭಿನ್ನ ಪರ್ಯಾಯಗಳಾಗಿವೆ. ಇವೆಲ್ಲ ಮಾತುಗಳಲ್ಲಿ ಎರಡು ವಿಚಾರಗಳು ಹುದುಗಿಕೊಂಡಿವೆ. ಪೂರ್ವಜನ್ಮಗಳಲ್ಲಿ ನಾವು ಮಾಡಿದ ಸುಕೃತಿ ದುಷ್ಕೃತಿಗಳ ಫಲಸ್ವರೂಪವಾಗಿ ಈ ಜನ್ಮದಲ್ಲಿ ಇಂತಿಂತಹವನ್ನು ಇಷ್ಟಿಷ್ಟು ಭೋಗಿಸಲೇ ಬೇಕೆಂಬ ನಿರ್ಣಯವು ನಮ್ಮ ಸದ್ಯದ ಜನ್ಮಲಾಭ ವಾಗುವದಕ್ಕೆ ಮುಂಚೆಯೇ ನಿರ್ಣಯಿಸಲಾಗಿದೆಯೆಂಬ ಬಹುಜನ ಸಮ್ಮತವಾದ ವಿಚಾರವೊಂದು; ಮತ್ತು ನಮಗೆ ತಿಳಿಯದ ಯಾವದೋ ಕಾರಣದಿಂದ ಈಶ್ವರನು ಹೇಗೆ ಚಿತ್ತೈಸುವನೋ ಹಾಗೆ ಆಗುವದೆಂಬ ವಿಚಾರವು ಇನ್ನೊಂದು.

ಪೂರ್ವಜನ್ಮ ವಿಚಾರವನ್ನು ಒಪ್ಪಲಾರದ ದೇಶಗಳಲ್ಲಿ ವಂಶದ ಪೂರ್ವಪುರುಷರ ಪುಣ್ಯ-ಪಾಪಗಳು ಏಳೇಳು ತಲೆಯ ವರೆಗೆ ಫಲಿಸುತ್ತ ಬರುವವೆಂಬ ವಿಚಾರವಿದೆ. ಏನಿದ್ದರೂ ಮನುಷ್ಯರ ಕೃತಿಗಳೇ ಅವರ ಸುಖ ದುಃಖಕ್ಕೆ ಕಾರಣವೆಂಬ ಮಾತು ಇವರಿಗೂ ಒಪ್ಪಿದ್ದು.

ಪೂರ್ವಜನ್ಮವನ್ನೂ ಪರಮಾತ್ಮನನ್ನೂ ಕೂಡಿಯೇ ಒಪ್ಪಲಾರದ ಆಧುನಿಕರಾದ ಅಜ್ಞೇಯವಾದಿಗಳು ಮತ್ತು ನಾಸ್ತಿಕ್ಯವಾದಿಗಳು ಸಹ ಸೃಷ್ಟಿಯಲ್ಲಿ ಪ್ರಗಾಢ ಪ್ರತಿಕ್ರಿಯೆಯ ಅಸ್ತಿತ್ವವನ್ನು ಮನಗಂಡು ಧೈರ್ಯದ ಆವಶ್ಯಕತೆಯನ್ನು ಬಹಳವಾಗಿ ಪ್ರತಿಪಾದಿಸುತ್ತಿರುವದನ್ನು ಸ್ಪೆನ್ಸರ್ ಮತ್ತು ಇಂಗರ್ಸಾಲ್ ಇವರ ಗ್ರಂಥಗಳಲ್ಲಿ ಕಾಣಬಹುದು. ಇಂಥ ಅವಿದಿತ ಪ್ರತಿಬಂಧಕ್ಕೇ ನಮ್ಮವರ ಮಾತಿನಲ್ಲಿ 'ಈಶನ ಚಿತ್ತ' ವೆಂದು ಹೇಳಬಹುದು.

ನಮ್ಮ ಕೃತಿಗಳಿಗೆ ಫಲವಾಗಿ ಬರತಕ್ಕ ಕರ್ಮಫಲವಾಗಲೀ, ನಮ್ಮ ಕಲ್ಪನೆಗೆ ನಿಲುಕಲಾರದಂಥ ಈಶ ಸಂಕಲ್ಪದಿಂದ ಬರುವ ದೈವ ಫಲವಾಗಲೀ ಎರಡೂ ಅದೃಶ್ಯದೊಳಗಿಂದಲೇ ಹಾದು ಬರುವದರಿಂದ ಒಟ್ಟಿಗೆ 'ಅದೃಷ್ಟ' ವೆಂಬ ಒಂದೇ ಮಾತು ಅವೆರಡಕ್ಕೂ ಸಮನ್ವಯಿಸುತ್ತದೆ.

ಅಲಕ್ಷ್ಯ ಮಾಡದೆ ಬಾಳುವೆಯನ್ನು ಬಹು ಕಾಲದ ವರೆಗೆ ನಡೆಯಿಸಿದ ಪ್ರತಿಯೊಬ್ಬನಿಗೂ ಅದೃಷ್ಟವೆಂಬುದರ ಅನುಭವವು ಬಾರದೆ ಹೋಗುವದಿಲ್ಲ. ಆದರೆ ಯಾರು ತಮ್ಮ ಬಾಳುವೆಯ ಹೊಣೆಗಾರಿಕೆಯನ್ನೆಲ್ಲ ಇನ್ನೊಬ್ಬರ ಮೇಲೆ ಹೊರಿಸಿ ತಾವು ಬರೇ ಉಂಡಾಡಿಗರಾಗಿ ಬದುಕುವರೋ ಅವರ ದುರದೃಷ್ಟಿಯಿಂದ ಅವರಿಗೆ ಇಂಥದಾವುದರ ಅಸ್ತಿತ್ವವೂ ಅನುಭವಕ್ಕೆ ಬಂದಿರುವುದರಿಂದ ಅವರ ವಿಚಾರ ಮತ್ತು ವಾಣಿಗಳಲ್ಲಿ ಅವಾಸ್ತವವಾದ ರೀತಿಯು ಕಂಡುಬರುತ್ತದೆ.

ಈ ಅದೃಷ್ಟವೆಂಬುದು ಯಾವಾಗಲೂ ಸ್ಥೂಲ ಜಗತ್ತಿನ (ಪ್ರಾಕೃತಿಕ) ನಿಯಮಗಳನ್ನು ಇದಿರಿಗೆ ಮಾಡಿಕೊಂಡೇ ಪ್ರಕಟವಾಗುತ್ತಿರುತ್ತದೆಯೆಂಬ ಮಾತನ್ನೂ ಕೂಡ ಚೆನ್ನಾಗಿ ಬಾಳುವೆ ಮಾಡಿದ ಪ್ರತಿಯೊಬ್ಬನು ಮನಗಂಡಿರುತ್ತಾನೆ. ಅದು ಹೇಗೆಂದರೆ—

ಬೇನೆ ಬೇಸರಿಕೆಗಳು ಬರುವಾಗಳೆಲ್ಲ ನಮ್ಮ ಕಡೆಯಿಂದ ತಪ್ಪದೆ ಆರೋಗ್ಯದ ನಿಯಮಗಳಿಗೆ ಒಂದಿಲ್ಲೊಂದು ವಿಧದಿಂದ ಭಂಗವು ಬಂದೇ ಬರುತ್ತಿರುವುದನ್ನು ಎಲ್ಲರೂ ಬಲ್ಲೆವು. ಹಾಗೆಯೇ ಯಾರೇ ಸಾಯುವಾಗಲೂ ಅಪಥ್ಯ, ಅಲಕ್ಷ್ಯ, ವಿಲಂಬ, ಅಚಾತುರ್ಯ, ಅಸಾವಧಾನತೆ ಮುಂತಾದವುಗಳಲ್ಲಿ ಒಂದಿಲ್ಲೊಂದು ಕಾರಣವು ಸಂಭವಿಸಿಯೇ ಇರುತ್ತದೆಯೆಂಬುದನ್ನೂ ಸರ್ವರೂ ಬಲ್ಲರು. ಹೀಗೆಂತಲೇ ಜನಸಾಮಾನ್ಯದಲ್ಲಿ ಒಂದು ಸಿದ್ಧಾಂತವೇ ಪ್ರಚಾರವಾಗಿ ಬಿಟ್ಟಿದೆ.

ಅದೇನೆಂದರೆ, "ದೇವರು ಯಾವುದನ್ನೂ ತನ್ನ ಮೈಮೇಲೆ ತೆಗೆದುಕೊಳ್ಳುವದಿಲ್ಲ. ಯಾವುದಕ್ಕೂ ಅವನು ನಮ್ಮ ನೆವವನ್ನೇ ಮಾಡುತ್ತಾನೆ."

ಈ 'ನೆವ' ಅಥವಾ 'ನಿಮಿತ್ತ' ಎಂಬ ಮಾತು ಭಗವದ್ಗೀತೆಯೊಳಗೆ ಒಂದು ದೊಡ್ಡ ಸಮಾಧಾನವಾಗಿ ಬಂದಿದೆ. ಅರ್ಜುನನಿಗೆ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ.— "ಭೀಷ್ಮಾದಿಗಳನ್ನು ನಾನು ಈ ಮೊದಲೇ ಸಂಹರಿಸಿದ್ದೇನೆ. ಇದೀಗ ನಿಮಿತ್ತದ ಸಲುವಾಗಿ ನಿನ್ನಿಂದ ಅವರ ಸಂಹಾರವಾಗಬೇಕಾಗಿದೆ."

ಒಟ್ಟಾರೆ ಅದೃಶ್ಯ ಅಥವಾ ಅದೃಷ್ಟವೆಂಬುದು ತೋರಿಕೆಯ ನಿಮಿತ್ತಗಳನ್ನು ಮುಂದೆ ಮಾಡಿಕೊಂಡೇ ತನ್ನ ಕಾರ್ಯವನ್ನು ಮಾಡುತ್ತಿರುವದೆಂಬ ಮಾತು ಹೀಗೆ ಜನಸಮ್ಮತವೂ ಶಾಸ್ತ್ರಸಮ್ಮತವೂ ಆಗಿದೆ.

ಶ್ರೀ ವಿದ್ಯಾರಣ್ಯರ ಮೊದಲನೆಯ ಸಿದ್ಧಾಂತದೊಳಗಿನ ಉತ್ತರಾರ್ಧದ ವಾಕ್ಯವನ್ನು ಕುರಿತು ಇನ್ನು ಆಲೋಚಿಸುವಾ. ಕೃಷಿ ವಾಣಿಜ್ಯ ಮೊದಲಾದವುಗಳಲ್ಲಿ ಪ್ರಯತ್ನವೇ ಅದೃಷ್ಟದ ದೃಶ್ಯ ಸಾಮಗ್ರಿಯೆಂಬುದು ನಮ್ಮ ದೈನಂದಿನ ಜೀವನದ ಅನುಭವಕ್ಕೆ ಯಾವಾಗಲೂ ಗೋಚರವೇ ಇರುತ್ತದೆ. ಹೇಗೆಂದರೆ— ದುಡಿದವನಿಗೆ ಫಲಪ್ರಾಪ್ತಿಯಾಗುವದನ್ನು ನಾವು ಸಾಮಾನ್ಯವಾಗಿ ಯಾವಾಗಲೂ ಮನಗಾಣುತ್ತಲೇ ಇರುತ್ತೇವೆ. ದುಡಿದರೂ ಕೂಡ ಕಾರ್ಯಸಿದ್ಧಿಯಿಲ್ಲದವರೂ, ದುಡಿಯದೆಯೇ ಕಾರ್ಯಸಿದ್ಧಿಯನ್ನು ಪಡೆದವರೂ ನೂರಕ್ಕೆ ಏಕೆ ಸಾವಿರಕ್ಕೆ ಎಷ್ಟರಂತೆ ಸಿಗುವರು? ಎಲ್ಲಿಗೋ ಒಬ್ಬಿಬ್ಬರು ಮಾತ್ರ.

ಅಷ್ಟೇಕೆ? ನಮ್ಮ ಪ್ರತಿಯೊಬ್ಬರ ಜೀವನದಲ್ಲೇ ನೋಡಿದರೆ ನಾವು ನಿಶ್ಚಯಿಸಿದ ಸಣ್ಣಪುಟ್ಟ ಮಾತುಗಳಲ್ಲಿ ನೂರಕ್ಕೆ ಎಷ್ಟರಂತೆ ಸಾಧಿಸಿಲ್ಲ? ಎಲ್ಲಿಯೋ ಒಂದೆರಡನ್ನು ಬಿಟ್ಟರೆ ಉಳಿದವುಗಳೆಲ್ಲಾ

ಬಹುಶಃ ಸಾಧಿಸಿಯೇ ಇರುತ್ತವೆ. ದೊಡ್ಡ ಮಾತುಗಳಲ್ಲಿ ನಮಗೆ ಸಾಧಿಸಿರಲಾರದವುಗಳನ್ನು ಕುರಿತು ಆಲೋಚಿಸಿದರೆ ಎಷ್ಟೋ ಸಾರೆ ನಾವು ನಮ್ಮ ಅಳವನ್ನು ಮೀರಿ ವಿಚಾರಮಾಡಿದ್ದೇ ಕಾರಣವಾಯಿತೆಂದು ಕಂಡು ಬರುವದು. ಒಟ್ಟಾರೆ ಜಗತ್ತಿನಲ್ಲಿ ಮಾನವನ ಪ್ರಯತ್ನವು ನೂರಕ್ಕೆ ತೊಂಬತ್ತಕ್ಕಿಂತ ಹೆಚ್ಚಿಗೇ ಸಫಲವಾಗುತ್ತಿರುವುದು ಕಂಡು ಬರುತ್ತದೆ. ಪ್ರಯತ್ನವು ಭೂಲೋಕದಲ್ಲಿ ಒಂದು ಅನಿವಾರ್ಯವಾದ ಮಾತಾಗಿದೆ. ಅದನ್ನು ಮುಂದೆ ಮಾಡಿಕೊಂಡೇ ಮಾನವನ ಸುದೈವವು ಫಲಿಸುತ್ತಿರುತ್ತದೆ. ಪ್ರಯತ್ನವನ್ನು ತಿರಸ್ಕರಿಸುವವನ ದುರ್ದೈವವು ಅವನ ಬೆನ್ನಹಿಂದೆಯೇ ಬಂದು ನಿಂತಿದೆಯೆಂದು ಖಂಡಿತವಾಗಿ ತಿಳಿದುಕೊಳ್ಳಬೇಕು.

## § ( ೩ )

ಪ್ರಯತ್ನದಲ್ಲಿ ನಿಶ್ಚಿತಫಲವಿರುವ ಮಾತು ಸಾವಿರದಲ್ಲ ಒಂಬತ್ತುನೂರಾ ತೊಂಬತ್ತರಷ್ಟು ಸತ್ಯವಾಗಿದ್ದರೂ ಹತ್ತರಷ್ಟಾದರೂ ವಿಪರೀತ ಫಲವುಂಟಾಗುವುದೂ ನಮ್ಮ ಅನುಭವದ ಹೊರಗಿನ ಮಾತೇನು ಅಲ್ಲ. ಇನ್ನು ಎಲ್ಲಿಗೋ ಹಲಕೆಲವರ ಅನುಭವದಲ್ಲಿ ವೈಪರೀತ್ಯದ ಅನುಭವವೇ ಸಾವಿರಕ್ಕೆ ಒಂಬತ್ತುನೂರಾ ತೊಂಬತ್ತರಷ್ಟು ಬರುವುದು ವಿರಳವಾಗಿಯಾದರೂ ಕಂಡುಬರುತ್ತಿರುವುದೂ ಉಂಟು. ಒಮ್ಮೊಮ್ಮೆ ಪ್ರತಿಯೊಬ್ಬರ ಜೀವನದಲ್ಲಿಯೂ ಕೆಲವೊಂದು ವರುಷಗಳು ಇಂಥ ಮಹಾ ವಿಪರೀತಾನುಭವಗಳ ಆಗರವಾಗಿರುವುದರ ಪ್ರತೀತಿಯೂ ಬಹುಜನಕ್ಕಿದೆ. ಆಗ "ನಮಗೆ ಕಾಲಬಲವೇ ಸರಿಯಾಗಿ ಇಲ್ಲ" ವೆಂದು ಆಡಿಕೊಳ್ಳುತ್ತಿರುತ್ತೇವೆ. ಇಂಥ ಸಂಗತಿಗಳಿಂದಲೇ ಮನುಷ್ಯನಿಗೆ ಪ್ರಾರಬ್ಧವು ಸತ್ಯವೆಂದು ಅನಿಸುವದು. ಇಂಥ ಕಾಲವು ಸಮಸ್ತ ಜನತೆಗೆ ಬಂದರೆ ಆಗ ಹೊರ ಕಾರಣಗಳೂ ಉದ್ಭೂತವಾಗದೆ ಬಿಟ್ಟಿರುತ್ತಿರುವದಿಲ್ಲ. ಬರ,

ದುಷ್ಕಾಲ, ಯುದ್ಧ, ಪಿಡುಗು, ಅರಾಜಕತೆ ಮುಂತಾದವುಗಳಲ್ಲಿ ಒಂದಿಲ್ಲೊಂದು ತಲೆಯೆತ್ತಿಕೊಂಡೇ ಇರುತ್ತದೆ. ವ್ಯಕ್ತಿಗೆ ಇಂಥ ಕಾಲ ಬಂದಾಗ ಅನಾವಧಾನತೆ, ಅಲ್ಪವಿಚಾರ, ಅವಿವೇಕ, ಕಲಹ ಮುಂತಾದ ಕಾರಣಗಳು ಸ್ಪಷ್ಟವಾಗಿ ಕಾಣಿಸುತ್ತಿರುತ್ತವೆ. ಪ್ರತಿಕೂಲವಾದ ಅದೃಷ್ಟವು ಏನಾದರೂ ಒಂದು ಘೋರರೂಪವನ್ನು ತೆಗೆದುಕೊಂಡೇ ಬರುತ್ತದೆ. ಇದೆಲ್ಲ ಮಾತು ಪ್ರಬಲತರವಾದ ಪ್ರಾರಬ್ಧಕ್ಕೆ ಸಂಬಂಧಿಸಿದುದಾಯಿತು.

ಇನ್ನು ಸಾಮಾನ್ಯವಾಗಿ ಯಾವಾಗಲೂ ನಾವು ಪ್ರಯತ್ನಿಸುತ್ತಿರುವಾಗ ಒಂದಿಲ್ಲೊಂದು ಎಡರುಗಳು ಮೈದೋರುತ್ತಲೇ ಇರುತ್ತಿರುತ್ತವೆ. ಇದಕ್ಕೆ ಎರಡು ಕಾರಣಗಳಿರುತ್ತವೆ. ನಮ್ಮ ಪ್ರಯತ್ನವನ್ನು ಪ್ರಯೋಗಿಸುವುದಕ್ಕೆ ಸಾಕಷ್ಟು ಕೌಶಲ್ಯವು ಇನ್ನೂ ನಮಗೆ ಬಂದಿರುವದಿಲ್ಲ; ಅಥವಾ ಮಾನವ ಬುದ್ಧಿಗೇ ಹೊಳೆಯದ ಎಷ್ಟೋ ಸೃಷ್ಟಿನಿಯಮಗಳನ್ನು ಆಗ ನಾವು ದಾಟಿ ಹೋಗಬೇಕಾಗಿರುವ ಸಂಭವವಿರುವದುಂಟು. ವಿದ್ಯುತ್ತರಂಗಗಳೂ ಈಥರ್ ಎಂಬ ಗೂಢ ವಸ್ತುವಿನ ತರಂಗಗಳೂ ಮನುಷ್ಯನಿಗೆ ಗೊತ್ತಾಗುವದಕ್ಕಿಂತ ಮೊದಲು ಯಾವನಾದರೊಬ್ಬನ ಕೆಲಸವು ಆ ತರಂಗಗಳಿಂದ ಕೆಡುತ್ತಿದ್ದರೆ ಆತನು ಆಗ ಏನೆಂದು ಭಾವಿಸಬೇಕು.? ಸುಮ್ಮಸುಮ್ಮನೆ ತನಗೆ ಗೊತ್ತಿದ್ದ ಮಟ್ಟಿಗಿನ ಮಾತುಗಳಲ್ಲೇ ಆ ಎಡರಿನ ಕಾರಣಗಳನ್ನು ಹುಡುಕಾಡುತ್ತ ದಣಿಯುವನು.

ವಿಶ್ವವು ಅನಂತವಾಗಿರುವಂತೆ ಅದರ ಪ್ರತಿಯೊಂದು ಮಾತು ಕೊನೆ ನಿಲುಕಲಾರದಷ್ಟು ಅನಂತವಾಗಿರುವದರಿಂದ ಯಾವಾಗಲೂ ಮಾನುಷ ಪ್ರಯತ್ನವು ಹೊಸಹೊಸ ಅಕಲ್ಪಿತ ಪ್ರತಿಬಂಧಕ ಕಾರಣಗಳಿಂದ ಹೊಯ್ದಾಡುತ್ತಲಿರುವದು ನಿಸರ್ಗಸಿದ್ಧವೇ ಆಗಿದೆ.

ಒಟ್ಟಾರೆ ಇದೇ ಮಾತೇ ಶ್ರೀ ವಿದ್ಯಾರಣ್ಯರ ಎರಡನೆಯ ಸಿದ್ಧಾಂತದಲ್ಲಿ ಅಡಕವಾಗಿದೆ.

## § (೪)

ಇನ್ನು ಮೂರನೆಯ ಸಿದ್ಧಾಂತವನ್ನು ಕುರಿತು ಆಲೋಚಿಸುವಾ. ಏನೇ ಆದರೂ ಮನುಷ್ಯನು ಸಾಯುವದಕ್ಕೂ ಸೋಲುವದಕ್ಕೂ ಒಲ್ಲನು. ಏನೇ ಮಾಡಿಯಾದರೂ ಆತನು ಬಾಳಬೇಕೆನ್ನುತ್ತಾನೆ. ಬದುಕುವುದೇ ಆದರೆ ಆತನು ತನ್ನ ಎಡರುಗಳನ್ನು ಹೇಗಾದರೂ ನಿವಾರಿಸಿಕೊಳ್ಳಲೇ ಬೇಕು. ಪ್ರತಿಬಂಧಕ ಕಾರಣಗಳಿಗಿಂತ ಹೆಚ್ಚಿನ ಪ್ರಬಲತರವಾದ ಉಪಾಯುಗಳನ್ನು ಹುಡುಕಿ ಪ್ರತಿಬಂಧಕ್ಕೆ ವಿರುದ್ಧವಾಗಿ ಪ್ರಯೋಗಿಸಿಕೊಳ್ಳದೆ ಅವನಿಗೆ ನಿರ್ವಾಹವೇ ಉಳಿಯುವದಿಲ್ಲ. ಇಲ್ಲಿಯೆ ಶಾಸ್ತ್ರದ ಆರಂಭ. ಹೀಗಾಗಿ ಶಾಸ್ತ್ರವು ಹುಟ್ಟುತ್ತದೆ.

ಕಾಳಿದಾಸನ ಕಾವ್ಯಗಳಲ್ಲಿ— ತಡೆಯುಂಟಾದರೇನೇ ಹೊಳೆಹಳ್ಳಗಳ ಅಬ್ಬರವು ಹೆಚ್ಚುವದೆಂದೂ, ಕೆಣಕಿದರೇನೇ ನಾಗವು ಹೆಡೆಯನ್ನೆತ್ತರಿಸುವದೆಂಮೂ ವರ್ಣನೆಯು ಬರುತ್ತದೆ. ಕ್ಷೋಭದಿಂದಲೇ ಮಾನವರ ಅಂತಸ್ಸತ್ವವು ಪ್ರಕಟವಾಗುವದೆಂದು ಆತನ ಅಭಿಪ್ರಾಯ.

ಸರ್ ಜಗದೀಶಚಂದ್ರ ಬೋಸರ ಜೀವನವು ಇದಕ್ಕೆ ಪರಮ ದೃಷ್ಟಾಂತ. ಅವರಿಗಿರುವಷ್ಟು ಪ್ರತಿಕೂಲ ದೈವವನ್ನು ಇನ್ನೆಲ್ಲಿಯೂ ಕಾಣಲಿಕ್ಕೆ ಶಕ್ಯವಿಲ್ಲವೆಂದು ಹೇಳಬಹುದು. ಅವರ ತತ್ವಗಳ ನೆತ್ತಿಯನ್ನು ಕುಕ್ಕಿ ನೆಲಸಮ ಮಾಡುವುದಕ್ಕೂ, ಇವರ ಶೋಧಗಳನ್ನು ತಮ್ಮವೆಂದು ಪ್ರಚಾರಗೊಳಿಸಿ, ಇವರನ್ನು ಪಾತಾಳಕ್ಕಿಳಿಸುವುದಕ್ಕೂ ಜಗತ್ತಿನಲ್ಲಿ ಎಷ್ಟು ಜನರು ಎಷ್ಟೆಷ್ಟು ಪ್ರಯತ್ನಿಸಿದರೆಂಬುದರ ಕಥೆಯನ್ನು ಸ್ವತಃ ಅವರೇ ಕಲ್ಲು ಕರಗುವಂತೆ ಬಣ್ಣಿಸಿದ್ದುಂಟು. ಆದರೂ ಅವರ ಮೇರು ಸಮಾನವಾದ ಅಚಲ ಧೈರ್ಯವು ದಿನದಿನಕ್ಕೆ ಹೊಸ ಹೊಸ ಅಭೂತ ಪೂರ್ವವಾದ ಯಂತ್ರಗಳನ್ನೂ ಶೋಧಗಳನ್ನೂ ರಾಶಿ ರಾಶಿಯಾಗಿ ಪ್ರಕಟಿಸಿ ವಿರೋಧಿಗಳ ಕಣ್ಣನ್ನು ಕುಕ್ಕಿಸುತ್ತಲಿದೆ.

ಪ್ರಕ್ಷೋಭದಿಂದಲೇ ಪ್ರತಾಪವು ಪ್ರಕಟವಾಗುವುದೆಂದು ಸಾರಿದ ಕಾಳಿದಾಸನ ಉಕ್ತಿಯು ಇವರಲ್ಲಿ ಮೂರ್ತಿಮಂತವಾಗಿ ಪ್ರತಿಫಲಿಸಿದೆ.

ಸಾಮಾನ್ಯರಿಗೆ ಅರಿಯದ ಮಾತುಗಳು ಶಾಸ್ತ್ರದಲ್ಲಿ ಇರುತ್ತವೆ. ಇದರ ಅರ್ಥವೇನೆಂದರೆ ಅಸಾಧಾರಣವಾದ ಪ್ರತಿಬಂಧಗಳ ಬಲೆಯಲ್ಲಿ ಸಿಕ್ಕು ಅವುಗಳೊಳಗಿಂದೆಲ್ಲ ಹೇಗೆ ಪಾರಾಗಬೇಕೆಂಬ ಉಪಾಯಗಳನ್ನು ಹುಡುಕಿದವರೇ ಶಾಸ್ತ್ರಗಳನ್ನು ನಿರ್ಮಿಸಿದವರು. ಅಂಥ ಮಾತುಗಳ ನಿಧಿಯೇ ಶಾಸ್ತ್ರ. ಹಿಂದಕ್ಕೆ ಹುಟ್ಟಿದವುಗಳು ಮಾತ್ರವೇ ಶಾಸ್ತ್ರವೆಂತಲ್ಲ. ಅವು ಇಂದೂ ಹುಟ್ಟಬಲ್ಲವು; ಮುಂದೂ ಹುಟ್ಟಬಲ್ಲವು. ಋಷಿಗಳಿಗೆ ಭೂತಕಾಲವೊಂದೇ ಏನೂ ಸೀಮೆ ಹಾಕಿಕೊಟ್ಟಿಲ್ಲ. ಹೊಸ ಹೊಸ ಕಾಲದ ಪ್ರಬಲತರವಾದ ಹೊಸ ಹೊಸ ತೊಡಕುಗಳನ್ನು ಬಿಡಿಸಲಿಕ್ಕೆ ಅಂಥ ಎಡರುಗಳಿಗೀಡಾದ ಋಷಿ ಸದೃಶ ವ್ಯಕ್ತಿಗಳು ಕಾಲಕಾಲಕ್ಕೆ ಉದಿಸಲೇ ಬೇಕು. ಅಂದರೇನೇ ಕಾಲಪಥವು ಸುಗಮವಾಗುತ್ತದೆ.

ಏನೇ ಇರಲಿ, ಸಾಮಾನ್ಯವಾದ ಪ್ರಯತ್ನದ ರಾಜ್ಯವು ಮುಗಿದ ಬಳಿಕ ಶಾಸ್ತ್ರಶುದ್ಧವಾದ ಪ್ರಯತ್ನಗಳ ಸೀಮೆಯು ಹತ್ತುತ್ತದೆ. ಮೊದಲಿನ ಸಾಧಾರಣ ಪ್ರಯತ್ನಗಳು ಹೇಗೆ ಸಾಧಾರಣವಾಗಿ ನೂರಕ್ಕೆ ತೊಂಬತ್ತರಷ್ಟಾದರೂ ಹೇಗೆ ಫಲಕಾರಿಯಾಗಿರುವವೋ ಹಾಗೆಯೇ ಈ ಶಾಸ್ತ್ರ ಶುದ್ಧ ಪ್ರಯತ್ನಗಳೂ ಅಘಟಿತ ಪ್ರತಿಬಂಧಗಳನ್ನು ನೀಗಿಸುವದರಲ್ಲಿ ಅಷ್ಟೇ ಫಲಕಾರಿಯಾಗಿರುತ್ತವೆ.

§ ( ೫ )

ಇನ್ನು ನಿರಂತರ ಪ್ರಯತ್ನವೆಂಬ ನಾಲ್ಕನೆಯ ಸಿದ್ಧಾಂತದ ಕಡೆಗೆ ಹೊರಳುವಾ. ಎಷ್ಟು ಮುಂದೆ ಹೋದರೆ ಅಷ್ಟು ಕಂಟಕ; ಮತ್ತು ಅಷ್ಟೇ ಹೊಸ ಹೊಸ ತತ್ವಗಳ ಸಂಶೋಧನ. ಸಾಧಾರಣ ಪ್ರಯತ್ನಗಳಿಗೆ

ಅಸಾಧಾರಣ ಪ್ರತಿಬಂಧಗಳು. ಹಾಗಲು ರಾಷ್ಟ್ರೀಯ ಪ್ರಯತ್ನಗಳ ಶೋಧವಾಯಿತು. ಇನ್ನು ಇಂಥ ಅಸಾಧಾರಣ ಪ್ರಯತ್ನಗಳೂ ಎಲ್ಲಿಗೋ ಒಂದೊಂದು ನಿಷ್ಫಲವಾಗಹತ್ತಿದರೆ, ಅವರಲ್ಲಿಯೂ ಒಬ್ಬೊಬ್ಬರ ಜೀವನದಲ್ಲಿ ಅಂಥ ನಿಷ್ಫಲತೆಯ ನೋವಿಯು ತೀರ ಆಳತೆಗೆಟ್ಟರೆ ಆಗ ಅದಕ್ಕಿಂತ ಮುಂದಿನದೊಂದು ಹೊಸ ರಾಜ್ಯದ ಶೋಧವು ಆಗಲೇ ಬೇಕಲ್ಲವೇ ? ಅದೇ “ದೀರ್ಘ ನೈರಂತರ್ಯ”ವೆಂಬುದು.

ಸತತ-ಯುಕ್ತರಿಗೆ ಬುದ್ಧಿಯೋಗವನ್ನು ಕೊಡುವೆನೆಂದು ಭಗವದ್ಗೀತೆಯು ಹೇಳುವದು. ದೀರ್ಘ ನಿರಂತರವಾದ ಅಭ್ಯಾಸದ ಆವಶ್ಯಕತೆಯನ್ನು ಯೋಗಶಾಸ್ತ್ರವು ಪ್ರತಿಪಾದಿಸುವದು.

ಸ್ಕಾಟಲಂಡಿನ ರಾಜನೊಬ್ಬನು ಶತ್ರುಗಳೊಡನೆ ಘನಘೋರ ಕಾಳಗವನ್ನೆಸಗಿಯೂ ಗೆಲೆಯುವ ಆಸೆಯು ಕಾಣದಾಗಲು ಆತನೊಂದು ಗಿರಿಗುಹೆಯಲ್ಲಿ ಸೇರಿಕೊಂಡನೆಂದೂ ಅಲ್ಲಿ ಒಂದು ಜೇಡ ಹುಳವು ತನ್ನ ಬಲೆಯನ್ನು ನಿರ್ಮಿಸತೊಡಗಿ ಐದಾರು ಸಾರೆ ಕಡಕೊಂಡು ಬಿದ್ದರೂ ಎದೆಗುಂದದೆ ಕೊನೆಗೆ ಏಳನೆಯ ಸಾರೆ ತನ್ನ ಕೆಲಸವನ್ನು ಕೊನೆಗಾಣಿಸಿತೆಂದೂ, ಅದನ್ನು ನೋಡಿ ಆ ರಾಜನು ಉತ್ಸಾಹಭರಿತನಾಗಿ ಎಷ್ಟು ಸಾರೆ ಹತಾಶನಾದರೂ ಪ್ರಯತ್ನವನ್ನು ಬಿಡುವುದು ಬೇಡವೆಂದು ನಿರ್ಧರಿಸಿಕೊಂಡು ಗುಹೆಯಿಂದ ಹೊರಬಿದ್ದು ಪುನಃ ಪುನಃ ಯುದ್ಧಮಾಡಿ ಗೆದ್ದನೆಂಬ ಕಥೆಯು ಸಾಲೆಯ ಮಕ್ಕಳ ಪುಸ್ತಕದಲ್ಲಿ ಬಂದದ್ದರಿಂದ ಬಹು ಜನರಿಗೆ ಅದೊಂದು ಹುಡುಗರಿಗಾಗಿ ಹೇಳಿದ ಅಜ್ಜಿಯ ಕಥೆಯೆಂದು ತೋರುತ್ತಲಿದೆ. ಆದರೆ ಅದು ಕಟ್ಟು ಕಥೆಯಲ್ಲ. ಚಿಕ್ಕಚಿಕ್ಕ ಹುಳಗಳ ದೈನಂದಿನ ಜೀವನವನ್ನು ಸೂಕ್ಷ್ಮವಾಗಿ ನಿರೀಕ್ಷಿಸತೊಡಗಿದರೆ ಈ ಮಾತಿನ ಸತ್ಯತೆಯನ್ನು ಪ್ರತಿದಿನವೂ ಹೆಜ್ಜೆಹೆಜ್ಜೆಗೆ ಕಾಣಬಹುದು.

ದೈವವು ಎಷ್ಟು ಪ್ರತಿಕೂಲಿಸಿದರೂ ಯಾವನು ಮತ್ತೆ ಮತ್ತೆಯೂ ಶಾಸ್ತ್ರ ಶುದ್ಧವಾದ ಅಂದರೆ ಸೂಕ್ಷ್ಮವಿವೇಕದಿಂದ ನಿರ್ಣಯಿಸಿದ ಪ್ರಯತ್ನವನ್ನು ಹಾಗೆಯೇ ಮುಂದುವರಿಸುವನೋ ಅಂಥವನೊಳಗಿನ ದೈವೀ ತೇಜವೇ ಪ್ರಕಟವಾಗಿ ಕಾರ್ಯಸಿದ್ಧಿಗೆ ಸುಗಮವಾದ ದಾರಿಯನ್ನು ಮಾಡುವದೆಂಬುದರಲ್ಲಿ ಸಂದೇಹವಿಲ್ಲ. ಈ ತೇಜಕ್ಕೇ ಭಗವದ್ಗೀತೆಯ ಹತ್ತನೆಯ ಅಧ್ಯಾಯದಲ್ಲಿ ಭಗವತ್ತೇಜದ ಅಂಶವೆಂದು ವರ್ಣಿಸಲಾಗಿದೆ.

## § (೬)

ಇಂಥ ಅಖೇದದ ಪ್ರತಿಫಲವು ಈಶಾನುಗ್ರಹವೆಂಬ ಕೊನೆಯ ಐದನೆಯ ಸಿದ್ಧಾಂತಕ್ಕೆ ಇನ್ನು ಬರುವಾ. ಈಶಾನುಗ್ರಹವೆಂದರೆ ಏನು ? ಲೌಕಿಕ ಬುದ್ಧಿಗೆ ಪ್ರಕಟವಾಗುವ ಅದರ ಸ್ವರೂಪವೆಂದರೆ ಅಘಟಿತ ಘಟನೆ. ಯಾವುದಕ್ಕೆ ಪುರಾತನರು—ಮೂಕನನ್ನು ಮಾತಾಡಿಸುವ, ಕುಂಟನನ್ನು ಗಿರಿದರಿ ದಾಟಿಸುವ ಮಹಾಕೃಪೆಯೆಂದು ವರ್ಣಿಸಿರುವರೋ ಅದೇ ಇದು.

ಶ್ರೀ ಬಸವಣ್ಣನವರದೊಂದು ವಚನವನ್ನಿಲ್ಲಿ ಕೇಳಿರಿ—"ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಎರಡಾಳಿನ ಭಾಷೆಯ ಕೇಳಿರಯ್ಯಾ; ಕೊಲುವೆನೆಂಬುದು ದೇವನ ಭಾಷೆ, ಗೆಲುವೆನೆಂಬುದು ಭಕ್ತನ ಭಾಷೆ; ಸತ್ಯವೆಂಬ ಕೂರಲಗನೆ ತಳೆದು ನಿಮ್ಮ ಶರಣರು ಗೆದ್ದರು ಕಾಣಾ ಕೂಡಲ ಸಂಗಮದೇವಾ !!! "

ಬೇಕು ಇಂಥ ಪಂಥಗಾರರು ಬೇಕು; ಬೇಕು ಇಂಥ ಶಾಸ್ತ್ರ ಶುದ್ಧವಾದ ಸತ್ಯವೆಂಬ ಖಡ್ಗವನ್ನು ಹಿಡಿದು ದೇವನ ಮೇಲೇರಿ

ಹೋಗುವ ಧುರಂಧರರು ಬೇಕು. ದೇವಾಧಿ ದೇವನು ಇಂಥವರಲ್ಲದೆ ಇನ್ನಾರಿಗೆ ಒಲೆಯುವನು ???

ಇಲ್ಲಿ ಯಾರು ಘನ ? ಯಾರು ಕ್ಷೀಣ ? ಒಬ್ಬನು ದೇವ; ಇನ್ನೊಬ್ಬನು ದೇವಾಂಶ. ಒಬ್ಬನು ಬ್ರಹ್ಮಾಂಡದ ದೇವ; ಇನ್ನೊಬ್ಬನು ಪಿಂಡಾಂಡದ ದೇವ. ದೇವ-ದೇವಾಂಶರ ಈ ಗೆಲವು ಜಗತ್ತಿನಲ್ಲಿ ಕಾಲವು ಬದಲಾಗುತ್ತಿರುವಾಗ ಒಮ್ಮೊಮ್ಮೆ ಮಾತ್ರ ಹಣಿಕೆ ಹಾಕಬಹುದು. ಅದೇನು ಬೀದಿಯ ಬೆಳೆಯೆ ?

ಶ್ರೀ ವಿದ್ಯಾರಣ್ಯರು ಹೇಳಿದ ಹಕ್ಕಿಯ ಕಥೆಯು ಕಟ್ಟುಕಥೆಯೇ ಅಗಿದ್ದರೂ ಅದರೊಳಗಿನ ತತ್ವವು ಶಬ್ದಶಃ ಸತ್ಯವಾಗಿದೆಯೆಂಬುದನ್ನು ಯಾರು ನಂಬಬೇಕು ? ಯಾಕೆಂದರೆ ಅಂಥ ಸಂಗತಿಗಳೇನು ದಿನಾಲು ಬೇಕುಬೇಕಾದಲ್ಲಿ ನಡೆಯುವವೇ ? ಮಾನವನೊಳಗಿನ ದೈವೀತೇಜವು ಪ್ರಕಟವಾಗಿರುವೆಡೆಯಲ್ಲಿ ಮಾತ್ರ ಕಂಡು ಬರುವಂತಹದು.

ಸಮುದ್ರವೆತ್ತ ? ಕ್ಷುದ್ರಪಕ್ಷಿಯೆತ್ತ ? ಪ್ರಯತ್ನವೆತ್ತ ? ಕೃಪೆಯೆತ್ತ ? ಇದೆಲ್ಲ ಶುದ್ಧ ಬೂಟಾಟಿಕೆಯೆಂದು ಅನಿಸುವದರಲ್ಲಿ ಸಂದೇಹವಿಲ್ಲ. ಆದರೆ ಇಂಥ ಅನುಭವಗಳನ್ನು ಹೇರಳವಾಗಿ ಕಂಡುಂಡ ಇಂದಿನ ಆಧುನಿಕ ಋಷಿಸಮಾನರೊಬ್ಬರ ಇಂತಹದೇ ಒಂದು ಕಥೆಯನ್ನು-ಅದೇಕೆ, ವಿದ್ಯಾರಣ್ಯರ ಆ ಕಥೆಯದೇ ಪುನರಾವತಾರವೆನ್ನುವಂಥ ಒಂದು ಅದ್ಭುತ ಸನ್ನಿವೇಶವನ್ನು ತೋರಿಸಿಕೊಟ್ಟರೆ ಆಗ ಏನೆನ್ನುವಿರಿ ?

ವಿಜ್ಞಾನಾಚಾರ್ಯ ಶ್ರೀ ಜಗದೀಶಚಂದ್ರ ಬೋಸರ ಜೀವನದಲ್ಲಿ ಅಂಥದೊಂದು ಅದ್ಭುತವು ನಡೆದಿರುವುದಾಗಿ ಸ್ವತಃ ಅವರೇ ತಮ್ಮದೊಂದು ಪುಸ್ತಕದಲ್ಲಿ ಸ್ವಹಸ್ತದಿಂದ ಬರೆದಿದ್ದಾರೆ. ಅದನ್ನಿಲ್ಲಿ ಕೇಳಿರಿ:—

"ಕೆಲವು ವರುಷಗಳ ಹಿಂದೆ ಒಂದು ಅತ್ಯಾಶ್ಚರ್ಯಕರವಾದ ಒಂದು ಭೌತಿಕ ಕಾಂಡವು ಜರುಗಿತು. ಆಗ ಕಡುತರವಾದ ಬೇನೆ ಬೇಸರಿಕೆಗಳಿಂದ ನನ್ನ ದೇಹ ಪ್ರಕೃತಿಯು ಬಹಳೇ ಅಶಕ್ತವಾದ್ದ ರಿಂದ ಡಾಕ್ಟರರ ಅಭಿಪ್ರಾಯದಂತೆ ದ್ವೀಪಾಂತರ ಪ್ರವಾಸವನ್ನು ನಾನು ನಿಶ್ಚಯಿಸಿದೆನು. ಆಗ ನನ್ನ ಚಿಕ್ಕಮಗಳೊಬ್ಬಳು ದ್ವೀಪವೆಂದರೇ-ನೆಂಬುದನ್ನು ತಿಳಿದುಕೊಳ್ಳುವುದಕ್ಕೆ ನನ್ನ ತಲೆಯ ಮೇಲಿನ ಕೂದಲು ಗಳನ್ನು ನೋಡಿ— (ಬೇನೆಯಿಂದ ಕೂದಲುಗಳು ಉದುರಿ ಹೋಗಿ ಅಲ್ಲಲ್ಲಿ ಒಂದೆರಡು ಗುಂಪುಗಳು ಮಾತ್ರ ಉಳಿದದ್ದನ್ನು ನೋಡಿ)— ಅಪ್ಪಾ, ನಿಮ್ಮ ತಲೆಯ ಮೇಲೆಯೇ ಒಂದೆರಡು ದ್ವೀಪಗಳಿವೆಯಲ್ಲವೇ? ಎಂದು ಪರಿಹಾಸಮಾಡಿ— "ಅಪ್ಪಾ, ಸಮುದ್ರಪರ್ಯಟನದಲ್ಲಿ ಇದ್ದ ಬಿದ್ದ ಈ ಒಂದರ್ಧ ದ್ವೀಪವೂ ಸಹ ಮುಳುಗಿ ಹೋದರೆ ಏನು ಮಾಡುವುದು? ಕುಂತಲ ಕೇಸರೀ ತೈಲದ ಬಾಟಲಿಯೊಂದನ್ನು ನಿಮ್ಮ ಪೆಟ್ಟಿಗೆಯಲ್ಲಿರಿಸುವೆನು. ಅದರ ಸಹಾಯದಿಂದ ಕಂಟಕದಿಂದ ದ್ವೀಪ ವನ್ನು ಉಳಿಸಿಕೊಳ್ಳಿರಿ" ಎಂದು ಹೇಳಿ ಹಾಗೆ ಮಾಡಿದಳು. ಆಯಿತು, ನಮ್ಮ ಹಡಗು ಒಂದು ದಿನ ಹೊರಟಿತು. ಸಮುದ್ರದಲ್ಲಿ ಒಂದೆರಡು ದಿನ ನಡೆದ ಮೇಲೆ ಯಾವ ಕಡೆಗೂ ಭೂಪ್ರದೇಶವು ಸಮೀಪವಲ್ಲ ಲ್ಲದಾಗ ಒಮ್ಮೆಲೆ ಪವನವೆಲ್ಲ ಗಕ್ಕನೆ ಸ್ತಬ್ಧವಾಗಿ ಸಮುದ್ರ ಜಲವೆಲ್ಲ ಸೀಸಿನಂತೆ ಕಪ್ಪಾಯಿತು. ಮುಗಿಲಲ್ಲಿ ಕಾರ್ಮೋಡ ಕವಿದು ಕತ್ತಲೆಬಿತ್ತು. ಆಗ ಕಪ್ತಾನನ ಮೋರೆಯು ಕಂದೊತ್ತಿತು. ಅವನು ನಮ್ಮೆಲ್ಲರಿಗೆ ಆಗ ಹೇಳಿದ್ದೇನೆಂದರೆ—"ಮಹಾ ಭಯಂಕರವಾದ ಪ್ರಳಯ ರೌದ್ರವು ಇತ್ತ ಕಡೆಗೆ ಹೊರಟಿದೆ. ಆ ಝುಂಝಾವಾತದಲ್ಲಿ ನಮ್ಮ ಹಡಗು ಉಳಿ ಯುವುದು ಈಶ್ವರನ ಕೈಯ್ಯಲ್ಲಿದೆ !!!" ಆಗ ಎಲ್ಲರ ಎದೆಯೊಡೆದು ಹೋಯಿತು. ಅಷ್ಟರಲ್ಲಿ ಮಹಾ ರೌದ್ರವು ಸಮೀಪಕ್ಕೇ ಬಂತು. ಹಡಗವು ಡೋಲಾಯಮಾನವಾಯಿತು. ಆಗ ನನಗೆ ಮನೆಯಿಂದ ಹೊರಡುವಾಗ

ನನ್ನ ಪುಟ್ಟ ಮಗಳು ಆಡಿದ ಮಾತುಗಳು ನೆನಪಾದವು. "ಇದ್ದ ಬಿದ್ದ ದ್ವೀಪವೊಂದು ಸಮುದ್ರದಲ್ಲಿ ಮುಳುಗಿದರೆ ಏನು ಮಾಡುವುದು?!" ಹೌದು ನನ್ನ ಜೀವನದ್ವೀಪದ ಇತಿ ಶ್ರೀಯೇ ಬಳಿಸಾರಿತು! "ಈ ಕುಂತಲ ಕೇಸರೀ ತೈಲದಿಂದ ಆ ಕಂಟಕವನ್ನು ನೀಗಿರಿ" ಎಂದು ಹೇಳಿದ ಮಾತು ನೆನಪಾಗುತ್ತಲೇ ತುಸು ದಿವಸಗಳ ಹಿಂದೆಯೇ ಪದಾರ್ಥವಿಜ್ಞಾನ ಶಾಸ್ತ್ರದ ಪತ್ರಿಕೆಯೊಂದರಲ್ಲಿ ಓದಿದ ಮಹತ್ವದ ಮಾತೊಂದು ತಕ್ಕ ಸಮಯಕ್ಕೆ ಸ್ಮರಣಕ್ಕೆ ಬಂತು. ಚಂಚಲ ಜಲ ರಾಶಿಯನ್ನು ತೈಲವು ಸ್ನಿಗ್ಧಗೊಳಿಸುವದೆಂಬುದೇ ಆ ಬೋಧವು. ಆದರೆ ಆ ಕ್ಷಣದ ಭಯಾನಕ ದೃಶ್ಯವನ್ನು ಏನು ವರ್ಣಿಸಲಿ? ಪ್ರಳಯ ಮಾರುತದ ಗರ್ಜನೆ, ಸಮುದ್ರದ ರೌದ್ರ ಘೋಷ, ಮೇಲೆ ಅಲ್ಪಕ್ಷಣದಲ್ಲೇ ಮುಗಿಲೆಲ್ಲ ಮುತ್ತಿದ ಮೋಡಗಳ ಪಟ್ಟ ಕಾಳ ರೂಪ! ಇಂಥ ಘನ ಘೋರ ಮಹಾ ಪ್ರಳಯದಲ್ಲಿ ಜೀವದ ಹಂಗುದೊರೆದು ಡೆಕ್ಕಿನ ಮೇಲೆ ಏರಿ ಅರಿವಿಲ್ಲದೆ ಕುಂತಲ ಕೇಸರೀ ತೈಲದ ಬಾಟಲಿಯ ಬೆಣೆಯನ್ನುಚ್ಚಿ ಸಮುದ್ರಕ್ಕೆ ಸುರುವಿದೆನು. ಆಹಾ! ಅದೆಂಥ ವಿಲಕ್ಷಣ ಅದ್ಭುತ! ಎಣ್ಣೆಯು ನೀರಮೇಲೆ ಪಸರಿಸಿದಂತೆ ಕ್ಷಣಾರ್ಧದಲ್ಲಿ ಗುಡ್ಡದಂಥ ಪ್ರಳಯದ ತೆರೆಗಳು ನೋಡನೋಡುತ್ತಿರುವಷ್ಟರಲ್ಲಿ ಕಳಚಿ ಸಮುದ್ರವು ಸಮತಲವಾಯಿತು! ಮೋಡಗಳು ಸಹ ಚದರಿ ಚತುರ್ದಿಕ್ಕು ಪರಿಷ್ಕಾರವಾಯಿತು! ಸೂರ್ಯನು ತೆರೆದದ್ದರಿಂದ ತಿರುಗಿ ಬಿಸಿಲು ಬಿತ್ತು!!! ಆವರಿಸಿ ಬಂದ ಮೃತ್ಯುವಿನ—ದವಡೆಯೊಳಗಿಂದ ಸಾವಿರಾರು ಜನರು ಹೀಗೊಮ್ಮೆ ಪಾರಾದೆವು!"

ವಾಚಕರೇ, ಈಗ ಏನು ಅನ್ನುವಿರಿ? ಸೊಟ್ಟೆ ಕುಂತಲರಂಜನ ತೈಲವೆತ್ತ; ಅಂಥ ಘನಘೋರ ಮಹಾ ಪ್ರಳಯದ ಸಮುದ್ರ ರೌದ್ರವೆತ್ತ? ಅಂಥ ಮೃತ್ಯುಸಮಯದಲ್ಲಿ ಇಂಥ ಕ್ಷುದ್ರ ಕ್ಷುಲ್ಲಕ ತೈಲದ ಮೇಲೆ ವಿಶ್ವಾಸ ಹುಟ್ಟುವದೆತ್ತ?

ಹೀಗೆಂತಲೇ ಶ್ರೀ ಜಗದೀಶಚಂದ್ರ ಬೋಸರು— "ನಾನು ಯಾವುದಕ್ಕೂ ಸಣ್ಣದೆಂದು ಅನ್ನಲಾರೆನು; ಮತ್ತು ಯಾವುದಕ್ಕೂ ದೊಡ್ಡದೆಂದೂ ಅನ್ನಲಾರೆನು!" ಎಂದು ತಮ್ಮ ಮಾತುಗಳಲ್ಲಿ ಮೇಲಿಂದ ಮೇಲೆ ಹೇಳುತ್ತಾರೆ.

ಇರಲಿ. ಇದೀಗ ಯೋಗೀಶ್ವರ ಶ್ರೀ ಅರವಿಂದ ಘೋಷರ ಒಂದು ದಿವ್ಯ ವಾಣಿಯನ್ನು ಹೇಳಿ ಶ್ರೀ ವಿದ್ಯಾರಣ್ಯರ ಸಿದ್ಧಾಂತಗಳ ಸತ್ಯತೆಯನ್ನು ಬಲಪಡಿಸಿ ನನ್ನ ಅಲ್ಪ ವಿಚಾರಕ್ಕೆ ವಿರಾಮವನ್ನು ಕೊಡುವೆನು. ಅವರು ಹೇಳುವದೇನೆಂದರೆ—

"ಬರೇ ಪ್ರಯತ್ನವಾದವನ್ನು ಸತ್ಯವೆಂದು ಪ್ರತಿಪಾದಿಸಿ ದೈವವಾದವನ್ನು ನಿರಾಕರಿಸುವವರ ಬುದ್ಧಿಯು ಇನ್ನೂ ಪೂರ್ಣತ್ವಕ್ಕೆ ಬಂದಿಲ್ಲವೆಂದು ನಾನು ಹೇಳುತ್ತೇನೆ; ಹಾಗೆಯೇ ಬರೇ ದೈವವಾದವನ್ನು ಸತ್ಯವೆಂದು ಪ್ರತಿಪಾದಿಸಿ ಪ್ರಯತ್ನವಾದವನ್ನು ನಿರಾಕರಿಸುವವರ ಬುದ್ಧಿಯೂ ಅಪೂರ್ಣವಾಗಿಯೇ ಇದೆಯೆಂದು ಅನ್ನುತ್ತೇನೆ."

ದೈವವು ದೇವನ ಕೈಯ್ಯಲ್ಲಿ; ಪ್ರಯತ್ನವು ಮಾನವನ ಕೈಯ್ಯಲ್ಲಿ. ದೈವಕ್ಕೆ ಎದೆಗೆಡದೆ, ಪ್ರಯತ್ನವು ಹದಗೆಡದೆ ನಿರಂತರವಾಗಿ ಸಾಗಿದಲ್ಲಿ ಸಿದ್ಧಿಯು ಕಟ್ಟಿಟ್ಟದ್ದೇ.

**ಓಂ ಜಯ ಭುವನೇಶ್ವರೀ!**

---

**ಓಂ ಶ್ರೀ ಓಂ.**

# ೨. ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ

## ನಮ್ಮ ವಿದ್ಯಾರಣ್ಯರು

ಕನ್ನಡ ಕುಲದ ಕಲಂಕವನ್ನು ತೊಳೆದು ಪಾವನಗೊಳಿಸಿದ ದೈವೀ ಪ್ರವಾಹಗಳಲ್ಲಿ ಎರಡು ಮುಖ್ಯ. ಒಂದು ಬಸವಣ್ಣನವರದು, ಇನ್ನೊಂದು ವಿದ್ಯಾರಣ್ಯರದು. ಒಬ್ಬರದು ಹನ್ನೆರಡನೆಯ ಶತಮಾನ; ಇನ್ನೊಬ್ಬರದು ಹದಿನಾಲ್ಕನೇ ಶತಮಾನ. ಭಕ್ತರೊಬ್ಬರು, ಜ್ಞಾನಿಯೊಬ್ಬರು. ಇಬ್ಬರೂ ಮಂತ್ರಿಗಳು. ಬಸವಣ್ಣನವರು ಸಾಂಸಾರಿಕ ಸನ್ಯಾಸಿ; ವಿದ್ಯಾರಣ್ಯರು ಸನ್ಯಾಸ-ಸಂಸಾರಿ. ಮೊದಲಿನವರು ಕೀಳರನ್ನು ಮೇಲಕ್ಕೆತ್ತಿದರು; ಇನ್ನೊಬ್ಬರು ಬೀಳರಲ್ಲಿ ಕಲಿತನವನ್ನು ಬಿತ್ತಿದರು. ಸಮಾಜ ಧರ್ಮದ ಸಂಘಟಕರೊಬ್ಬರಾದರೆ ವೇದಧರ್ಮದ ಪುನರುಜ್ಜೀವಕರಿನ್ನೊಬ್ಬರು. ಇವರು ಹುಟ್ಟಿದ್ದು ಬ್ರಾಹ್ಮಣಕುಲ, ತೊಟ್ಟಿದ್ದು ಕನ್ನಡಕುಲ. ಬಸವಣ್ಣನವರು ಕರ್ಮಬಂಧನವನ್ನು ಕತ್ತರಿಸಿ ಸಮಾಜ ಸುಧಾರಕರಾದರು; ವಿದ್ಯಾರಣ್ಯರು ಸನ್ಯಾಸ ವೃತ್ತಿಯನ್ನು ಬಿತ್ತರಿಸಿ ದೇಶೋದ್ಧಾರಕರಾದರು. ಅವರು ಕನ್ನಡ ವೇದವನ್ನು ಬರೆದರು; ಇವರು ವೇದಕ್ಕೆ ಕನ್ನಡಿಯನ್ನು ಬರೆದರು. ಇಬ್ಬರೂ ದೇವರ ಮಕ್ಕಳು. ಹೆಣ್ಣುಹೃದಯದ ಬಸವಣ್ಣನವರಿಗೆ ಕೂಡಲಸಂಗನೊಲಿದರೆ, ಗಂಡುಗೆಚ್ಚಿನ ವಿದ್ಯಾರಣ್ಯರಿಗೆ ಭುವನೇಶ್ವರಿಯೊಲಿದಳು. ಇವರು ಶಿವಶಕ್ತಿಯರ ಸಂತಾನ. ಅಂತೇ ಶತ-ಶತಮಾನಗಳು ಗತಿಸಿಹೋದರೂ 'ಶಿವನೇ ಬಸವ' ಎಂಬ ಸೊಲ್ಲು ಕನ್ನಡದ ಮೂಲೆ ಮೂಲೆಯಲ್ಲಿಯೂ ಸಮಾಜದ ನವ ಮಂದಿರದಲ್ಲಿ ಉಲಿಯುತ್ತಿದೆ. "ಕಾಳನ ಗಂಟಲ ಗಾಳವಾಗಿ ತಾಂ ಬಾಳುರುವೀ ದಿಬ್ಬ" ವು ಕನ್ನಡ ಕುವರರಿಗೆ ಮುಚ್ಚಿದ ಮುಷ್ಟಿಯಂತೆ "ಸ್ವಾಭಿಮಾನ ಚೇತನ"ಗಳನ್ನು ಕೊಡಲಿಕ್ಕೆ

ಅಲುಗದೆ ನಿಂತಿದೆ. ಈ ಅಮೋಘ ಶಕ್ತಿವಂತರಿಬ್ಬರೂ ನಮ್ಮವರೇ ಎಂದು ಯೋಚಿಸಿದಾಗ – ಆ ಮಹಾನುಭಾವರು ಗಳಿಸಿದ ದಿವ್ಯ ಸಂಗಮವೂ, ಭುವನೇಶ್ವರಿಯ ಕೃಪೆಯೂ ನಮಗಾಗಲೆಂದು ಯಾವ ಕನ್ನಡಿಗನು ಕಾತರಿಸಲಿಕ್ಕಿಲ್ಲ? ಯಾಕೆಂದರೆ ಹಿರಿಯರ ಒಡೆತನ ಕಿರಿಯರಿಗೆ ಅನಿವಾರ್ಯ. ಈ ಅಣ್ಣಂದಿರಿಬ್ಬರೂ ಕನ್ನಡರು! ನಮ್ಮವರು! ಇವರಾಡಿದ ನುಡಿಗಳು ನಮ್ಮವು! ಇವರು ಮಾಡಿದ ಕೃತಿ ನಮ್ಮವು! ಇವರು ನಮ್ಮವರು!! ನಮ್ಮ ಬಸವಣ್ಣನವರು!! ನಮ್ಮ ವಿದ್ಯಾರಣ್ಯರು!!!

## ವಿಚಿತ್ರಕಾಲ

ಹದಿನಾಲ್ಕನೇ ಶತಮಾನದ ಆರಂಭವೆಂದರೆ ಜಗತ್ತಿಗೇ ವಿಚಿತ್ರ ಕಾಲ. ಅದು ಹಿಡಿದ ಗ್ರಹಣವು ಬಿಡುವ ಸಮಯವೆಂಬಂತಿತ್ತು. ಹೇಗೆಂದರೆ ಮುನ್ನೂರು ವರುಷಗಳಿಂದ ಮುಸಲ್ಮಾನರಿಗೂ ಕ್ರಿಸ್ತಿಯನರಿಗೂ ನಡೆಯುತ್ತ ಬಂದ 'ಕ್ರೂಸೇಡ್ಸ್' ಎಂಬ ಧರ್ಮ ಯುದ್ಧದಲ್ಲಿ ಉಭಯರೂ ಕೈಸೋತು ನಿರ್ವಿಣ್ಣರಾಗಿದ್ದರು. ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ದೇಶದವರು ಅನ್ಯ ದೇಶಗಳ ಮೇಲಿಟ್ಟಿದ್ದ ದೃಷ್ಟಿಕೋನವು ತೊಲಗಿ ಅವರಲ್ಲಿ ದೇಶೀಯತೆಯ ಭಾವವು ಅರಳ ತೊಡಗಿತ್ತು. ಇರೋಪಿನ ವಿದ್ಯಾವೈಭವದ ಸಿರಿವೀಡೆನಿಸಿದ ಗ್ರೀಸ್ ದೇಶವು ಮಹಮ್ಮದೀಯರ ವಶಕ್ಕೆ ಎಂದೋ ಬಂದು ಬಿಟ್ಟಿತ್ತು. ಇರೋಪ ಸಂಸ್ಕೃತಿಯ ಮಾತೃಸ್ಥಾನವಾದ ರೋಮ ನಗರದ ಧರ್ಮದೊಡೆಯರಿಗೂ, ದೇಶದೊಡೆಯರಿಗೂ ನಡೆದ ದೀರ್ಘ ಕಾಲದ ಹೋರಾಟದಿಂದ ಪ್ರಜೆಗಳು ಕ್ಷೋಭೆಗೊಂಡು ಕ್ರಾಂತಿಕುಠಾರವನ್ನು ಮಸೆಯುತ್ತಿದ್ದರು. ಅಲ್ಲಲ್ಲಿ ಡಾಂಟೇ ಮೊದಲಾದ ಕವಿಕೋಗಿಲೆಗಳು ಕಣ್ತೆರೆದು ನಾಡಿನ ಹೀನವಾದ ಹಾಡನ್ನು ಹಾಡತೊಡಗಿದ್ದವು. ಕಾಡು ನಾಡುಗಳಲ್ಲಿ ವಿಕ್ಲಿಫ್‌ರಂಥ ಪಂಡಿತವಕ್ಕಿಗಳು ನಾಡಮರದ ಹಣ್ಣು — ಕಾಯಿಗಳ ಪಾಡನ್ನು ಪರಿಸಲನುವಾಗಿದ್ದವು. ಇದು ಇರೋಪಿನ ಸ್ಥಿತಿ. ಭರತಖಂಡದ

ಸ್ಥಿತಿಯಾದರೋ ದುರ್ದೆಶೆಗೀಡಾಗಿತ್ತು. ಉತ್ತರ ಹಿಂದುಸ್ಥಾನವು ಪರಕೀಯರಾಗಿ ಬಂದ ಮುಹಮ್ಮದೀಯರ ಭೀಕರತೆಗೆ ಎದೆಗೊಡದೆ ತಲೆ ಬಗ್ಗಿಸಿ ಕಲೆ-ನೆಲೆಗಳನ್ನು ಮುಡಿಪಿಟ್ಟು ಮಣಿದವು. ಉತ್ತರದಲ್ಲಿ ಹೊತ್ತುತ್ತಿದ್ದ ಜ್ವಾಲಾಮುಖಿಯ ಒಂದೆರಡು ಉರಿನಾಲಿಗೆಗಳು ದಕ್ಷಿಣಾಕ್ಕೂ ನುಸುಳಿ ಒಳಜಗಳಗಳಿಂದ ಮೊದಲೇ ಬಿರುಕು ಬಿಟ್ಟ ಜನರೆದೆಯನ್ನು ನೋಯಿಸಿದವು. ದಕ್ಷಿಣದ ರಾಜರುಗಳಲ್ಲಿ ನಿರ್ಬಲತೆಯುಂಟಾಗಿ ಅಂತಃಕಲಹಗಳ ಸುರಂಗದಿಂದ ಬಂಧುರ ಕೋಟೆಯು ಸಡಲಿಸತೊಡಗಿತ್ತು. ಆ ಹೊತ್ತಿಗೆ ಕನ್ನಡದಮ್ಮನು ಗರ್ಭಧಾರಣ ಮಾಡಿದ್ದಳು. ಕತ್ತಲೆ ಹರಿದು ನಸುಬೆಳಗು ಮುಂದುವರಿಯುವದಕ್ಕೂ, ಬೆಳ್ಳಿಚಿಕ್ಕೆ ಮೂಡುವದಕ್ಕೂ ಗಂಟು ಬೀಳಲೇಬೇಕಷ್ಟೆ?

ಮುಹಮ್ಮದೀಯರು ದಕ್ಷಿಣಕ್ಕೆ ಕಾಲಿಟ್ಟದ್ದು ಎಲ್ಲಕ್ಕೂ ಮೊದಲು ಗುರ್ಜರದಲ್ಲಿ. ದಂಡೆತ್ತಿ ಬಂದವನು ಅಲ್ಲಾಉದ್ದೀನ ಖಿಲಜಿ. ಬಾಯಿಗೀಡಾದದ್ದು ದೇವಗಿರಿ. ಅದು ಕಪ್ಪ ಕಾಣಿಕೆ ಕೊಟ್ಟು ತನ್ನ ಕುತ್ತು ತಪ್ಪಿಸಿಕೊಂಡಿತು. ಮುಂದೆ 'ದೇವಗಿರಿಯು ಮತ್ತೆ ಕಪ್ಪ ಕೊಡಲಿಲ್ಲ'ವೆಂದು ಮಲೀಕಕಾಫರನು ಕಾಲುಕೆದರಿ ಕದನ ತೆಗೆದು ಅದನ್ನು ಕೈವಶಪಡಿಸಿಕೊಂಡನು; ಹಸಿದವನಿಗೆ ಮೊಸರನ್ನದ ತುತ್ತು ಸಿಕ್ಕಂತಾಗಿ ಮತ್ತೆ 'ಆ' ಎನ್ನುವಂತೆ ಒರಂಗಲ್ಲ ರಾಜನ ತೆಕ್ಕೆಗೆ ಬಿದ್ದು ಅವನನ್ನು ನೀರುಗಾಯಿ ಮಾಡಿದನು. ಇನ್ನೊಂದು ಸಲ ಹೊಯ್ಸಳರ ಹಳೆಬೀಡನ್ನೂ, ಪಾಂಡ್ಯರ ಮಧುರೆಯನ್ನೂ ನುಂಗಲು ಹವಣಿಸಿ, ಕೈಗೆ ಬಾರದ್ದನ್ನು ಕಾಲಿನಿಂದ ಉರುಳಿಸುವಂತೆ ಅವನ್ನು ಹಾಳು ಮಾಡಿದನು. ಪರಕೀಯರಿಗೆ ಸ್ವಾಭಾವಿಕವೇ ಆಗಿರುವ ರೀತಿಯಲ್ಲಿ ಕೋಟೆಗಳಿಗೆ ಲಗ್ಗೆಯಿಟ್ಟು, ಅರಮನೆಗಳಿಗೆ ಕೊಳ್ಳಿಯಿಟ್ಟು ಧರ್ಮ ಮಂದಿರಗಳನ್ನು ಧ್ವಂಸ ಮಾಡಿದರು. ಹೆಂಗಸರನ್ನು ಹಿಂಸಿಸಿ, ಹುಡುಗರನ್ನು ಹೊಡೆದು ಹಾಕಿ ಜನರಲ್ಲೆಲ್ಲಾ ಭೀತಿಯನ್ನು ನೆಟ್ಟರು. ವೈರಿ ರಾಜರನ್ನು ಹಿಡಿತಂದು

ಜೀವಂತವಿರುವಾಗಲೇ ಮೈದೊಗಲು ಸುಲಿಸುವುದು, ಕುತ್ತಿಗೆ ಕಡಿದು ಭಲ್ಲೆಗೆ ಸಿಕ್ಕಿಸಿ ಮೆರೆಸಿ ಜನರಿಗೆ ಅವಮಾನ ಮಾಡುವುದು, ದಂಡವನ್ನು ಸೀಳಿ ಅಗಸೆ ಬಾಗಿಲಿಗೆ ತೂಗ ಹಾಕುವುದು, ಅದನ್ನು ಹದ್ದು ಕಾಗೆಗಳಿಗೆ ತಿನ್ನ ಹಾಕುವುದು, ಇಲ್ಲವೆ ರಾಜನ ಹೆಂಡರು ಮಕ್ಕಳಿಗೆ ಅದನ್ನು ತಿನ್ನುವಂತೆ ಬಲ್ಮೆಪಡಿಸುವುದು, ಇವು ಮದೋನ್ಮತ್ತರಾದಾಗ ಎಲ್ಲ ರಾಜರು ಮಾಡುವ ನಿತ್ಯ ವ್ಯವಹಾರ. ಇಂಥ ಅಮಾನುಷ ಕೃತಿಗಳಿಗಾಗಿ, ಅವರು ಪುರಾಣದೊಳಗೆ ಕೇಳಸಿಕ್ಕ ರಾಕ್ಷಸರೇ ಎಂದು ಜನರು ಭಯಪಡುತ್ತಿದ್ದರೆ ಆಶ್ಚರ್ಯವೆಲ್ಲಿ?

ಆದರೆ ಸ್ಥಳೀಯರಿಗೆ ಆಗ ಸ್ವಸಂರಕ್ಷಣೆಯ ಉಪಾಯವೇ ಇರಲಿಲ್ಲವೇ ? ದೇಶದಲ್ಲೆಲ್ಲಾ ಅರಾಜಕತೆಯೇ ಉಂಟಾಗಿತ್ತೆ ? ರಾಜರಿದ್ದರೆ ಅವರಾರು ? ಎಂಬ ಸಂಶಯವುಂಟಾಗುವುದು ಸಹಜ. ಆಗ ಕನ್ನಡಿಗರಾದ ಹೊಯ್ಸಳರೂ, ತಮಿಳರಾದ ಪಾಂಡ್ಯರೂ ದಕ್ಷಿಣದಲ್ಲಿ ಮುಖ್ಯ ರಾಜರು. ಆದರೆ ಪರಸ್ಪರರಲ್ಲಿ ವೈಮನಸ್ಸು. ಹೊಯ್ಸಳ ವೀರಬಲ್ಲಾಳ ದೊರೆಯನ್ನು ಹಣಿಯಬೇಕೆಂದು ಮಹಮ್ಮದೀಯರ ನೆರವನ್ನು ಬಯಸಿದ್ದನಂತೆ ಪಾಂಡ್ಯರಾಜನಾದ ಕುಲಶೇಖರನು ! ಹೊಯ್ಸಳರಿಗೇನೋ ಬಲ್ಲಾಳ್ತನವಿತ್ತು; ಅವರಿಗೆ ತಮ್ಮ ರಾಜ್ಯವನ್ನು ವಿಸ್ತರಿಸಿ, ಪರಕೀಯರನ್ನು ಹಿಂದಕ್ಕಟ್ಟಬೇಕೆಂಬ ಕುತೂಹಲವಿತ್ತು. ಈ ಉದ್ದೇಶದಿಂದಲೇ ಅವರು ತಮ್ಮ ಸೀಮೆಯನ್ನು ಬೆಳೆಸಿದರೆಂದೂ, ಕೋಟೆಗಳನ್ನು ಭದ್ರಪಡಿಸಿದರೆಂದೂ, ತಮ್ಮ ರಾಜಧಾನಿಯನ್ನು ಉತ್ತರಕ್ಕೆ ಆನೆಗೊಂದಿಗೆ ಒತ್ತಿತಂದರೆಂದೂ, ಪಾಂಡ್ಯರಾಜ್ಯವನ್ನಾಕ್ರಮಿಸಿದ್ದ ಮಹಮ್ಮದೀಯರ ಸೈನ್ಯವನ್ನು ತ್ರಿಚನಾಪಳ್ಳಿಯಲ್ಲಿ ಮುರಿಸಿ ಓಡಿಸಿದರೆಂದೂ ಹೇಳುತ್ತಾರೆ. ಏನೇ ಇರಲಿ— ದಕ್ಷಿಣದಲ್ಲಿ ಅಶಾಂತತೆಯುಂಟಾಗಿ ಜನತೆಯು ತುಂಬಾ ಕಳವಳಗೊಂಡಿತ್ತೆನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ರಾಜರಾಜರುಗಳಲ್ಲೆ ಅಂತಃಕಲಹ - ದೌರ್ಬಲ್ಯಗಳು ನೆಲೆಗೊಂಡರೆ ಪ್ರಜೆಗಳ

ಪಾಡೇನು ? ಧರ್ಮಾತ್ಮರಾದವರು— " ದೇವರೇ ! ನೀನಲ್ಲದಿನ್ನಾರು ಮೊರೆ ಕೇಳಬೇಕು ! " ಎಂದು ಆಕ್ರೋಶಿಸದೆ ಅನ್ಯ ಉಪಾಯವೇ ಇರದು—

* ಗದಾಸುದರ್ಶನಂಗಳುಂ ಸುಶಾರ್ಙನಂದಕಂಗಳುಂ ।
ತ್ವದೀಯ ದಿವ್ಯ ಶಕ್ತಿಯುಂ ಪ್ರದರ್ಶಿಸಲ್ಕೆ ಬಾರವೇಂ ॥
ಸದಾಶ್ರಯುಂ ದಯಾಮಯುಂ ವಿಜೃಂಭಿಸುತ್ತೆ ದೇವನೀಂ ।
ವಿದೂರಗೈವುದೀಗಳೀ ವಿದೇಶ ದುಷ್ಟ ಜಾಲಮಂ ॥

ಎಂದು ನಿಜವಾಗಿಯೂ ಸ್ತುತಿಸಿದ್ದುಂಟು. ವೇದಾಂತ ದೇಶಿಕರೆನಿಸುವ ಒಬ್ಬ ತರುಣ ಭೂಸುರನು ಸರ್ವ ಶಾಸ್ತ್ರಪಾರಂಗತನಾಗಿ ಆ ಮೇಲೆ ವಿವಾಹವನ್ನು ಮಾಡಿಕೊಂಡು ಕೆಲವು ಶಿಷ್ಯರಿಗೆ ಪಾಠ ಪ್ರವಚನವನ್ನು ಹೇಳುತ್ತ ಶ್ರೀರಂಗದಲ್ಲಿ ವಾಸವಾಗಿದ್ದನು. ಪರಚಕ್ರ-ದವರು ಶ್ರೀರಂಗಕ್ಕೂ ದಾಳಿ ತಂದರು. ಶ್ರೀರಂಗನಾಥನನ್ನು ಶತ್ರು ಭಾವದ ಭಕ್ತರು ಟೊಣ್ಣೆಯಿಂದ ಪೂಜಿಸಲನುವಾದರು. ಮೇಲೆ ಬ್ರಹ್ಮ ಸಂತರ್ಪಣೆಯೆಂಬಂತೆ ಕೈಗೆ ಸಿಕ್ಕ ಧಾರ್ಮಿಕರನ್ನು ಕುಲಗೆಡಿಸುವುದಕ್ಕೆ ಆರಂಭವಾಯಿತು. ಬಳಕೆಯಾಗುವ ವರೆಗೆ ಪರ ಧರ್ಮವೂ, ಪರದೇಶದವರೂ ಅಸಹ್ಯವಾಗಿಯೂ ಅವಹೇಳನವಾಗಿಯೂ ತೋರುವುದು ಸಹಜ. ಆ ಹೊತ್ತಿಗೆ ದೇವಾಲಯವನ್ನು ಕಾಪಿಡಲು ಆತ್ಮತ್ಯಾಗಮಾಡಿದ ಸುದರ್ಶನಭಟ್ಟರೆಂಬವರು ತಮ್ಮಿಬ್ಬರು ಮಕ್ಕಳನ್ನೂ, ತಾವು ಬರೆದ ' ಶ್ರುತ ಪ್ರಕಾಶಿಕೆ ' ಯೆಂಬ ಗ್ರಂಥವನ್ನೂ ವೇದಾಂತ ದೇಶಿಕರಿಗೊಪ್ಪಿಸಿ, ಪತ್ನಿಯನ್ನು ಅಗ್ನಿದೇವನಿಗೆ ಆಹುತಿಯಿತ್ತು ಸಂಗರಕ್ಕೆ ಧುಮ್ಮಿಕ್ಕಿದರು. ವೇದಾಂತ ದೇಶಿಕರು ಆ ಗ್ರಂಥವನ್ನೂ, ಬ್ರಾಹ್ಮಣ ಕುಮಾರರನ್ನೂ

---

* ಪ್ರಕೃಷ್ಟ ಗುಣಕಃ ಶ್ರಿಯಾ ವಸುಧಯಾ ಚ ಸಂಧುಕ್ಷಿತಃ ।
ಪ್ರಯುಕ್ತ ಕರುಣೋದಧೇ ಪ್ರಶಮಯ ಸ್ವಶಕ್ತ್ಯಾಸ್ವಯಂ ॥

ಸಂರಕ್ಷಿಸಿದ್ದು ಹೇಗೆಂಬುದರ ಕಲ್ಪನೆ ಕೂಡ ನಮಗೆ ಬರಲಿಕ್ಕೆ ಸಾಧ್ಯ ವಿಲ್ಲ. ಹೇಗೆಂದರೆ-ಯುದ್ಧಕಾಲದಲ್ಲಿ ವೇದಾಂತ ದೇಶಿಕರು ಆ ಓಲೆಯ ಹೊತ್ತಿಗೆಯನ್ನು ಕಾವೇರಿತಳದ ಮರಳಿನಲ್ಲಿ ಹುಗಿದಿಟ್ಟು ಬಾಲ ಕರೊಡನೆ ಒಂದು ಹಾಳು ದೇಗುಲದಲ್ಲಿ ಅಡಗಿಕೊಂಡಿದ್ದರು. ಸಂಜೆಗೆ ಗೆಲುವಿನ ಉಬ್ಬಿನಲ್ಲಿ ಪರಕೀಯರು ಮನೆ ದೇಗುಲಗಳನ್ನೂ ನುಗ್ಗತೊಡ ಗಲು ಅವರು ಅಲ್ಲಿಂದ ಮೆಲ್ಲಗೆ ಪಾರಾಗಿ ಬಂದು ರಣರಂಗದ ಶವ ಗಳೊಡನೆ ಶವಗಳಂತೆ ಬಿದ್ದುಕೊಂಡು ಜೀವಂತವಾಗಿ ಉಳಿದು ಬಳಿಕ ಶತ್ರುಗಳ ಸದ್ದಡಗಲು ಅಲ್ಲಿಂದೆದ್ದು ಬಾಲಕರೊಡನೆ ಸುರ ಕ್ಷಿತ ಸ್ಥಾನಕ್ಕೆ ತೆರಳಿದರಂತೆ. ಇದನ್ನೆಲ್ಲ ಅನುಭವಿಸಿದ ಆ ವೇದಾಂತ ದೇಶಿಕರೇ ಮೇಲೆ ಕಾಣಿಸಿದ "ಅಭೀತಿಸ್ತವ" ವನ್ನು ಹಾಡಿದವರು ಆ ಹೃದಯದ ಕೂಗು ಲೋಕಹೃದಯನನ್ನು ಸೇರದಿರುವುದೇ ! 'ಬಯಕೆ ಬರುವುದರ ಕಣ್ಣನ್ನೆ' ಯಷ್ಟೇ ? ಆ ವೇದಾಂತ ದೇಶಿಕ ರೆಂದರೆ ವಿದ್ಯಾರಣ್ಯರ ಸಹಾಧ್ಯಾಯಿಗಳಾದ ವೆಂಕಟನಾಥಾರ್ಯರು. ಮಿತ್ರನಿಗೆ ಬಡಿದ ಬಿರುಗಾಳಿಯು ಮಾಧವನಿಗೂ ಸುಳಿದು ಸೋಂಕದೆ ಹೋದೀತೇ ?

## ಸಮಯ ನಿರೀಕ್ಷಣೆ

ಈ ಸಮಯಕ್ಕೆ ಮಾಧವನು ಜನ್ಮತಾಳಿ ಅದೆಷ್ಟೋ ಕಾಲ ಸಂದಿತ್ತು. ದೇಶದ ದುಸ್ಥಿತಿಯ ಭೀಕರ ಸ್ವರೂಪವು ಅವನೆದೆಯನ್ನು ನಡುಗಿಸಿತು. ನಾಡ ತಾಯಿಯು ದೈನ್ಯಾವಸ್ಥೆಯಿಂದ ಏನೋ ಯಾಚಿ ಸುವಂತೆ ಅನಿಸಿತು. 'ಪುರುಷ ರೂಪವ ಧರಿಸಿ ಧರೆಯೊಳಾದರದಿ ನೀನಾವ ಕರ್ತವ್ಯಕಾಗಿರುವೆ ತಿಳಿಯೈ' ಎಂದು ವಿಚಾರಿಸಲು, ತನ್ನ ಬಡತನವು ನಾಡಿಗೆ ಬಂದ ದಾರಿದ್ರ್ಯದ ಮುಂದೆ ಎಷ್ಟೂ ಲಕ್ಷ್ಯಿಸ- ಲಿಕ್ಕಾಗದೆನ್ನುವುದು ಹೊಳೆಯಿತು. ಆದರೆ ಯಾರ ಕಲ್ಯಾಣಕ್ಕಾದರೂ

ಧನವು ಅಪಶ್ಯವೆಂದು ಬಾರಿಬಾರಿಗೂ ತೋರಿ ಬಂತು. ಅಂತೇ ವಿದ್ಯಾ ವ್ಯಾಸಂಗ ಮುಗಿಸಿದ ಸರಸ್ವತೀ ಪುತ್ರನಾದ ಮಾಧವನು ಮನೆಗೆ ಕಾಲಿಕ್ಕುತ್ತಲೆ ದರಿದ್ರಲಕ್ಷ್ಮಿಯು— "ಇಲ್ಲೇನು ನಿನ್ನ ಕೆಲಸ ?" ಎನ್ನು ವಂತೆ ಆ ಬಟುವನ್ನು ನೂಕಿಯೇ ಬಿಟ್ಟಳು. ವಿದ್ಯಾವ್ಯಾಸಂಗ ಮುಗಿಸಿ ವಿವಾಹವಾಗಿ ಗೃಹಸ್ಥನಾಗಬೇಕು. ಆದರೆ ಅದು ಇಲ್ಲದೆ ಹೋಯಿತು. ವಿಧಿಯು ಆ ಮಾನವ ದೇಹದಲ್ಲಿ ಯಾವುದೊ ಉದ್ದೇಶ ಸಾಧನೆಗೆ ಅಕಲ್ಪಿತ ಶಕ್ತಿಗಳನ್ನು ತುಂಬುತ್ತಲಿರುವಾಗ ಅದು ಮನೆ-ಮಕ್ಕಳುಗಳಿ ಗಾಗಿ ವ್ಯಯವಾಗಗೊಡುವುದೇ? ಗೃಹಸ್ಥನಾಗಿದ್ದರೆ ಮಾಧವಭಟ್ಟನ ವಿದ್ಯಾ ಸಾರ್ಥಕ್ಯವು ಶಿಷ್ಯಪ್ರಶಿಷ್ಯರಿಗೆ ಪಾಠ ಹೇಳುವುದರಲ್ಲಿಯೇ ಪೂರ್ತಿ ಗೊಳ್ಳುತ್ತಲಿತ್ತು. ಆದರೆ ಆ ಸೇವೆಯು ಕೂಡ ಅವನಿಗೆ ಲಭಿಸಲಾರದೆ ಹೋಯ್ತು. ಅದಕ್ಕೆ ಬಡತನವೇ ಕಾರಣ. ಅಂತೇ ಮಹಾಲಕ್ಷ್ಮಿ ಯನ್ನು ಪ್ರಸನ್ನಗೊಳಿಸುವುದಕ್ಕೆಂದು ತಾಯಿ-ತಂದೆಗಳ ಅಪ್ಪಣೆಯಿಂದ ಹಂಪೆಗೆ ಹೋಗಿ ಶ್ರೀ ಭುವನೇಶ್ವರಿ ದೇವಿಯ ಸನ್ನಿಧಿಯಲ್ಲಿ ತಪಸ್ಸ ನ್ನಾಚರಿಸತೊಡಗಿದನು. ಮೂರು ತಿಂಗಳು ಫಲಾಹಾರಿ! ಆರು ತಿಂಗಳು ಜಲಾಹಾರಿ!! ಮುಂದೆ ನಾಲ್ಕು ವರ್ಷ ನಿರಾಹಾರಿ!!! ಈ ರೀತಿಯ ಕಠಿಣ ತಪಶ್ಚರ್ಯದಲ್ಲಿದ್ದಾಗ ದೇವಿಯು ಪ್ರತ್ಯಕ್ಷಳಾಗಿ— "ನಿನಗಿ- ನ್ನೊಂದು ಜನ್ಮ ಮಾತ್ರ ಉಳಿದಿದೆ. ನಿನ್ನ ಇಷ್ಟವು ಆ ಕಡೆಯ ಜನ್ಮದಲ್ಲಿ ನೆರವೇರುವದು" ಎಂದು ಹೇಳಿ ಅಂತರ್ಧಾನವಾದಳಂತೆ. ಮಾಧವನು ಸಿಡಿದು ಬಿದ್ದನು. 'ಇನ್ನೊಂದು ಜನ್ಮದಲ್ಲಿ ಇಷ್ಟ ಪೂರ್ತಿಯೇ?' ಎಂದು ಬೆರಗುಬಟ್ಟನು. 'ಈ ಜನ್ಮದಲ್ಲಿ ಬೆಳೆಸಿದ ಈ ದೇಹ, ವಿದ್ಯಾವ್ಯಾಸಂಗ ಇವೆಲ್ಲಾ ಹೊಳೆಯಲ್ಲಿ ಹುಳಿ ತೊಳೆ ದಂತೆಯೇ?' ಎಂದು ತನ್ನಲ್ಲಿಯೇ ಮಿಡುಕಿದನು. 'ಕಾಲವೇ ಹಾಲಾಹಲವು ಪ್ರತಿಕೂಲವಾಗಿರುವಾಗಳ್ಳೆ' ಎಂದು ಕೊಂಡು ಖಿನ್ನ ನಾದನು. 'ಇನ್ನು ಹೇಗೆ ಜನ್ಮ ಕಳೆದರೇನು' ಎಂದು ವೈರಾಗ್ಯ ತಾಳಿದನು. ವೈರಾಗ್ಯ ವಿಚಾರವು ಯತ್ಯಾಶ್ರಮ ಸ್ವೀಕರಿಸುವ ವಿಚಾರಕ್ಕೆ

ತಲುಪಿಸಿತು. ಆದರೆ ಅದರಿಂದ ಪುನರ್ಜನ್ಮವು ಇಲ್ಲದಂತಾಗುವದೆಂದೂ, ಅದೇ ಕಟ್ಟಕಡೆಯ ಜನ್ಮವಾಗುವದೆಂದೂ, ದೇವಿಯ ಆದೇಶದಂತೆ ಆ ಕಡೆಯ ಜನ್ಮದಲ್ಲಿ ತನ್ನ ಇಷ್ಟ ಪೂರ್ತಿಯಾಗುವದೆಂದೂ ಬಗೆದೆದ್ದನು. 'ಕಾಲವೇ ಪೀಯೂಷವೆಮಗನುಕೂಲವಾಗಿರುವಾಗಳ್ಕೆ' ಎಂದು ಹಿಗ್ಗಿದನು. ಅದು ನಿಜವಾಗಿಯೂ ಅನುಕೂಲ ಕಾಲವೇ. ಸನ್ಯಾಸ ಸ್ವೀಕರಿಸುವುದಕ್ಕೆಂದು ಶೃಂಗೇರಿಗೆ ಹೋಗಿ, ವಿದ್ಯಾತೀರ್ಥರ ಕರಕಮಲ ಸಂಜಾತರಾಗಿದ್ದ ಭಾರತೀ ಕೃಷ್ಣ ತೀರ್ಥರವರಿಗೆ ತನ್ನಾಶೆಯನ್ನು ಬಿನ್ನಯಿಸಿದನು. ಆದರೆ ಈ ಮೊದಲೇ ಭಾರತೀ ಕೃಷ್ಣ ತೀರ್ಥ ಸ್ವಾಮಿಗಳಿಗೆ ಶ್ರೀ ಶಾರದಾ ದೇವಿಯಿಂದ ಹಾಗೆ ಪ್ರೇರಣೆ ದೊರೆತಿತ್ತಂತೆ! ಅಂತೂ ಮಾಧವಾಚಾರ್ಯನು ದೀಕ್ಷಿತನಾದ ಮೇಲೆ ಆವನಿಗೆ 'ವಿದ್ಯಾರಣ್ಯ' ಎಂಬ ನಾಮಾಭಿಧಾನವುಂಟಾಯಿತು. ಬಳಿಕ ವಿದ್ಯಾರಣ್ಯರು — ಲೋಕೋಪಕಾರಾರ್ಥವಾಗಿ ನಾನಿದನ್ನೆಲ್ಲ ಸಾಧಿಸುವೆನೆಂದೂ, ನಿನ್ನ ದಯಾ ದೃಷ್ಟಿಯು ನನ್ನ ಮೇಲೆ ಸದಾ ಇರಲೆಂದು ದೇವಿಯನ್ನು ಪ್ರಾರ್ಥಿಸಲು, ಆಕೆಯು 'ತಥಾಸ್ತು' ಅಂದಳೆಂದೂ ಉಲ್ಲೇಖವುಂಟು. ತಲೆಯ ಮೇಲಿನ ಕುಟುಂಬದ ಹೊಣೆಯನ್ನು ಇಳಿಸಿ ವಿದ್ಯಾರಣ್ಯರು ಮಠಸಂಸ್ಥೆಯ ದೊಡ್ಡ ಭಾರವನ್ನು ಹೊತ್ತರು. ಆ ಹೊತ್ತಿಗೆ ಅವರ ವಯಸ್ಸು ಅರವತ್ತು ಮೂರನ್ನು ಮಿಕ್ಕಿತ್ತು. ಇಷ್ಟು ಇಳಿತರ ವಯಸ್ಸಿಗೆ ಬಂದ ವಿದ್ಯಾರಣ್ಯರು ಈ ವರೆಗೆ ಮಾಡಿದ ಕೆಲಸಗಳೆಂದರೆ ಎರಡೇ. ವಿದ್ಯಾವ್ಯಾಸಂಗ ಹಾಗು ತಪಶ್ಚರ್ಯೆ. ಇನ್ನು ಮುಂದೆ ಅವರ ಜನ್ಮಕಾರ್ಯವು ಫಲಿಸಬೇಕು. ಈ ವರೆಗಿನ ಘಟನೆಗಳೆಲ್ಲವೂ ಮಾನವ ವಿಚಾರಕ್ಕೆ, ಪ್ರತಿಕೂಲವಾದವುಗಳೆಂದೂ, ದುರ್ದೈವದ ಚಿಹ್ನೆಗಳೆಂದೂ ತೋರದಿರಲಾರವು. ಆದರೆ ದೈವೇಚ್ಛೆ ಬೇರೆ ಇತ್ತು. "ದೇವನಿಚ್ಛೆಯನರಿಯುತದನೆ ಅನುವರ್ತಿಸು" ವ ಧೀರತನವು ಬರುವುದು ಸುಲಭವಲ್ಲ. ಆದರೂ ಅಪರೋಕ್ಷವಾಗಿ ದೈವೀ ಕಾರ್ಯಕ್ಕಾಗಿಯೇ ಅದೆಲ್ಲ

ಸಿದ್ಧತೆ ನಡೆದಿದೆಯೆಂದು ಅಂಥ ವೇದಾಂತ ಮನ್ಸೈರ್ಕ ದೃಷ್ಟಿಯಾದ ವಿದ್ಯಾರಣ್ಯರಿಗೂ ತಿಳಿಯದೆ ಹೋಯ್ತು. ಹೀಗೆ ವಿದ್ಯಾರಣ್ಯರು ಶೃಂಗೇರಿಯ ಜಗದ್ಗುರು ಪಟ್ಟಾಧಿಕಾರಿಗಳಾಗಿ ಸಾಯಣನೊಡನೆ ವೇದ-ಉಪನಿಷತ್ತುಗಳನ್ನು ಅಭ್ಯಸಿಸಲು ತೊಡಗಿದರು.

ಸ್ವಾಮಿಗಳ ವಿದ್ಯಾಗುರುಗಳೂ, ಕಾಂಚೀ ಮಠಾಧ್ಯಕ್ಷರೂ ಆದ ವಿದ್ಯಾತೀರ್ಥ ಸ್ವಾಮಿಗಳು ವಿದ್ಯಾರಣ್ಯರ ಅಂತಃಸಾಮರ್ಥ್ಯವನ್ನು ಬಗೆದು ಶೃಂಗೇರಿಯ ಮಠವನ್ನೂರ್ಜಿತಪಡಿಸಲಿಕ್ಕೂ, ವೇದಾಂತ ಪ್ರಚಾರ ಕಾರ್ಯವನ್ನು ಮುಂದುವರಿಸಲಿಕ್ಕೂ ಅನುಜ್ಞೆಯನ್ನಿತ್ತರು. ವಿದ್ಯಾರಣ್ಯರಾದರೋ! ಈ ಮಹಾ ಕಾರ್ಯವನ್ನು ನೆರವೇರಿಸುವುದಕ್ಕೆ ಹೃತ್ಪೂರ್ವಕವಾಗಿ ಒಪ್ಪಿಕೊಂಡರು. ಆದರೆ ರಾಜಕೀಯ ವ್ಯವಸ್ಥೆಯು ಸರಿಪಡದೆ ವೇದಾಂತ ಪ್ರಚಾರ ಕಾರ್ಯವು ಸುಲಭವಾಗದೆಂದು ಯೋಚಿಸಿ, ಪರಕೀಯರಿಂದ ಪೆಟ್ಟುತಿಂದು ಬುದ್ಧಿಕಲಿತ ದೇಶಿಯರನ್ನು ಕಾರ್ಯಕಾರಿಯಾಗುವಂತೆ ಹೊರಳಿಸುವುದಕ್ಕೆ ಅನುಕೂಲ ಸಮಯವನ್ನು ಕಾದುಕೊಂಡು ಕುಳಿತರು.

ಈ ರೀತಿಯಾಗಿ ಇಲ್ಲಿ ತುಬಾಕಿಯೊಂದು ಪ್ರಚಂಡ ಶಕ್ತಿಯ ಮದ್ದುಗುಂಡುಗಳನ್ನು ತುಂಬಿಕೊಂಡು ಸಜ್ಜಾಗಿದೆ. ಇನ್ನು ಸುಸಮಯದಲ್ಲಿ ಅದಕ್ಕೆ ಕೊಳ್ಳಿಯ ಸಂಗತಿ ಬೇಕು ಅಷ್ಟೇ. ಆ ಕೊಳ್ಳಿಯೂ ಹೊತ್ತುತ್ತಲಿದೆ. ಅದನ್ನು ಎತ್ತಿಹಿಡಿದು ಢಡಲ್ಗೊಳಿಸುವ ಕೈಚಳಕದ ಕಲಿಯೂ ತನ್ನ ಶಿಕ್ಷಣವನ್ನು ಪೂರ್ತಿಗೊಳಿಸುತ್ತಲಿದ್ದಾನೆ. ಅವನೇ ಸವ್ಯಸಾಚಿಯಾದ ಹರಿಹರನು. ತೀವ್ರ ವೀರತೆಯಿಂದ ನೆಗೆದೇಳುತ್ತಿರುವ ತಮ್ಮಂದಿರನ್ನು ತಾಳ್ಮೆಯಲ್ಲಿರಿಸಿ ಸಮಯ ನಿರೀಕ್ಷಿಸುವುದು ಅವನಿಗೆ ನಾಕು ಸಾಕಾಗಿತ್ತು. ಅವನು ಆನೆಗೊಂದಿಯವನೇ ಇರಲಿ, ಒರಂಗಲ್ಲಿನ ಬೊಕ್ಕಸಿಗನೇ ಇರಲಿ ಯಾರೆ ಇರಲಿ. ಹರಿಹರಾದಿ ಐವರು ಬಂಧುಗಳು ಸಂಗಮರಾಜನ ಮಕ್ಕಳು; ಪಂಚಪಾಂಡವರು. ವೇದಾಂತವನ್ನು

ವ್ಯವಹರಿಸಲಿಕ್ಕೆ ಕಲಿತ ವಿದ್ಯಾರಣ್ಯರು ಶ್ರೀಕೃಷ್ಣನಂತೆ, ಹರಿಹರನು ಅರ್ಜುನನಿದ್ದಂತೆ. ಜ್ಞಾನ-ಶೌರ್ಯಗಳ ಸುಂದರ ಸಮ್ಮೇಳನವೆಂದರೆ ಇದೇ ಇಂಥ ಸಮ್ಮೇಳನದಲ್ಲಿಯೇ ಮಹಾ ಕಾರ್ಯಸಾಧನೆಯ ಸಾಮರ್ಥ್ಯ. ಈ ಮರ್ಮವನ್ನು ಸರ್ವದಾ ತಿಳಿದ ಕನ್ನಡದೇವಿಯು, ವಿದ್ಯಾರಣ್ಯ-ಹರಿಹರರ ಮೊದಲದರ್ಶನವನ್ನು ಚಮತ್ಕಾರವಾಗಿ ಮಾಡಿಸಿದ್ದಾಳೆ. ಅದು ಹೇಗೆಂದರೆ:—

ಒಮ್ಮೆ ಹರಿಹರನು ತುಂಗಭದ್ರಾ ತೀರದ ಅಡವಿಯಲ್ಲಿ ಬೇಟೆಯಾಡುತ್ತಿದ್ದಾಗ ಅವನ ನಾಯಿಗಳು ಒಂದು ಹುಲಿಯನ್ನೂ ಸಿಂಹವನ್ನೂ ಬೆನ್ನಟ್ಟಿದವಂತೆ! ಆಗ ಒಂದು ಮೊಲವು ಓಡಿ ಬಂದು ನಾಯಿಗಳ ಮೇಲಡರಿ ಅವನ್ನು ಕಚ್ಚತೊಡಗಿತಂತೆ!! ಈ ವಿಚಿತ್ರ ವ್ಯಾಪಾರವನ್ನು ಕಂಡ ಹರಿಹರನು ಆಶ್ಚರ್ಯಬಟ್ಟು ತನ್ನೂರಿಗೆ ಹಿಂದಿರುಗಿದಾಗ ದಾರಿಯಲ್ಲಿ ಕಂಡ ಸನ್ಯಾಸಿಗೆ ಅರುಹಿದನಂತೆ. ಸನ್ಯಾಸಿಯು, ಆ ಸ್ಥಾನವು ಮಾಹಾತ್ಮ್ಯವುಳ್ಳ ಕ್ಷೇತ್ರವೆಂದು ನಿಶ್ಚಯಿಸಿ ಅಲ್ಲೊಂದು ನಗರವನ್ನು ಕಟ್ಟಲಿಕ್ಕೆ ಹರಿಹರನಿಗೆ ಹೇಳಿದನಂತೆ. ಆತನು ಅದರಂತೆ ನಗರವೊಂದನ್ನು ನಿರ್ಮಿಸಿ ಅದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನಂತೆ. ಆ ಸನ್ಯಾಸಿಯೆಂದರೆ ವಿದ್ಯಾರಣ್ಯರೇ ಅಂತೆ. ಅವರ ಜ್ಞಾಪಕಾರ್ಥವಾಗಿ ಆ ನವ ನಗರಕ್ಕೆ ವಿದ್ಯಾನಗರವೆಂದು ಹೆಸರಿಟ್ಟನಂತೆ. ಅಂಕಿತ ನಾಮದ ವಿದ್ಯಾನಗರವೇ ಮುಂದೆ ವಿಜಯನಗರವೆಂಬ ಅನ್ವರ್ಥಕ ನಾಮವನ್ನು ಪಡೆಯಿತಂತೆ. ವಿದ್ಯಾರಣ್ಯರನ್ನೇ ಆತನು ತನ್ನ ಗುರುಗಳೆಂದು ನಡಕೊಳ್ಳಹತ್ತಿದನಂತೆ. ಇದು ಬಾಗೇಪಲ್ಲಿಯ ಶಿಲಾಲೇಖವೊಂದರಲ್ಲಿ ಬರೆದ ಸಂಗತಿ.

ಹರಿಹರನ ಬಗ್ಗೆ ಮ|| ಡಿ. ವಿ. ಜಿ. ಅವರು ನಿರ್ಧರಿಸಿದ್ದೇನಂದರೆ-ಹರಿಹರನೂ ಅವನಿಗೆ ಮುಂಚೆ ಆತನ ತಂದೆ ಸಂಗಮನೂ ಹೊಯ್ಸಳರಲ್ಲಿ

ಯಾವುದೇ ಅಧಿಕಾರಿಗಳಾಗಿದ್ದಿರಬಹುದು. ಮಾಧವಾಚಾರ್ಯರೂ, ಅವರಿಗೆ ಮುಂಚೆ ಮಾಯಣಭಟ್ಟರೂ ಆ ಅಧಿಕಾರಿಗಳಿಗೆ ಪುರೋಹಿತರಾಗಿದ್ದಿರಬಹುದು. ಮಹಮ್ಮದ ತಘಲಖನು ೧೩೨೭ರಲ್ಲಿ ದಕ್ಷಿಣಕ್ಕೆ ಬಂದು ಹೊಯ್ಸಳರಾಜ್ಯವನ್ನು ಹಾಳುಮಾಡಿ ದೇವಗಿರಿಯಲ್ಲಿ ತನ್ನ ಪ್ರತಿನಿಧಿಯೆಂದು ಬಾಹವುದ್ದೀನನನ್ನು ಇಟ್ಟನು. ತಘಲಖನ ರಾಜ್ಯವು ವಿಸ್ತಾರವಾಗಿದ್ದುದರಿಂದ ಅಲ್ಲಲ್ಲಿ ಅನಾಯಕತ್ವವುಂಟಾಗಿ ಸ್ಥಳೀಯ ಅಧಿಕಾರಿಗಳು ಸ್ವತಂತ್ರರಾಗಲೆತ್ನಿಸುತ್ತಿದ್ದರು. ಇಂತಹ ಸಮಯದಲ್ಲಿ ಬಾಹವುದ್ದೀನನೂ ರಾಜದ್ರೋಹ ಮಾಡಿದನೆಂಬ ನೆವದಿಂದ ಬಾದ-ಶಹನು ಅವನನ್ನು ಹಣಿಯ ಹೊರಟನು. ಬಾಹವುದ್ದೀನನು ಪೆಟ್ಟು ತಿಂದು ಓಡಿ ಹೋಗಿ ಕಂಪಳಿಯ ಜಂಬುಕೇಶ್ವರನ ಬೆನ್ನಿಗೆ ಬಿದ್ದನು. ಈ ಕದನದಲ್ಲಿ ಬಾಹವುದ್ದೀನನೂ, ಜಂಬುಕೇಶ್ವರನೂ ಹಾಳಾಗಿ ಹೋದರು. ಜಂಬುಕೇಶ್ವರನ ಆನೆಗೊಂದಿಯು ತಘಲಖನ ವಶಕ್ಕೆ ಬರಲು ಮಲ್ಲಿಕನಬಿಯನ್ನು ಪ್ರತಿನಿಧಿಯಾಗಿ ನಿಯಮಿಸಿದನು. ಮುಂದೆ ಆನೆಗೊಂದಿಯ ಕೆಲವರು ನಬಿಯನ್ನು ಮೂಲೆಗೊತ್ತಿದರೆಂದೂ ಈ ಏರ್ಪಾಟಿನಲ್ಲಿ ಹರಿಹರನಿದ್ದನೆಂದೂ ಹೇಳುತ್ತಾರೆ. ತಘಲಖ ದೊರೆಯು ನಬಿಯನ್ನು ತೆಗೆದುಹಾಕಿ ಹರಿಹರನನ್ನು ನಿಯಮಿಸಿದನು. ಇದಕ್ಕೆ ಕಾರಣವೇನೆಂದರೆ— ಆನೆಗೊಂದಿಯವರು ಹಿಂದಿನ ತನ್ನ ಘೋರ ಕೃತಿಗಳನ್ನು ಮರೆತು ಸಮಾಧಾನ ಹೊಂದಿಯಾರೆಂದು ಬಗೆದನು. ಅಂತೂ ಹರಿಹರನು ಆನೆಗೊಂದಿಯ ಸಂಸ್ಥಾನಕ್ಕೆ ಸ್ವತಂತ್ರ ಅಧಿಕಾರಿಯಾದನು.

**ಸರ್ವ ಸಮರ್ಪಣ**

ರಾಜೇಶ್ವರನಾದ ಸಿದ್ಧಾರ್ಥನಿಗೆ ಸಮಸ್ತ ವೈಭವಗಳನ್ನು ಹೀಗಳಿದು ಆತನು ಸನ್ಯಾಸಿಯಾದನು. ವಿಶ್ವಾಮಿತ್ರರಾಜನು ತನ್ನ ರಾಜ್ಯದಲ್ಲಿ ನೆಲೆಸಿದ ಸರ್ವತ್ರ ಶಾಂತಿಗೆ ಬೇಸತ್ತು ಕಾಳಗವನ್ನರಸುತ್ತ ಹೊರಟನು. ರಾಜಕುಮಾರನು ಬುದ್ಧನಾಗಿ ನಮ್ಮೆದೆಯಲ್ಲಿ ನೆಲೆಸಿದರೆ, ವಿಶ್ವಾಮಿತ್ರನು

ದಾನವರಿಗೂ ಮಾನವರಿಗೂ ಮೀರಿ, ದೇವತೆಗಳೊಡನೆಯೂ ಹೋರಿ ಬ್ರಹ್ಮರ್ಷಿಯಾಗಿ ನಮ್ಮ ಜೀವನದ ಪ್ರಚೋದಕನಾಗಿದ್ದಾನೆ. ವಿದ್ಯಾರಣ್ಯರಿಗಾದರೋ ಜನ್ಮತಃ ಬ್ರಹ್ಮತ್ವ, ಸನ್ಯಾಸ ಜೀವನ. ಅವರಾದದ್ದು "ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ"ರು. ಇವರೆಲ್ಲರೂ ತಂತಮ್ಮ ಸರ್ವಸ್ವವನ್ನು ಸೂರೆಮಾಡಿದ್ದರಿಂದಲೇ ಗಮ್ಯವನ್ನು ಮುಟ್ಟಿದರು. ಇವರ ವಿಜಯಕ್ಕೆ ತ್ಯಾಗವೇ ಮೂಲ. ತ್ಯಾಗದ ಎಳೆಯಲ್ಲಿಯೇ ಜೀವನ ಸಾಫಲ್ಯದ ಮುತ್ತು ಪವಣಿಸಲಾಗುತ್ತದೆ. ತ್ಯಾಗದಿಂದಲೇ ಮಹಾ ಜೀವನದ ಉಗಮ. ಮಹಾ ಜೀವನದ ಪ್ರವಾಹದ ನೀರು ನಮ್ಮ ಜೀವನದ ಕಿರುಗಾಲಿವೆಯಲ್ಲಿ ಕೋಡಿಯಾಗಿ ಹರಿಯ ಹತ್ತಿದರೆ ಮಾತ್ರ, ನಮ್ಮ ಸುತ್ತುಮುತ್ತಲೆಲ್ಲ ಸುಖಸಮೃದ್ಧಿ.

ಅವಿವಾಹಿತವಾದ ಆಯುಷ್ಯ, ವಿದ್ಯಾಸಂಪತ್ತಿನ ಬೊಕ್ಕಸ, ಭುವನೇಶ್ವರಿ ದೇವಿಯ ಒಪ್ಪಿತವುಳ್ಳ ಹುಂಡಿ. ಈ ಕರಣತ್ರಯಗಳನ್ನು ಮುಡಿಪುಕಟ್ಟಿ ಇಟ್ಟು ವೇದಶಾಸ್ತ್ರಗಳನ್ನೋದುತ್ತ ಕುಳಿತಿದ್ದ ವಿದ್ಯಾ-ರಣ್ಯರು, ಸಮಯ ಸಾಧಿಸಿ ಇವನ್ನೆಲ್ಲ ಜಗನ್ಮಾತೆಯ ಪದತಲದಲ್ಲಿ ಎಂದು ಅರ್ಪಿಸಿ ಕೃತಾರ್ಥನಾದೇನೆಂದು ದಾರಿ ಕಾಯುತ್ತಲಿದ್ದರು. "ಇಳಿಯುತಿದೆ ಪಾತಾಳ ಖಾತಕೆ। ಬೆಳೆದ ಭಾರತ ದೇಶವು॥ ಕಳಚುತಿವೆ ಧರ್ಮಾಲಯದ ಹೊಂ॥ ಗಳಸ ಕನ್ನಡಿ ಧ್ವಜಗಳು ॥" ಎಂಬ ಆರ್ತನಿನಾದವು ಇವರ ಕಿವಿಗೆ ಬಿದ್ದಗಳಿಗೆಯು ಅದೆಂಥ ಸುಮುಹೂರ್ತವೋ! ದಿನಾಲು ಕೇಳುವವರಿಗೆ ಅದೇನು ಬೆರಗಿನಬೊಬ್ಬೆಯಲ್ಲವಷ್ಟೇ. ಇಂದು ಮಾತ್ರ ಸ್ವಾಮಿಗಳು ಚಂಚಲ ಚಿತ್ತರಾಗಿ—

ಏಳು ಸಾಯಣ ಕಟ್ಟುಗ್ರಂಥವ
ನೇಳು ಪಂಪಾಕ್ಷೇತ್ರಕೆ।
ಗಾಳಿಗಂಟುಗಳೋದಿದೇತಕೆ
ಏಳು ಈ ಕ್ಷಣ ಮಾತ್ರಕೆ॥

ಲಕ್ಷ ಶಾಸ್ತ್ರಗಳೇಕೆ ಸಾಯಣ
ಲಕ್ಷ ಸೂತ್ರಗಳೇತಕೆ ।
ಮೋಕ್ಷ ಸಂಪಾದನಕೆ ನಿಶ್ಚಯ
ಮೋಕ್ಷ ಕೇಳು ಸ್ವತಂತ್ರತೆ ॥

ಪಾರತಂತ್ರ್ಯವು ಮೋಕ್ಷ ಸುಖಕಪ-
ಕಾರಿಯಿದುವೆ ಅಧೋಗತಿ ।
ಪಾರತಂತ್ರ್ಯ ಸ್ಥಿತಿಯ ಕುಲಸಂ-
ಹಾರವೇ ಸುತಪಃ ಕೃತಿ ॥

ಸ್ವತ್ವದರ್ಶನ ತಿಳಿಯದಲೆ ಬರೆ
ತತ್ವದರ್ಶಗಳೇತಕೆ ।
ಸ್ವತ್ವಮಂ ತಿಳಿಸದಲೆ ಲೋಕಕೆ
ತತ್ವಮಥನಗಳೇತಕೈ ॥

ಕ್ಷಣ ಸಮೂಹವೆ ಕಾಲಚಕ್ರವು
ಕ್ಷಣವು ಕಳೆದರೆ ದೊರೆಯದೈ ॥

— **ಶಾಂತಕವಿ.**

ಎಂದು ಕೊರಿದೆದ್ದರು. ವಿಶ್ವಾಮಿತ್ರನು ಕ್ಷಾತ್ರಬಲದಿಂದ ಬ್ರಹ್ಮ ತೇಜಸ್ಸನ್ನು ಹೊರ ಹೊಮ್ಮಿಸಲಿಕ್ಕೆ ರಾಜಮುಕುಟವನ್ನು ಒಗೆದೆದ್ದಂತೆ, ಬ್ರಹ್ಮತೇಜಸ್ಸಿನಿಂದ ಕ್ಷಾತ್ರಬಲವನ್ನು ಗಳಿಸಲಿಕ್ಕೆ ಈ ವಿದ್ಯಾರಣ್ಯ ಸನ್ಯಾಸಿಗಳು ಜಟಾವಲ್ಕಲಗಳನ್ನು ಬಿಗಿದು ಕಟ್ಟಿನಿಂತರು. ಅಲಲ! ಈ ಸನ್ಯಾಸಿಗೆ ದ್ರವ್ಯಾಭಾವದ ಮೂಲಕ ಗೃಹಪ್ರಪಂಚವು ಅಸಾಧ್ಯವಾಗಿತ್ತಲ್ಲವೇ? ಇದೇನು— ದೇಶಪ್ರಪಂಚವೇ ಕೊರಳಿಗೆ ಬಿದ್ದಿತಲ್ಲ! ರಾಜ್ಯಸ್ಥಾಪನೆಯೆಂದರೇನು ಸಾಮಾನ್ಯವೇ? ಧನವೆಲ್ಲಿಂದ ಬರುತ್ತದೆ? ಜನಬಲವೆಲ್ಲಿದೆ? ಇದೆಲ್ಲಾ ಸರಿ. ಆದರೆ ಸ್ವಾಮಿಗಳಿಗೆ

ಅವೆಲ್ಲವೂ ಇದ್ದವು. ಕರ್ತೃತ್ವಶಾಲಿಗೆ ಬಾಹ್ಯ ಸಾಮುಗ್ರಿಯು ತಾನಾ ಗಿಯೇ ಒದಗುತ್ತದೆ. 'ಕರ್ತೃವಿನ ಮನಸ್ಸಿನಲ್ಲಿ ಶುದ್ಧ ಹೇತುವೊಂ ದಿದ್ದರೆ ಸಾಕು. ಅದರಿಂದ ಜಗತ್ತನೆಲ್ಲ ಗೆಲ್ಲಬಹುದು.' (ಶ್ರೀ ವಿವೇ ಕಾನಂದ) ಸ್ವಭೂಮಿ, ಸ್ವಭಾಷೆ, ಸ್ವದೇಹ, ಸ್ವದೇಶ ಬಾಂಧವರು, ಸ್ವಧರ್ಮ ಇವೇ ಆ ವೀರ ಸನ್ಯಾಸಿಯ ಅಮಿತ ಬಲ, ಸವೆಯದ ಸಂಪತ್ತು. ಮೇಲೆ- "ಪರಮ ಭುವನೇಶ್ವರಿಯ ಕರುಣಾರ್ದ್ರ ದೃಷ್ಟಿ!"

ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆಂದು ಸಾಮಾನ್ಯ ಮಾತೊಂದಿದೆ. ಆದರೆ ದೇವರಾಜ್ಯದಲ್ಲಿ ಕೊಟ್ಟಷ್ಟೇ ತನಗಲ್ಲ; ಧಾನ್ಯದ ಕಾಳಿತ್ತರೆ, ಚಿನ್ನದ ಗುಂಡು ನಮ್ಮದಾಗುವದು. ‡ ಸರ್ವ ಸಮರ್ಪಣವು ವಿದ್ಯಾರಣ್ಯರಿಗೆ ಅಮಿತ ಸಾಮುಗ್ರಿಗಳನ್ನೆಲ್ಲ ಒದಗಿಸಿತು. "ಹಾಲಲೆದ್ದು, ನೀರಲೆದ್ದು" ಎಂದು ಮೊರೆ ಹೊಕ್ಕರೆ ಭೂಲೋಕದ ಸ್ವಾಮಿತ್ವ ನಮ್ಮದು. ಭುವನೇಶ್ವರಿಯ ಕರುಣಾರ್ದ್ರ ದೃಷ್ಟಿಯು ಅವರಿಗೆ ಕಾರ್ಯ ರಂಗದಲ್ಲಿ ಬೆಳಕನ್ನಿತ್ತಿತು. ರಾಜ್ಯ ಸ್ಥಾಪನೆಯ ಕಾಲಕ್ಕಂತೂ ದೇವಿಯು ಪ್ರತ್ಯಕ್ಷವಾಗಿ ಚಿನ್ನದ ಮಳೆಯನ್ನೇ ಸುರಿಸಿದಂತೆ ಹತ್ತೂ ನಿಟ್ಟಿನಿಂದ ಸಹಾಯ ಧನವು ನಡೆದು ಬಂತು. "ದೇವರೊಲ್ಮೆಯದಿರಲ್ ಎಳೆಗರುಂ ಎತ್ತಾಗದೇ?" ಮೂಕಂ ಕರೋತಿ ವಾಚಾಲಂ; ಪಂಗುಂ ಲಂಘಯತೇ ಗಿರಿಂ. "ನೀನೊಲಿದರೆ ಕೊರಡು ಕೊನರು ವದಯ್ಯ, ಬರಡು ಹಯನಾಗುವದಯ್ಯ." ಆದರೆ ಆ ಒಲವು ತ್ಯಾಗದ ಫಲವು.

ತುಂಗಭದ್ರೆಯ ತೀರದಲ್ಲಿ ನವ ನಗರವೊಂದು ಮುಗಿಲ ವರೆಗೆ ನಿಂತಿತು. ಕಂಗಾಲ ಕನ್ನಡಿಗರು ಸಂಜೀವಿನೀ ಸ್ಪರ್ಶದಿಂದ ನವಚೇತನ ರಾಗಿ ಸನ್ನದ್ಧರಾದರು. ವಿದ್ಯಾರಣ್ಯರು ಸನ್ಯಾಸಿದಿಬ್ಬವೇರುತ್ತಿರಲು

‡ ಶ್ರೀ ರವೀಂದ್ರನಾಥರ ಗೀತಾಂಜಲಿ ೫೦ನೇ ಪದ್ಯವನ್ನು ನೋಡಿರಿ.

ಮಂಗಳವಾದ್ಯಗಳು ಮೊಳಗಿದವು. ಹರಿಹರನು ವಿಜಯನಗರದ ರಾಜಾಧಿರಾಜನಾದನು. 'ಮಂಗಲವ್ವೈ ಕರ್ನಾಟಕ ದೇಶಕೆ। ಕರ್ನಾಟಕ ಸಿಂಹಾಸನಕೆ' ಎಂದು ಸ್ವಾಮಿಗಳು ಆಶೀರ್ವದಿಸಿದರು. ಅಂದು ೧೩೩೬ ನೇ ಇಸವಿ ಧಾತು ಸಂವತ್ಸರದ ವೈಶಾಖ ಶುದ್ಧ ಸಪ್ತಮಿ ಬುಧವಾರ.

## ವ್ಯವಹಾರ ವೇದಾಂತಗಳು ಒಂದು ಹುರಿಯಲ್ಲಿ

ವಿದ್ಯಾರಣ್ಯರು ನಿತ್ಯ ಸನ್ಯಾಸಿ. ರಾಜ್ಯ ಸ್ಥಾಪಿಸುವುದೂ, ಮುಖ್ಯ ಮಂತ್ರಿಯಾಗಿ ಕೆಲಸ ಮಾಡುವುದೂ ಶುದ್ಧ ವ್ಯವಹಾರ. "ಅಪ್ರತಿಮ ತಾಪಸನು, ಅಪ್ರತಿಮ ಕರ್ಮಠನು, ಅಪ್ರತಿಮ ಭೂತದಯೆಯುಳ್ಳಾತನು. ಅಪ್ರತಿಮ ಧೈರ್ಯದವ, ಅಪ್ರತಿಮ ಸಾಹಸಿಯು, ಅಪ್ರತಿಮ ರಾಜಕಾರಸ್ಥಾನಿಯು. ವೈಭವ ಸ್ಥಾಪಕನು, ವೈಭವದ ಚಾಲಕನು, ವೈಭವದೊಳಿದ್ದು ಪರ ವೈಭವವ ಸಾಧಿಸಿದವನು" ಎಂದು ಶ್ರೀಶಾಂತಗಳು ಹಾಡಿದ್ದುಂಟು. ವಿದ್ಯಾರಣ್ಯರು ವೇದಾಂತ ಬೇರೆ, ವ್ಯವಹಾರ ಬೇರೆಯೆಂದು ತಿಳಿದವರಲ್ಲ; ಧರ್ಮಕ್ಕೂ ರಾಜಕಾರಣಕ್ಕೂ ಸಮನ್ವಯ ಗೊಳಿಸಿದರು. 'ಪಂಚದಶಿ' 'ಜೀವನ್ಮುಕ್ತಿ ವಿವೇಕ'ಗಳಂಥ ಪ್ರಖ್ಯಾತವಾದ ವೇದಾಂತ ಗ್ರಂಥಗಳನ್ನು ರಚಿಸಿದ ಈ ಮುನಿಗಳು ಪರಾಶರ ಸ್ಮೃತಿಗೆ ಟೀಕೆ ಬರೆದು "ವ್ಯವಹಾರ ಮಾಧವೀಯ" ವೆಂಬ ಶುದ್ಧ ವ್ಯವಹಾರ ಜ್ಞಾನವನ್ನು ಬೋಧಿಸುವದಕ್ಕೂ ಮರೆಯಲಿಲ್ಲ. ಅವರು ಮುನಿಗಳೂ ಅಹುದು, ಮಂತ್ರಿಗಳೂ ಅಹುದು. ಅವರು ವಿದ್ಯಾತೀರ್ಥರ ಗುರ್ವನುಗ್ರಹವನ್ನು ಪಡೆಯಲಿಕ್ಕೂ ಸಮರ್ಥರು, ಹರಿಹರ ಬುಕ್ಕಣ್ಣರನ್ನು ವೇದಾಂತದಂತೆ ವ್ಯವಹರಿಸುವುದನ್ನು ಕಲಿಸಲಿಕ್ಕೂ ಸಮರ್ಥರು. ವಿದ್ಯಾತೀರ್ಥರೂ ಬುಕ್ಕರಾಯನೂ ಒಂದೇ ಕೆಲಸದ ಎರಡು ಭಾಗಗಳನ್ನು ಮಾಡತಕ್ಕವರೆಂದೂ, ಒಬ್ಬರ ರೂಪಾಂತರವೇ ಮತ್ತೊಬ್ಬನೆಂದೂ ತಿಳಕೊಂಡವರು. ವಿದ್ಯಾತೀರ್ಥರು ಧರ್ಮದ

ಸೂಕ್ಷ್ಮದೇಹ, ಬುಕ್ಕರಾಯನು ಸ್ಥೂಲದೇಹ. ಮಠ ಮಾನ್ಯಗಳು ಧರ್ಮಕ್ಕೆ ಆತ್ಮವಾದರೆ ರಾಜಕಾರಣವು ದೇಹವಿದ್ದಂತೆ. "ತತ್ರಾಯಂ ಸ್ಥಿತಿ ಮೂರ್ತಿಮಾಕಲಯತಿ ಶ್ರೀ ಬುಕ್ಕಣಕ್ಷ್ಮಾಪತಿಃ। ವಿದ್ಯಾತೀರ್ಥ ಮುನಿಸ್ತದಾತ್ಮನಿ ಲಸನ್ಮೂರ್ತಿಸ್ತ್ವನುಗ್ರಾಹಿಕಾ" ಎಂದು ಸ್ವತಃ ವಿದ್ಯಾರಣ್ಯರೇ ಹೇಳಿದ್ದಾರೆ. "ಬ್ರಹ್ಮನ (ಐದು) ಲಕ್ಷಣಗಳಲ್ಲಿ ಎರಡು ಬುಕ್ಕರಾಜನಲ್ಲಿ ಕಾಣ ಸಿಗುತ್ತವೆ. (ಲೋಕ) ಸಂರಕ್ಷಣಕ್ಕೆ ಕಾರಣ ನಾದ್ದರಿಂದ ಆತನು ಪರಬ್ರಹ್ಮನ ಸ್ಥಿತಿ ಮೂರ್ತಿ. ಲೋಕಾನುಗ್ರಹ ನಿರತರಾದ ವಿದ್ಯಾತೀರ್ಥ ಸ್ವಾಮಿಗಳು ಆತನ ಹೃದಯದಲ್ಲಿ ನೆಲೆಸಿರು ವದರಿಂದ ಆತನು ಪರಬ್ರಹ್ಮದ ಅನುಗ್ರಹ ಮೂರ್ತಿ." ಬುಕ್ಕರಾಯನು ವಿದ್ಯಾತೀರ್ಥರ ಕೃಪಾ ಸಮುದ್ರಕ್ಕೆ ಚಂದ್ರನಂತೆಯೂ ಅವರ ಲೌಕಿಕ ಕಾರ್ಯಗಳನ್ನೆಸಗುವ ಸ್ಥೂಲ ಶರೀರದಂತೆಯೂ ಇದ್ದನೆಂದು ಒಂದು ಶಾಸನವು ಸಾರಿ ಹೇಳುತ್ತದೆ. † ವಿದ್ಯಾರಣ್ಯರು ದೇಶಾಚಾರ ಕುಲಾ ಚಾರಗಳನ್ನು ಸ್ಮೃತಿ ತತ್ವಗಳೊಡನೆ ತಳಕುಹಾಕಲೆಳಿಸಿ ಅದರಲ್ಲಿಷ್ಟೋ ಸಾಧಿಸಿ ಬಿಟ್ಟಿದ್ದಾರೆ. ಆ ಕಾಲಕ್ಕೆ ಹಿಂದು ರಾಜ್ಯಗಳು ಖಂಡತುಂಡ ವಾಗಿರದೆ ಬಲಿಷ್ಠವಾಗಿದ್ದಿದ್ದರೆ ಅವರ ಈ ಪ್ರಯತ್ನದ ಫಲವು ಇನ್ನೂ ಕಳೆಗೊಳ್ಳಬಹುದಾಗಿತ್ತೆಂದು ಬಲ್ಲಿದರ ಅಭಿಪ್ರಾಯ. ಸ್ವಾಮಿಗಳು ವ್ಯವಹಾರ ವೇದಾಂತದ ಮೀಮಾಂಸೆ ಮಾಡಿದ್ದು ಹೇಗೆಂದರೆ—

"ವ್ಯವಹಾರವು ವೇದಶಾಸ್ತ್ರಗಳಿಂದಲೇ ತಿಳಿಯತಕ್ಕುದಾದರೂ ಅದು ಧರ್ಮವೆನಿಸದು. ಒಂದು ವೇಳೆ ಅದು ಧರ್ಮವೆಂದೇ ಇಟ್ಟು ಕೊಂಡರೂ ಅದರ ಉಪಯೋಗವು ಐಹಿಕ ಮಾತ್ರವೇ. ಶಾಸ್ತ್ರವಿರುದ್ಧ ವಾದ ವ್ಯವಹಾರವುಳ್ಳವನಿಗೆ ನರಕವಾಗುವದೆಂದು ಹೇಳಿದರೂ ಅದರಲ್ಲಿ ಪರಲೋಕ ಫಲವೇ ಮುಖ್ಯ ಫಲನೆಂಬುದನ್ನು ನಾವು ಸಮ್ಮತಿಸೆವು.

† ವಿದ್ಯಾತೀರ್ಥ ಮುನೇಃ ಕೃಪಾಂಬುಧಿ ಶಶಿ ಭೋಗಾವತಾರೋ ಭವತ್.

ಐಹಿಕ ಫಲವು ಮುಖ್ಯವಾಗಿಯೂ, ಪರಲೋಕ ಫಲವು ಅಮುಖ್ಯವಾಗಿಯೂ ಲಭಿಸುವ ನಡವಳಿಗೆ ವ್ಯವಹಾರವೆಂದೆನ್ನುವರು. ಆದರೇನು? ಐಹಿಕ ಫಲಪ್ರಧಾನವಾದ ವ್ಯವಹಾರಕ್ಕೂ ವೇದವೇ ಮೂಲ." (ವ್ಯವಹಾರ ಮಾಧವೀಯ)

"ರಾಜ್ಯವೇ ದೇವಾಲಯ, ಧರ್ಮವೇ ಅದರಲ್ಲಿ ಪೂಜ್ಯವಾದ ದೇವರು" ಎಂದು ಹೇಳಿದ್ದಲ್ಲದೆ ವಿದ್ಯಾರಣ್ಯರು "ರಾಜ್ಯವು ನನ್ನದೂ ಅಲ್ಲ, ನಿನ್ನದೂ ಅಲ್ಲ ಶ್ರೀ ವಿರೂಪಾಕ್ಷೇಶ್ವರನದು. ನಿಮ್ಮ ಕೃತಿಗಳೆಲ್ಲವೂ ದೇವನಿಚ್ಛೆಯನರಿತು ಅದನೆ ಅನುವರ್ತಿಸಿ ಮಾಡಿದವುಗಳಾಗಿರಲೆಂದು ವ್ರತ ಹಿಡಿಯಿರಿ. ಅಂದರೆ ನಿಮಗೇನೂ ಭಯವಿಲ್ಲ" ಎಂದು ಹರಿಹರ ಬುಕ್ಕರಿಗೆ ಉಪದೇಶಿಸಿ ರಾಜಕಾರಣಕ್ಕೆ ಧರ್ಮದ ಕವಚ ತೊಡಿಸಿ ನಿಲ್ಲಿಸಿದರು. ಹರಿಹರಾದಿ ರಾಜರು ರಾಜಕೀಯ ಪ್ರತಿಯೊಂದು ಕಾಗದ ಪತ್ರಕ್ಕೆ 'ಶ್ರೀ ವಿರೂಪಾಕ್ಷ' ಎಂದು ಅಂಕಿತಮಾಡುತ್ತಿದ್ದರೆಂಬುದು ಸರ್ವ ಶ್ರುತ. ಧರ್ಮವನ್ನು ರಾಜಕಾರಣದಲ್ಲಿ ಬಳಸಿ, ರಾಜಕಾರಣವನ್ನು ಧಾರ್ಮಿಕವಾಗಿ ಬೆಳೆಸಿ ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯವನ್ನು ಅಜೇಯವನ್ನಾಗಿ ಮಾಡಿದರು.

† ಮಾದರಸನು ರಾಜ್ಯಾಂಗದಲ್ಲಿ ದೊಡ್ಡ ಅಧಿಕಾರಿ, ಮಂತ್ರಿ. ಆದರೇನು? ಗ್ರಾಮಭೂಮಿಗಳನ್ನು ಸ್ವಂತಕ್ಕಾಗಿ ವಿನಿಯೋಗಿಸಿಕೊಳ್ಳಲಿಕ್ಕೆ ಎಳ್ಳಷ್ಟು ಅಧಿಕಾರವಿಲ್ಲದ್ದರಿಂದ ಆತನು ತನ್ನ ದಾನ ಧರ್ಮಗಳಿಗಾಗಿ ಭೂಮಿ-ಸೀಮೆಯನ್ನು ಬೆಲೆಗೆ ತೆಗೆದುಕೊಂಡ ಕಥೆಯನ್ನು ಕೇಳಿದರೆ, ರಾಜ್ಯವು ವಿರೂಪಾಕ್ಷೇಶ್ವರನದೆಂಬ ವಿಚಾರವು ಎಲ್ಲಿಯ ವರೆಗೆ ಅಳವಟ್ಟಿತ್ತೆಂಬದನ್ನು ತಿಳಿಯಬಹುದು.

---

† ಹರಿಹರನ ತೃತೀಯ ಬಂಧುವಾದ ಮಾರಪ್ಪನು ಚಂದ್ರಗುತ್ತಿಯ ಮಂಡಲೇಶ್ವರ. ಆತನಿಗೆ ಅಂಗೀರಸ ಗೋತ್ರನೂ ಚಾವುಂಡರಾಯನ ಪುತ್ರನೂ ಆದ ಮಾಧವಾಮಾತ್ಯ ಅಥವಾ ಮಾದರಸನು ಮಂತ್ರಿ.

"ಹಿಂದು ಜನರ ಕಲ್ಯಾಣವನ್ನು ಸಾಧಿಸುವದೇ ವಿಜಯನಗರದವರ ಮುಖ್ಯೋದ್ದೇಶ"ವೆಂದು ವಿದ್ಯಾರಣ್ಯರೇ ವ್ಯಕ್ತಪಡಿಸಿದ್ದಾರೆ. 'ಸ್ಮಾರ್ತೋಚ್ಛ್ರಾಯ ಧುರಂಧರೋ ವಿಜಯತಾಂ ಶ್ರೀ ಬುಕ್ಕಣ ಕ್ಷ್ಮಾಪತಿಃ' ವೇದಾಂತಿಗಳೂ, ಜ್ಞಾನಮಾರ್ಗ ನಿಷ್ಣಾತರೂ, ಮಾಯೆ ವಾಸನೆಗಳನ್ನು ಗೆಲ್ಲುವದಕ್ಕೆ ಉಪಾಯಗಳನ್ನು ಅಧಿಕಾರವಾಣಿಯಿಂದ ಹೇಳುವವರೂ ಆದ ಸ್ವಾಮಿಗಳಿಗೆ 'ಹಿಂದು ಜನರ ಕಲ್ಯಾಣ' ಎಂದು ಸಂಕುಚಿತ ಭಾವವೇಕೆ ಬಂತು? ಜಗತ್ಕಲ್ಯಾಣದ ಬುಡಬುಡಿಕೆಯನ್ನೇಕೆ ಬಾರಿಸಲಿಲ್ಲ? 'ಆತ್ಮವತ್ ಸರ್ವ ಭೂತಾನಿ'ಯ ಅರ್ಥವು ಅವರಿಗೆ ತಿಳಿಯದೆ ಹೋಗಿರಬಹುದೇ? ಆದರೆ ಸ್ವಾವಲಂಬನ, ಸ್ವಸಂರಕ್ಷಣಾ ಶಕ್ತಿ ಇವಿಲ್ಲದ ಜನಾಂಗವು ಜನಾಂಗವೇ ಅಲ್ಲ. ನೆರೆಹೊರೆಯ ಜನಾಂಗದಲ್ಲಿ ತಲೆಯೆತ್ತಿ ನಿಲ್ಲಲಿಕ್ಕೂ, ಅನನುಕೂಲ ಪರಿಸ್ಥಿತಿಯಲ್ಲಿಯೂ ದೇಶದ ಜೀವಾಳವಾದ ಸಂಸ್ಕೃತಿಯನ್ನು ಕಾಯ್ದುಕೊಳ್ಳಲಿಕ್ಕೂ ಶಕ್ತಿ ಬಾರದಿರುವ ವರೆಗೆ 'ವಿಶ್ವ ಪ್ರೇಮ'ದ ಮಾತುಗಳನ್ನಾಡಿದರೆ ಫಲವೇನು? ಅವಶ್ಯಕತೆಯಿರುವಲ್ಲಿ ಕಲ್ಯಾಣದ ಭಾರವನ್ನು ವಹಿಸುವುದೇ ಸ್ವಾಮಿಗಳ ಉದ್ದೇಶವಾಗಿತ್ತು. ಭುವನೇಶ್ವರಿಯ ಕೃಪೆಯುಂಟೆಂದು ಉದ್ದ ನೀರಿಗೆ ಇಳಿಯುವ ಅವ್ಯವಹಾರಿಗಳಾಗಿದ್ದಿಲ್ಲ.

ಅನಾಥರಾದ ಭೂನಾಥರಿಗೆ ಕೈಕೊಟ್ಟು ಕಾಪಾಡಿದ ವಿಜಯನಗರದ ಬುಕ್ಕರಾಯನಿಗೆ 'ಹಿಂದುರಾಯ ಪರಿತ್ರಾಣ'ನೆಂದೂ, ಒಕ್ಕಟ್ಟನ್ನು ಬೆಳೆಸುವ ಕೆಲಸದಲ್ಲಿ ವಚನವಿತ್ತು ತಪ್ಪುವ ರಾಜರನ್ನು ಶಿಕ್ಷಿಸಿ ದಾರಿಗೆ ತರಲಿಕ್ಕೂ ಸಮರ್ಥನಾದ ಆತನಿಗೆ 'ಭಾಷೆಗೆ ತಪ್ಪುವ ರಾಯರ ಗಂಡ'ನೆಂದೂ ಬಿರುದುಗಳಿದ್ದವು. "ಸಖ್ಯದಿಂದ ಕೇಳ್| ಒಕ್ಕಟ್ಟಾಗುವ| ದೊಕ್ಕಟ್ಟಿಂದೆ ಮಹಾ ಕೃತಿಯು" ಎಂಬ ವ್ಯಾವಹಾರಿಕ ಫಲವು ಸ್ವಾಮಿಗಳ ವೇದಾಂತವೃಕ್ಷದ್ದೇ ಆಗಿದೆ. ಆ ಒಕ್ಕಟ್ಟಿಗಾಗಿಯೇ

ಬುಕ್ಕರಾಯನಿಗೆ ' ಹರಿಹರ ' ನೆಂದು ಸಂಬೋಧಿಸಿದ್ದರಿಂದ ಸ್ಮಾರ್ತ-ವೈಷ್ಣವರಿಬ್ಬರ ಅಂತರಂಗದಲ್ಲಿಯೂ ಸಹಾನುಭೂತಿಯುದಿಸಲಿಕ್ಕೆ ಕಾರಣವಾಯಿತೆನ್ನಬಹುದು.

ಮುಹಮ್ಮದೀಯರ ಆಸುರೀ ಕೃತಿಗಳನ್ನು ತಡೆಮಾಡಲು ಜನ್ಮಿಸಿದ ಮೂಲಕ ಆ ರಾಜ್ಯದ ಪಳವಿಗೆಯು ಹಂದಿಯ ಚಿತ್ರದಿಂದ ಅಲಂಕೃತವಾಯಿತೆಂದು ಕೆಲವು ಧೂರ್ತರು ಸಾಧಿಸುವದುಂಟು. ಆದರೆ ಪರಮಾತ್ಮನ ಅವತಾರಗಳಲ್ಲೊಂದಾದ ವರಾಹಾವತಾರದ ಚಿಹ್ನವೇ ಧ್ವಜಕ್ಕಿತ್ತೆಂದು ಹೇಳುವುದೇ ಸಮಂಜಸವೆನಿಸುವದು. ಇದು ' ವ್ಯವಹಾರ ಮಾಧವೀಯ ' ಗ್ರಂಥದಲ್ಲಿಲ್ಲದಿದ್ದರೂ ' ಮಾಧವೀಯ ವ್ಯವಹಾರ ' ದಲ್ಲಿರಲಿಕ್ಕೇ ಬೇಕು. ಆದರೆ ಸ್ವಾಮಿಗಳು ಮುಸಲ್ಮಾನ ದ್ವೇಷಿಗಳಲ್ಲವೆಂದೂ, ಸ್ವರಕ್ಷಣೆಯೇ ಅವರ ಮುಖ್ಯೋದ್ದೇಶವೆಂದೂ ಮುಂದೆ ತಿಳಿಯುವದು.

## ತ್ಯಾಗ-ಭೋಗಗಳ ಸಮನ್ವಯ

ಸಂಪೂರ್ಣ ತ್ಯಾಗದಿಂದಲೇ ಸುಂದರ ಭೋಗದ ಉತ್ಪತ್ತಿ. ತ್ಯಾಗ-ಭೋಗಗಳ ಸಮನ್ವಯದಲ್ಲಿ ಜೀವನಕ್ಕೆ ಸಫಲತೆ, ಸಹಜಾನಂದ. ವಿಜಯನಗರದ ಚರಿತ್ರೆಯೇ ಸುಂದರ ಸಮನ್ವಯಗಳ ಆಗರವಾಗಿತೆನ್ನಬಹುದು. * ಅವತಾರಿಯೆನಿಸಿದ ರಾಜ, ಸನ್ಯಾಸಿಯಾದ ಮಂತ್ರಿ. ರಾಜನು ವಿರೂಪಾಕ್ಷದೇವರ ಆಯುಧವಾದರೆ ಮಂತ್ರಿಯು ಭುವನೇಶ್ವರಿಯ ಶಕ್ತಿ. ಪಂಪಾಕ್ಷೇತ್ರವು ಪಾರಮಾರ್ಥಿಕ, ವಿಜಯನಗರವು ವ್ಯಾವಹಾರಿಕ. ರಾಜಧಾನಿಯ ಬಿರುದಿನ ಬಳಿಯಂತಿರುವ ನದಿಯು ತುಂಗವೂ ಭದ್ರವೂ ಆದ ತುಂಗಭದ್ರೆ. " ಗಿರಿಗಳ್ ಝರಿಗಳ್ !

---

* ಮ್ಲೇಚ್ಛ ಬಾಧೆಯನ್ನು ಪರಿಹರಿಸಿ ಹಿಂದುಜನರನ್ನುದ್ಧರಿಸಲು ಅವತರಿಸಿದ ದೇವರೆಂದು ಬುಕ್ಕರಾಯನನ್ನು ಸಾಮಾನ್ಯ ಜನರು ತಿಳಿದಿದ್ದರೆಂದು ಶಾಸನಗಳಿವೆ.

ತೊರೆಗಳ್ ಕೆರೆಗಳ್ | ಅರಣ್ಯಗಳ್ ಗ-| ಹ್ವರಗಳ್ " ಇತ್ತ ಇದ್ದರೆ ಅತ್ತ "ಪುರಗಳ್ ಗುಡಿಗೋ | ಪುರಗಳ್ " ಇದ್ದವು. ಭವ್ಯತೆಯೊಂದೆಡೆ, ದಿವ್ಯತೆಯೊಂದೆಡೆ, ಇಲ್ಲಿ ಜ್ಞಾನನಿಧಿಗಳಾದ ಪಂಡಿತರು, ಅಲ್ಲಿ ಕರ್ತೃತ್ವಶಾಲಿಗಳಾದ ಕಲಿಗಳು. ರಸಿಕ ಅರಸರು, ಸರಸ ಕವಿಗಳು. ಇವೆಲ್ಲವೂ ಸ್ವಾಮಿಗಳ ವಿಶಾಲ ದೃಷ್ಟಿ ಹಾಗೂ ಜೀವನ ಪ್ರೇಮಗಳಲ್ಲಿ ಫಲಿಸಿದವೆನ್ನಬೇಕು.

**ಸಮಭಾವನೆ**

ಕನ್ನಡಿಗರಲ್ಲಿ ಒಕ್ಕಟ್ಟನ್ನು ಹುಟ್ಟಿಸಿದ ವಿದ್ಯಾರಣ್ಯರು ಅದನ್ನು ಸಾಧಿಸಿದ್ದು ವ್ಯಾವಹಾರಿಕ ರೀತಿಯಿಂದ. ಇದೊಂದು ದೈವೀ ಶಕ್ತಿಯನ್ನು ಯೋಗ್ಯವಾಗಿ ಬಳಸುವ ಕಲೆ. ಆತ್ಮಜ್ಯೋತಿಯನ್ನು ಪಡೆದರೆ ಮನೆಯಲ್ಲಿ ರಾತ್ರಿ ದೀಪ ಹಚ್ಚುವ ಅಗತ್ಯವಿಲ್ಲವೆನ್ನುವವನಂತೆ ಸಾಮಾನ್ಯ ವ್ಯವಹಾರಗಳನ್ನೂ ದೈವೀ ಶಕ್ತಿಯಿಂದಲೇ ಸಾಧಿಸಲೆಳಸುವುದು ಹಾಸ್ಯಾಸ್ಪದ. ಒಕ್ಕಟ್ಟಿನಿಂದ ಮಹಾ ಕೃತಿಯೂ, ದೇಶಹಿತವೂ ಸಾಧಿಸುವವಲ್ಲದೆ " ಸುಹಿತದಿ ಮಾನವನಮರತ್ವಂ " ಎಂಬ ಭರವಸೆಯೂ ಅವರಿಗಿತ್ತು. ವ್ಯವಹಾರವೆಂದರೆ ನಿಸ್ಸತ್ವದ ಮುದ್ದೆಯಾಗದಂತೆ ಅವರು ಎಚ್ಚರ ಪಡುತ್ತಿದ್ದರು. ಜಾತಿಜಾತಿಗಳಲ್ಲಿಯೂ ಸಮರ್ಥರಾದವರು ಯೋಗ್ಯಸ್ಥಾನ - ಮಾನಗಳಿಂದ ಮನ್ನಿಸಲ್ಪಡುತ್ತಿದ್ದರು ಆದರೆ ಜಾತಿವಾರ ಪದ್ಧತಿಯ ಹುಚ್ಚಾಟವಲ್ಲ. ಜೈನರಲ್ಲಿ ಬೈಚಪ, ಇರುಗಪ ಎಂಬವರು ದಂಡೇಶರಾಗಿದ್ದರೆಂದೂ ಲಿಂಗವಂತರಲ್ಲಿ ಬಸವಯ್ಯನು ದಂಡನಾಯಕನಿದ್ದನೆಂದೂ ತಿಳಿದ ವಿಷಯ.

ಒಮ್ಮೆ ಆನೆಗೊಂದಿ, ಹೊಸಪಟ್ಟಣ, ಪೆನುಗೊಂಡೆ ಮೊದಲಾದ ಪ್ರಾಂತಗಳಲ್ಲಿ ಜೈನರಿಗೂ ವೈಷ್ಣವರಿಗೂ ಮತಸಂಬಂಧವಾಗಿ ಮನಸ್ತಾಪವಾದಾಗ ಬುಕ್ಕರಾಯನು ಆ ಉಭಯರಿಗೂ ಬಂಧುಭಾವ

ವುಂಟಾಗುವಂತೆ ನಿಷ್ಪಕ್ಷಪಾತವಾಗಿ ನ್ಯಾಯ ಬಗೆಹರಿಸಿದನೆಂದು ಶಾಸನಗಳಿಂದ ತಿಳಿಯುತ್ತದೆ. ಈ ಭಾವನೆಗಳೆಲ್ಲ ವಿಜಯನಗರದ ರಾಜರಲ್ಲಿ ಒಡಮೂಡಿದ್ದು ವಿದ್ಯಾರಣ್ಯರಿಂದಲೇ ಎಂಬುದು ನಿಶ್ಚಯ. ಬುಕ್ಕನ ಮಗ ಹರಿಹರನು ತಾನು 'ಧರ್ಮ ಬ್ರಹ್ಮಾಧ್ವನ್ಯ' ನೆಂದುಕೊಂಡ ದಾನಶಾಸನವುಂಟು. ಅದ್ವೈತಾನಂದದ ಸೌರಭವನ್ನು ತಾಳಿದ ಭಾರತೀತೀರ್ಥರೆಂಬ ಕಮಲವು ವಿದ್ಯಾತೀರ್ಥ ಸರೋವರದಲ್ಲಿ ಹುಟ್ಟಿತೆಂತಲೂ, ವಿದ್ಯಾರಣ್ಯ ಸೂರ್ಯನಿಂದ ಅರಳಿ ಕಾಂತಿಗೊಂಡಿತೆಂತಲೂ, ಅದರಲ್ಲಿ ಬುಕ್ಕರಾಜನೆಂಬ ಹಂಸವು ಪುನಃ ಪುನಃ ವಿಹರಿಸುತ್ತದೆಂತಲೂ ಇಮ್ಮಡಿ ಹರಿಹರನೇ ಬರೆಯಿಸಿದ ಶ್ಲೋಕಗಳಿಂದ ತಿಳಿಯುತ್ತದೆ.

ವಿಜಯನಗರಕ್ಕೆ ನಿಕಟ ಸಂಬಂಧಿಗಳಾದ ಮುಹಮ್ಮದೀಯರೆಂದರೆ ಬಾಮನಿ ರಾಜರು. ಅವರೊಡನೆ ವಿಜಯನಗರದವರ ಸ್ನೇಹವಿತ್ತು. ಸ್ನೇಹಬೇಕೆಂದವರೊಡನೆ ಸ್ನೇಹ; ಟೊಣ್ಣೆಯುವರೊಡನೆ ಟೊಣ್ಣೆ! "ಅಲ್ಲಾಉದ್ದೀನ ಹಸನ ಗಂಗೂ ಬಹಮನಿ" ಎಂಬ ಬಿರುದಿನಿಂದ ಆ ಬಾದಶಹನ ಅಂತರಂಗವು ಹಿಂದುಗಳ ಬಗ್ಗೆ ದ್ವೇಷರಹಿತವೆಂದು ಕಂಡುಬಂದದ್ದರಿಂದ ಅಲ್ಲಿ ಸ್ನೇಹವಂಕುರಿಸಿತು. ಬುಕ್ಕರಾಯನು ಅಲ್ಲಾಉದ್ದೀನನಿಗೆ ದೊಡ್ಡ ಮಾಣಿಕ್ಯವೊಂದನ್ನು ಬಹುಮಾನವಾಗಿ ಕಳುಹಿದನೆಂದೂ, ಅದನ್ನಾತನು ತನ್ನ ಸಿಂಹಾಸನದ ಮೇಲೆ ಛತ್ರದ ಮೇಲುಗಡೆ ಇರಿಸಿಕೊಂಡು ಗೌರವಿಸಿದನೆಂದೂ ತಿಳಿದು ಬಂದಿದೆ. ಈ ದೇಶದಲ್ಲಿಯೇ ನೆಲೆಸಿ ಮುಹಮ್ಮದೀಯರು ಭಾರತೀಯರಾದ ಮೇಲೆ ಪ್ರೀತಿಗೆ ಪ್ರೀತಿಯನ್ನು ತೋರಿಸುವುದು ನ್ಯಾಯವಷ್ಟೇ? ಕದನಗಳುಂಟಾಗುವುದೇ ಇಲ್ಲವೆಂತಲ್ಲ. ಆಗ ಅವು ದೇಶೀಯರಲ್ಲೇಳುವ ಅಂತಃಕಲಹಗಳಾಗಿ ಪರಿಣಮಿಸುತ್ತವೆ. ಅಂತಃಕಲಹಗಳುಂಟಾಗುವುದೂ ಸಹಜಕ್ರಮ. ಅಲ್ಲಾಉದ್ದೀನ ಬಹಮನಿಯೊಡನೆ ಬೆಳೆದ ಪ್ರೀತಿಯು ಮುಂದೆ ಮುಹಮ್ಮದಶಹನ ಕಾಲಕ್ಕೆ ಉಳಿಯದೆ ಅದು ಮನಸ್ತಾಪವಾಗಿ ಪರಿಣಮಿಸಿತು. ಅದಕ್ಕೂ ಕಾರಣವಿಲ್ಲದಿಲ್ಲ. ಆ ಮಾತು ಬೇರೆ.

**ಪರಂಪರಾಪ್ರೀತಿ, ನೂತನತೆಯಲ್ಲಿ ವಿಶ್ವಾಸ**

ಹಳೆಯದನ್ನು ಹಳಿಯದೆ, ಹೊಸದನ್ನು ಎಸೆದೊಗೆಯದೆ ಹಿಂದಿನ ಕಾಲದ ಬೀಜವನ್ನೂ, ಹೊಸ ಕಾಲದ ಸತ್ತ್ವವನ್ನೂ ಯೋಗ್ಯ ರೀತಿಯಾಗಿ ಅಸುಗೊಳಿಸಿದರೆ ಇಂದಿನ ಬೆಳೆಗೆ ಸಾಫಲ್ಯ. ಈ ತತ್ವತಿಳಿದ ವೈದ್ಯನೇ ನಾಡಿನ ರೋಗ ಕಳೆಯಬಲ್ಲ ಧನ್ವಂತರಿ. ಇಂಥ ಧನ್ವಂತರಿಗಳು ಆಗಾಗ ಹುಟ್ಟಿ ಬರುತ್ತಿರುವದರಿಂದಲೇ ಭಾರತೀಯ ಸಂಸ್ಕೃತಿಯ ಸನಾತನ ಆತ್ಮವು ಅಮರವಾಗಿಯೇ ಉಳಿದು ಸಂಸ್ಕಾರ ಹೊಂದಿದ ದೇಹಗಳು ಮಾತ್ರ ಬಾಹ್ಯದಲ್ಲಿ ಬದಲಿಸುತ್ತಲಿವೆ. ಹಳೆಯದರ ಅನುಭವ ಹಾಗೂ ಹೊಸದರ ಹುರುಪು ಇವುಗಳ ಸುಂದರ ಸಂಗಮದಿಂದ ನಮ್ಮ ಪ್ರಾಚೀನ ಭಾರತ ನದಿಯು ಗಿರಿ ದರಿಗಳನ್ನು ದಾಟಿ, ವಿಶಾಲವಾಗುತ್ತ ಬಂದಿದೆ. "ಧರ್ಮದ ಸ್ವರೂಪವು ಎಂದಿಗೂ ಒಂದೇ ಆದರೂ ಅದರ ಪ್ರಕಾಶವು ಜನರ ಸ್ಥಿತಿ ಸಂದರ್ಭಗಳಿಗೆ ತಕ್ಕಂತೆ ಆಗಿನದಾಗ ಮಾರ್ಪಾಡಾಗುವದು" ಎಂದು ವಿದ್ಯಾರಣ್ಯರು ಕಂಠೋಕ್ತವಾಗಿ ಹೇಳಿದ್ದಾರೆ. ವ್ಯಾಸ-ಯಾಜ್ಞ್ಯವಲ್ಕ್ಯ ಮೊದಲಾದ ಋಷಿವರರು ಹಾಕಿಕೊಟ್ಟ ವಿಧಿ ಆ ದೇಶಗಳ ಮೂಲ ಸೂತ್ರಗಳನ್ನು ತನ್ನ ಪೂರ್ವದ ಮಹನೀಯರು ಮಾರ್ಪಡಿಸುತ್ತ ಬಂದ ಸರಣಿಯನ್ನು ಅನುಸರಿಸಿ ಪರಿಷ್ಕಾರಗೊಳಿಸುವ ಕೆಲಸವನ್ನೇ ಸ್ವಾಮಿಗಳು ಮಾಡಿದರು.

ಹಿಂದು ಜನರ ಉದ್ಧಾರಕ್ಕಾಗಿಯೇ ಸ್ಥಾಪಿತವಾದುದೂ, ದಕ್ಷಿಣ ಭಾರತದಲ್ಲೆಲ್ಲಾ ವ್ಯಾಪಿತವಾದದ್ದೂ ಆದ ಸಾಮ್ರಾಜ್ಯಕ್ಕೆ "ಕರ್ನಾಟಕ ಸಿಂಹಾಸನ" ಎಂಬ ಹೆಸರುಂಟಾದದ್ದು ಅವರ ಪರಂಪರಾಪ್ರೀತಿಯ ಕುರುಹು. ಹಿಂದೆ ಹೇಳಿದ ರಾಜಕೀಯ ಅಂತರಂಗವು ಪರಂಪರಾಪ್ರೀತಿಗೂ, ಇನ್ನು ಮುಂದೆ ಹೇಳದ ರಾಜಕೀಯ ಬಾಹ್ಯಾಂಗವು ನೂತನತೆಯ ವಿಶ್ವಾಸಕ್ಕೂ ಸಾಕಷ್ಟು ಸ್ಪಷ್ಟವಾದ ಉದಾಹರಣೆಯೆನ್ನಬಹುದು. ಕಾರ್ಯ ಸಾಧನೆಯ ಕ್ರಮಕ್ಕೆ ಈ ಎರಡು ಕಣ್ಣುಗಳು ಮುಖ್ಯ.

## ರಾಜಸತ್ತಾತ್ಮರಾಜ್ಯವಾದರೂ ಪ್ರಜೆಗಳ ರಾಜ್ಯವೇ

ವಿದ್ಯಾರಣ್ಯರ ರಾಜ್ಯಕ್ರಮವು ಸಾಮ್ರಾಜ್ಯಶಾಹಿಯಾಗಿಯೇ ಉಳಿಯದೆ ಫ್ರಾನ್ಸ್-ರಶಿಯಗಳಂತೆ ಕ್ರಾಂತಿಯಾಗಿ ರಾಜ್ಯಗಳ ಪ್ರಜೆಗಳ ಕೈಯಲ್ಲಿ ಬರಬೇಕಾಗಿತ್ತೆಂದು ಕೆಲವರಿಗೆ ತೋರಬಹುದು. ಆದರೆ ಇಂಗ್ಲಂಡ್, ಇಟಲಿ, ಜಪಾನ ದೇಶಗಳು ಪ್ರಜೆಗಳ ಕೈಯಲ್ಲಿಯೇ ಇದ್ದರೂ ಅರಸನು ಇಲ್ಲದಿಲ್ಲ. ವಿಜಯನಗರದ ರಾಜರು ಧರ್ಮ ಬುದ್ಧಿಯಿಂದ ರಾಜ್ಯವು ತನ್ನದಲ್ಲವೆಂದು ಹೇಳುವವರು. ಆಧುನಿಕ ರಾಜರು ಪ್ರಜಾಪ್ರಾಬಲ್ಯಕ್ಕಾಗಿ ರಾಜ್ಯವು ಪ್ರಜೆಗಳದೆನ್ನುವರು. ಸೂಕ್ಷ್ಮವಾಗಿ ನೋಡಿದರೆ ಆಧುನಿಕ ಪ್ರಜಾಪ್ರಭುತ್ವದ ರಾಜಕೀಯ ಅಂಶಗಳೆಷ್ಟೋ ಆಗಿನ ಕಾಲಕ್ಕೆ ನಮ್ಮಲ್ಲಿ ಧರ್ಮಾಂಗವಾಗಿ ಆಚರಿಸಲ್ಪಡುತ್ತಿದ್ದವು. ಹೇಗೆಂದರೆ— "ರಾಜ್ಯವು ಪ್ರಜೆಗಳದು. ಅರಸು ಬೇಕಿಲ್ಲ. ರಾಜ್ಯಾಧಿಕಾರಿಗಳು ಜನಸೇವಕರು" ಎಂದು ಹೇಳುವುದು ಆಧುನಿಕ ರಾಷ್ಟ್ರಧರ್ಮ. "ರಾಜ್ಯವು ನನ್ನದೂ ಅಲ್ಲ, ಪ್ರಜೆಗಳದೂ ಅಲ್ಲ ದೇವನದು. ರಾಜನು ಧರ್ಮ ಸೇವಕ" ಎಂದು ಹೇಳುವುದು ರಾಜಧರ್ಮ. ಈಗ ರಾಷ್ಟ್ರವೇ ದೇವರೆಂದೂ, ಅದರ ಕಲ್ಯಾಣವೇ ತಮ್ಮ ಕಲ್ಯಾಣವೆಂದೂ ತಿಳಿದಿದ್ದರೆ, ಆಗ ಧರ್ಮವೇ ದೇವರೆಂದೂ, ಅದರ ಅನುಸರಣೆಯೇ ತಮ್ಮ ಕಲ್ಯಾಣವೆಂದೂ ಭಾವಿಸಿದ್ದರು. ರಾಜ್ಯವು ಪ್ರಜಾಪ್ರಭುತ್ವಕ್ಕೊಳಪಟ್ಟಾಗ ಲೋಕಹಿತದ ಕಾರ್ಯಗಳಾಗುವುದಕ್ಕಿಂತ ಹೆಚ್ಚಾಗಿ, ಋಷಿತುಲ್ಯನಾದ ಮಂತ್ರಿಯ ಆಲೋಚನೆ ಕೇಳುವ ಒಬ್ಬ ಧರ್ಮವಂತ ರಾಜನ ಅಧಿಕಾರಕ್ಕೊಳಪಟ್ಟಾಗ ನ್ಯಾಯ-ಶಾಂತಿಗಳು ಲಭಿಸುತ್ತಿದ್ದರೆ ಪ್ರಜಾಪ್ರಭುತ್ವವೇ ಶ್ರೇಷ್ಠವೆಂದು ಹಠವೇಕೆ?

"ಕ್ಷತ್ರಿಯೋ ಹಿ ಪ್ರಜಾಂ ರಂಜನ್" ಪ್ರಜಾರಂಜನೆಯೇ ಮುಖ್ಯವಾದ ರಾಜಧರ್ಮ. "ಶಸ್ತ್ರಪಾಣಿ ಪ್ರದಂಡವಾನ್" ನಾಗಿ

ಪ್ರಜೆಗಳ ಸಂರಕ್ಷಣೆಯ ಸಾಧನಗಳನ್ನು ಒಪಗಿಸಿ ಕೊಡುವುದು ರಾಜಕರ್ತವ್ಯ. ರಾಜನ ಆಪ್ತರೂ, ಬಂಧುಗಳೂ ಕಟ್ಟಳೆಗೀಡಾದರೆ ನಿಷ್ಠುರವಾಗಿ ಅವರನ್ನು ದಂಡಿಸುವುದೊಂದು ಆಧುನಿಕ ರಾಷ್ಟ್ರಧರ್ಮದ ಅಂಗವೆನಿಸಿಕೊಳ್ಳುವಂತೆ, ಆಗ— "ರಾಜನ ಸಹೋದರನಾಗಲಿ, ಆತನ ಹೆಂಡರು - ಮಕ್ಕಳಿರಲಿ, ಸೊಸೆಯಿರಲಿ, ಸೋದರಮಾವನಿರಲಿ ಯಾರು ಅಧರ್ಮ ಮಾಡಿದರೂ ಅವರು ಅದಂಡ್ಯರಲ್ಲ" ಎಂಬ ಮನು-ಯಾಜ್ಞ್ಯವಲ್ಕ್ಯರುಗಳ ವಿಧಿಯು ಅಪರಾಧಿಗಳನ್ನು ಶಿಕ್ಷಿಸಲಿಕ್ಕೆ ಸದಾ ಸನ್ನದ್ಧವಾಗಿರುತ್ತಿತ್ತು. ಧರ್ಮಶಾಸ್ತ್ರ ಒಂದು ಕಡೆ, ಹಾಗೂ ಧರ್ಮಮೂರ್ತಿಗಳಾದ ಮಂತ್ರಾಲೋಚಕ ಸಭೆ ಇನ್ನೊಂದು ಕಡೆ ಹೀಗೆ ಎರಡು ಅಂಕುಶಗಳು ಶಿರೋಮಾನ್ಯವಾಗಿರುವಾಗ ರಾಜಗಜವು ಅದೆಲ್ಲಿ ಸ್ವೇಚ್ಛಾಚಾರಿಯಾದೀತು ?

ಮಂತ್ರಿಗಳು ವೃದ್ಧರೂ, ಶಾಸ್ತ್ರಜ್ಞರೂ, ಧೈರ್ಯಶಾಲಿಗಳೂ, ಮಹಾಶಯರೂ ಆಗಿದ್ದು ‡ ಅವರು ಏಳೆಂಟು ಜನ ಇರಬೇಕು. ಅವರ ಆಲೋಚನೆಯನ್ನು ಅನುಲಕ್ಷ್ಯಿಸಿ ಪ್ರಜೆಗಳನ್ನು ಸಂತಯಿಸುವುದು ರಾಜಧರ್ಮವಾಗಿತ್ತು. ಪ್ರಜೆಗಳನ್ನು ಪೀಡಿಸುವ ರಾಜನು ತನ್ನ ಬಂಧುಗಳೊಡನೆ ರಾಜ್ಯಭ್ರಷ್ಟನಾಗಿ ಪ್ರಾಣವನ್ನು ಕಳಕೊಳ್ಳಬೇಕಾಗುತ್ತಿತ್ತೆಂಬ ಶಾಸ್ತ್ರವಾಕ್ಯದಿಂದ, ಪ್ರಜಾಪೀಡಕನಾದ ಪ್ರಭುವನ್ನು ಪ್ರಜೆಗಳು ಏನು ಮಾಡುತ್ತಿದ್ದರೆಂಬದನ್ನು ಊಹಿಸಬಹುದು. ಇವೆಲ್ಲವೂ ಶಾಸ್ತ್ರಸಮ್ಮತವಾದ ಸಾಮಾನ್ಯ ರಾಜ-ಧರ್ಮಗಳಾಗಿದ್ದರೂ ವಿದ್ಯಾರಣ್ಯರು— ರಾಜನಾದವನು ದೇವಬ್ರಾಹ್ಮಣ ಪೂಜೆಯಲ್ಲಿ ಆಸಕ್ತನಾಗಿರಬೇಕೆಂದೂ ಯುದ್ಧರಂಗದಿಂದ ಕಾಲ್ದೆಗೆಯದಿರಬೇಕೆಂದೂ, ಬೇಟೆ, ಜೂಜು,

---

‡ ಮೌಲಾನ್ ಶಾಸ್ತ್ರವಿದಶ್ಶೂರಾನ್ ಲಬ್ಧಲಕ್ಷಾನ್ ಕುಲೋದ್ಗತಾನ್ ।
ಸಚಿವಾನ್ ಸಪ್ತಚಾಷ್ಟೌವಾ ಪ್ರಕುರ್ವೀತ ಪರೀಕ್ಷಿತಾನ್ ॥
—ಮನುಸ್ಮೃತಿ.

ಸ್ತ್ರೀಲೋಲುಪತೆ, ಜೊಳ್ಳು ಹರಟೆ ಇಂಥ ವ್ಯಸನಗಳಿಗೆ ಎಡೆಗೊಡಬಾರದೆಂದೂ ವಿಧಿಸಿದ್ದರು. ಇದೇ ರೀತಿಯಾಗಿ ಬುಕ್ಕರಾಯನು ತನ್ನ ಮಗ ಕಂಪನಿಗೆ ಬೋಧಿಸಿದನೆಂದು “ ಮಧುರಾವಿಜಯ ” ದಲ್ಲಿದೆ.

ರಾಜ್ಯದ ಬೇರೆ ಬೇರೆ ವಿಭಾಗಗಳಿಗೆ ರಾಜಮನೆತನಕ್ಕೆ ಸೇರಿದ ವೀರರು ಮಂಡಲಾಧಿಕಾರಿಗಳಾಗಿ ನಿಯಮಿಸಲ್ಪಟ್ಟು ಅವರಿಗೆ ನೀತಿ ವಿಶಾರದರಾದ ವಿದ್ವಾಂಸರು ಸಲಹೆಗಾರರಾಗಿ ಆರಿಸಲ್ಪಡುತ್ತಿದ್ದರು.

ಸ್ವಾಮಿಗಳು ವಾದಿ ಪ್ರತಿವಾದಿಗಳ ವಾಙ್ಮೂಲಗಳು ಹೇಗಿರಬೇಕು, ಸಾಕ್ಷಿ ಎಂಥವನಾಗಿರಬೇಕು, ಸಭೆಗೆ ತಕ್ಕ ಸ್ಥಳವೆಂಥದು, ಕಾಲ ವಾವುದು ಇವನ್ನೆಲ್ಲ ವಿವರಿಸಿದ್ದಾರಂತೆ.

ರಾಜ್ಯಕ್ಕೆ ಬೇರೆ ಬೇರೆ ಖಾತೆಗಳ ಮೇಲೆ ಎಂಟು ಜನ ಮಂತ್ರಿಗಳು. ಪ್ರಜೆಗಳು ಭೂಮಿಯ ಬೆಳೆಯಲ್ಲಿ ಆರನೇ ಪಾಲು ಸರಕಾರಕ್ಕೆ ಸಲ್ಲಿಸಿದರೆ ಮುಗಿಯಿತು. ತೆರಿಗೆ-ಸುಂಕಗಳಿರಲಿಲ್ಲ. ಬೀಳು ಭೂಮಿಯನ್ನು ಸಾಗುವಳಿ ಮಾಡಿ, ಕಳ್ಳಕಾಕರನ್ನೋಡಿಸಿ, ಊರುಗಳನ್ನು ನಿರ್ಮಿಸಿ, ಕೆರೆ ಕಾಲುವೆಗಳನ್ನು ಕಟ್ಟುವದಕ್ಕೆ ಸಮರ್ಥರಾದ ಅಧಿಕಾರಿಗಳನ್ನು ನಿಯಮಿಸುತ್ತಿದ್ದರಂತೆ. ಹನ್ನೆರಡು ಜನ ಆಯಗಾರರನ್ನು ಆರಿಸುವ ಪದ್ಧತಿಯೂ, ಗ್ರಾಮಾಧಿಕಾರಿಗಳ ಹಕ್ಕು ಒಡೆತನಗಳನ್ನು ಗೊತ್ತುಪಡಿಸಿದ ರೀತಿಯೂ ವಿದ್ಯಾರಣ್ಯರದೇ ಅಂತೆ.

**ಕಾಲಗತಿ**

ಈ ಪ್ರಕಾರ ಮಂತ್ರಿಶ್ರೇಷ್ಠರಾಗಿ ಹರಿಹರ ಹಾಗೂ ಬುಕ್ಕರಾಯ ಇವರಿಬ್ಬರ ಸಂಪೂರ್ಣ ಆಳಿಕೆಗಳನ್ನು ಭದ್ರಪಡಿಸಿ ಮುಪ್ಪಿನ ಮುದುಕರಾಗಿ ನೂರಾಹದಿನೆಂಟು ವರುಷ ಬದುಕಿದ್ದರು. “ ಕುರ್ವನ್ನೇವೇಹ ಕರ್ಮಾಣಿಜಿ ಜೀವಿಷೇಚ್ಛತ ” ಎಂಬ ಉಪನಿಷತ್ ಆಜ್ಞೆಯಂತೆ

ನೂರು ವರುಷ ಆಯುಷ್ಯವನ್ನು ಬಯಸಿ ಪಡೆದವರಾದ ಇವರ ಜೀವ ಹಂಸವು ೧೩೮೬ ನೇ ಕ್ಷಯ ಸಂವತ್ಸರ ಜೇಷ್ಠ ವದ್ಯ ೧೩ ಶನಿವಾರ ವಿರೂಪಾಕ್ಷೇಶ್ವರನ ಮಾನಸ ಕ್ಷೇತ್ರದಲ್ಲಿ ವಿಹರಿಸುವುದಕ್ಕೆ ಹಾರಿ ಹೋಯಿತು. ಜಡಕಳೇವರವು ಕಲ್ಲಿಗೂ ಕಲ್ಲಾಗಿ ಹಂಪೆಯ ಒಂದು ಹಾಳು ದೇಗುಲದಲ್ಲಿ ಕುಳಿತು ಬಿಟ್ಟಿತು. ಆದರೆ ಅವರ ಅವೆಷ್ಟೋ ವಿಚಾರಗಳು ಭವಿಷತ್ ಕಾಲದಲ್ಲಿಯೂ ಮಾರ್ಗದರ್ಶಕವಾಗಿ ಜೀವಂತ ಉಳಿದವು. "ಶಿವಾಜಿ ಮಹಾರಾಜರು ತಮ್ಮ ರಾಜ್ಯ ನಿರ್ವಾಹಕ್ರಮ ವನ್ನು ವಿಜಯನಗರ ಸಂಸ್ಥೆಗಳಿಂದ ಕಲಿತರೆಂ" ದು ಲೋ. ತಿಲಕರು ಹೇಳಿದ್ದಾರೆ. ಸ್ವಾಮಿಗಳ ಕಾಯ್ದೆ-ಕಟ್ಟಳೆಗಳಷ್ಟೇ ಬಳಕೆಗೆ ಬರಲಿಲ್ಲ. ಅವರ ಸಮಗ್ರ ಇತಿಹಾಸವೇ ಪುನರಾವರ್ತನೆಯ ಕ್ರಮದಿಂದ ಬಂದು ಹೋಯಿತೆನ್ನಬಹುದು. ಹದಿನೇಳನೇ ಶತಮಾನದಲ್ಲಿ ಶ್ರೀ. ರಾಮ ದಾಸರೂ ಶಿವಾಜಿ ಮಹಾರಾಜರೂ ಹುಟ್ಟಿಬಂದು ವಿದ್ಯಾರಣ್ಯ-ಹರಿಹರ ರಂತೆಯೇ ವ್ಯವಹರಿಸಿ ಹೋದರೆನ್ನುವಷ್ಟು ಸಮಂಜಸವಾದ ಸಾಮ್ಯವು ಕಂಡುಬರುತ್ತದೆ. ಕನ್ನಡ ನಾಡಿನುದ್ಧಾರಕ್ಕೆ ಭುವನೇಶ್ವರಿಯ ಪ್ರಸ ನ್ನತೆಯು ಕಾರಣವಾಗಿದ್ದಂತೆ, ಮಹಾರಾಷ್ಟ್ರಕ್ಕೆ ಭವಾನೀ ಮಾತೆಯ ಖಡ್ಗದಾನವು ಕಾರಣವಾಯಿತು. ಜಯ ಭುವನೇಶ್ವರಿ! ಜಯ ಭವಾನಿ!! ಅದೇನೇ ಇರಲಿ—

"ಅದ್ಭುತ ಮಹಾಶಕ್ತಿ! ಅದ್ಭುತ ವಿರಕ್ತಿ।
ಅದ್ಭುತ ತಪಸ್ಸಿದ್ಧಿ! ಅದ್ಭುತ ಸಮೃದ್ಧಿ॥"

— ಶಾಂತಕವಿ

ಎಂದು ಕನವರಿಸುವ ಕನ್ನಡ ನಾಡಿಗೆ ಮೌನಭಾಷೆಯಲ್ಲಿ ಮುನಿ ಗಳು ಏನು ಕೇಳುತ್ತಿದ್ದಾರೆ— ಅದನ್ನು ಕನ್ನಡಿಗರು ವಿಚಾರಿಸಬೇಡವೆ??

Aum

ಓಂ ಶ್ರೀ ಓಂ

# ೩ ಕನ್ನಡಿಗರ ಕುಲದೇವತೆ

## ( ಶ್ರೀ ಭುವನೇಶ್ವರೀ ಮಾತೆ )

## § (೧)

ಶ್ರೀ ವಿದ್ಯಾರಣ್ಯ ಮುನಿವರ್ಯರ ಇನ್ನೊಂದು ಅಮೌಲ್ಯ ಉಪದೇಶವಿದು:—

" ಅಧ್ಯಾತ್ಮ ವಿದ್ಯೆಯ ಅಧಿಕಾರಿಗಳಲ್ಲಿ ಎರಡು ಪ್ರಕಾರಗಳಿವೆ; ಉಪಾಸಕರು ಮತ್ತು ನಿರುಪಾಸಕರು. ಉಪಾಸ್ಯ ದೇವತೆಯ ಸಾಕ್ಷಾತ್ಕಾರವಾಗುವ ವರೆಗೆ ಉಪಾಸನೆಯನ್ನು ಮಾಡಿ ಬಳಿಕ ಜ್ಞಾನಚರ್ಚೆಗೆ ಪ್ರವರ್ತಿಸಿದರೆ ಆಗ ವಾಸನಾಕ್ಷಯ, ಮನಶ್ಚಾಂಚಲ್ಯನಾಶ ಇವುಗಳ ದೃಢತ್ವವುಂಟಾಗಿರುವದರಿಂದ ಜ್ಞಾನಕ್ಕಿಂತ ಮುಂದಿನ ಜೀವನ್ಮುಕ್ತ್ಯಾದಿ ಸ್ಥಿತಿಗಳು ತನ್ನಿಂದ ತಾನೇ ಸಿದ್ಧಿಸುತ್ತವೆ. ಇಂಥವರೇ ಶಾಸ್ತ್ರಸಮ್ಮತ ಮುಖ್ಯ ವಿದ್ಯಾಧಿಕಾರಿಗಳು ........ಆದರೆ ಈಗಿನವರು ( " ಇದಾನೀಂತನಾಸ್ತು " ) ಉಪಾಸನೆಯಿಲ್ಲದಲೇ ಬರೆ ಔತ್ಸುಕ್ಯಮಾತ್ರದಿಂದ ಒಮ್ಮೆಲೆ ಅಧ್ಯಾತ್ಮಚರ್ಚೆಗೇ ಪ್ರವರ್ತಿಸುತ್ತಾರೆ. ತಾತ್ಪೂರ್ತಿಕವಾಗಿ ವಾಸನಾಕ್ಷಯ, ಮನಶ್ಚಾಂಚಲ್ಯನಾಶ ಇವುಗಳನ್ನು ಗಳಿಸಿ ಶ್ರವಣ-ಮನನ-ನಿದಿಧ್ಯಾಸನಗಳನ್ನು ಅನುಷ್ಠಿಸುವದರಿಂದ ಅಜ್ಞಾನ-ಸಂಶಯ-ವಿಪರ್ಯಯಗಳ ನಾಶವಾಗಿ ತತ್ವಜ್ಞಾನವು ಚೆನ್ನಾಗಿ ಉದಯಿಸುವದು. ಬಂದ

ತತ್ವಜ್ಞಾನವು ಪುನಃ ಶಿಥಿಲವಾಗಲಿಕ್ಕೆ ಕಾರಣವಿಲ್ಲವಾದರೂ ವಾಸನಾ ಕ್ಷಯ, ಮನೋಲಯಗಳ ದೃಢಾಭ್ಯಾಸದ ಅಭಾವದ ಮೂಲಕ ಅವು ಪ್ರಾರಬ್ಧಕರ್ಮದ ಹೊಡತಕ್ಕೆ ಗಾಳಿಯೊಳಗಿನ ದೀಪದಂತೆ ಒಮ್ಮೆಲೆ ಆಳಿಯುವವು. ”

ಇಲ್ಲಿ ಶ್ರೀ ವಿದ್ಯಾರಣ್ಯರು ಒತ್ತಿ ಹೇಳುವ ಮಾತಾವುದೆಂದರೆ— ಎಲ್ಲಕ್ಕೂ ಮೊದಲಿಗೆ ದೃಢವಾದ ಉಪಾಸನೆಯು ಬೇಕು. ನಮ್ಮ ಉಪಾಸ್ಯ ದೈವತದ ಸಾಕ್ಷಾತ್ಕಾರವಾಗುವ ವರೆಗೂ ನಾವು ಉಪಾಸನೆ ಮಾಡಲುಬೇಕು. ಆ ಮೇಲೆ ಎಲ್ಲವೂ ತಾನಾಗಿಯೇ ಸಹಜವಾಗಿ ಬಿಡುವದು. ಇಲ್ಲದಿದ್ದರೆ ಒಳಗೆ ಜ್ಞಾನ ಬಂದಿದ್ದರೂ ಪ್ರಾರಬ್ಧ ಕರ್ಮದ ಹೊಡತಕ್ಕೆ ಹೊರಮುಗ್ಗಲಿನ ಜೀವನವು ಹದಗೆಟ್ಟು ಹೋಗುತ್ತದೆ.

ಇಂಥ ಜ್ಞಾನದಿಂದೇನು ಪ್ರಯೋಜನ?

§ (೨)

ಆಂತರಿಕ ಬಾಹ್ಯಿಕ ಜೀವನದ ಸಂಪೂರ್ಣ ಪರಿಪೂರ್ಣತೆಯನ್ನು ಸಂಪಾದಿಸಿ ಮೃತಪ್ರಾಯವಾಗಿದ್ದ ಆಗಿನ ಕನ್ನಡ ನಾಡಿಗೆ, ಜೀವದಾನ ವನ್ನು ಮಾಡಿದ ಶ್ರೀ ವಿದ್ಯಾರಣ್ಯರ ಉಪಾಸ್ಯದೇವತೆಯು ಶ್ರೀ ಭುವ ನೇಶ್ವರೀ ಮಾತೆಯು. ಆ ಮಹಾ ತಾಯಿಯ ದಿವ್ಯಾಶೀರ್ವಾದ ದಿಂದಲೇ ಕನ್ನಡಿಗರ ವಂಶವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು. ಪುನಃ ಇಂದು ನಾವು ಮೃತಪ್ರಾಯರಾಗಿದ್ದರೆ ಈಗಲೂ ಅದೇ ತಾಯಿಯ ಅಮೃತ ಹಸ್ತದಿಂದ ಚೇತರಿಸಿಕೊಂಡು ಏಳಬೇಕಲ್ಲವೆ? ಕನ್ನಡಿಗರ ಕುಲದೇವತೆಯು ಅವಳೇ.

ಆ ಮಹಾ ಮಾತೆಯ ಸ್ವರೂಪವೆಂತಹದು? ಅವಳು ಪದ್ಮಾ ಪೀಠದ ಮೇಲೆ ನಗೆಮೊಗದಿಂದ ಕುಳಿತವಳು. ಒಂದು ಕೈಯ್ಯಿಂದ ಅಭಯ

ಪ್ರದಾನ ಮಾಡುವಳು; ಇನ್ನೊಂದು ಹಸ್ತದಿಂದ ವರಪ್ರದಾನವನ್ನು ಮಾಡುವಳು. ಒಂದು ಕೈಯ್ಯಲ್ಲಿ ಮದೋನ್ಮತ್ತ ದಿಗ್ಗಜಗಳನ್ನು ಅಂಕಿತದಲ್ಲಿಡುವ ಅಂಕುಶ; ಇನ್ನೊಂದು ಕೈಯ್ಯಲ್ಲ ಸಮಸ್ತ ಜಗತ್ತನ್ನು ನಿಯಮದಿಂದ ಕಟ್ಟಿಹಾಕುವ ಮಹಾ ಪಾಶ. ಮೊಗದಲ್ಲಿ ಮಲ್ಲಿಗೆಯಂಥ ಮುಗುಳು ನಗೆ; ಹಣೆಯ ಮೇಲ್ಗಡೆಗೆ ಪ್ರಶಾಂತಿಯನ್ನು ಬೀರುವ ಎಳೆ ಚಂದ್ರ. ಸೂರ್ಯ ಪ್ರತಾಪವನ್ನು ಹೋಲುವ ಕಿರೀಟ; ಚುಕ್ಕೆಗಳನ್ನು ಮಿಕ್ಕುವ ಆಭರಣ ಸಮೂಹ. ಇಂಥ ಮಹಾ ತಾಯಿಯು ನಮ್ಮ ಭುವನೇಶ್ವರಿಯು; ಭುವನದ ಈಶ್ವರಿಯು ಓಂ ಮಾತೇ! ಜಯ ಭುವನೇಶ್ವರೀ!! ಕನ್ನಡಿಗರ ಕುಲೋದ್ಧಾರಿಣೀ !!! ಜಯ-ಜಯ-ಜಯ! ಓಂ.

§ (೩)

ಇದೆಲ್ಲಾ ಸರಿ. ಆದರೆ ನಾಡುನಾಡಿಗೆ ಒಬ್ಬೊಬ್ಬ ಅಧಿಷ್ಠಾತ್ರೀ ದೇವತೆಯು ಇರಲಿಕ್ಕೆ ಶಕ್ಯವಿದೆಯೇ? ಎಂಬುದೇ ದೊಡ್ಡ ಪ್ರಶ್ನೆ. ಅಹುದು, ಇರಲಿಕ್ಕೆ ಶಕ್ಯವಿದೆ. ಈ ವಿಚಾರವನ್ನು ಮಂಡಿಸುವುದಕ್ಕೆಂದೇ ಪ್ರಸ್ತುತ ಪ್ರಬಂಧವು ಜನ್ಮತಾಳಿದೆ.

ಆಧುನಿಕರಲ್ಲಿ ಎಲ್ಲಕ್ಕೂ ಮೊದಲಿಗೆ ಈ ತತ್ವವು ಹೊಳೆದದ್ದು ಬಂಗಾಲದ ಗದ್ಯಸಾಹಿತ್ಯದ ಆದಿಬ್ರಹ್ಮರಾದ ಮಹರ್ಷಿ ಬಂಕಿಮಚಂದ್ರರಿಗೆ. ಅದಕ್ಕೆಂತಲೇ ಯೋಗೀಶ್ವರ ಅರವಿಂದ ಘೋಷರಂಥ ಮನ್ವಂತರ ಪ್ರವರ್ತಕರು ಇವರಿಗೆ "ಮಹರ್ಷಿ" ಯೆಂಬ ಪರಮ ಪವಿತ್ರ ಶಬ್ದದಿಂದ ಗೌರವಿಸಿದ್ದಾರೆ. ನೂತನ ತತ್ವವನ್ನು ಕಂಡು ಉಂಡವರಿಗೇ ದ್ರಷ್ಟಾರರು ಅಥವಾ ಮಹರ್ಷಿಗಳೆಂದು ಪುರಾತನ ಕಾಲದಿಂದಲೂ ಆದರಿಸುತ್ತ ಬಂದಿದ್ದಾರೆ. **"ವಂದೇ ಮಾತರಂ, ಸುಜಲಾಂ, ಸುಫಲಾಂ, ಸುಸಸ್ಯ, ಶ್ಯಾಮಲಾಂ ಮಾತರಮ್ !!!"** ಎಂಬುದು ದಿವಂಗತ ಬಂಕಿಮ ಮಹರ್ಷಿ

ಗಳ ನವಯುಗದ ವೇದಮಂತ್ರ. ಅವರ **ಆನಂದಮಠವೆಂಬ** ಕಾದಂಬರಿ ಯಲ್ಲಿ ನಾಡತಾಯಿಯ ಈ ಮಂತ್ರ ಸೂಕ್ತವೂ, ವರದಾಭಯಕರ ವೈಭವ ಪೂರಿತ ಪುರಾತನ ಮಾತೆಯ ಹಾಗೂ ಜೀರ್ಣಶೀರ್ಣ ಅರ್ವಾ ಚೀನ ಮೂರ್ತಿಯ ರೂಪವರ್ಣನೆಯೂ ಪ್ರಕಟವಾದಂದಿನಿಂದ ಭಾರ ತಾಂಬೆಯು ತಿರುಗಿ ಎಚ್ಚತ್ತಳು.

ಶ್ರೀ ಬಂಕಿಮಚಂದ್ರರ ಅನಂತರ ನಾಡನ್ನು ತಾಯಿಯೆಂದು ಕಂಡು ಎದೆ ತುಂಬಿ, ಕಂಠ ತುಂಬಿ, ಗದ್ಗದಿಸಿ ಅಶ್ರುಧಾರೆಗಳನ್ನು ಹರಿಸಿ, ಅವಳ ಸೇವೆಗಾಗಿ ಪ್ರತಿಜ್ಞೆಯನ್ನು ಮಾಡಿ, ಇಡೀ ಜನ್ಮ ವನ್ನು ಆ ಭಾಷೆಯಂತೆ ಸವಿಸಿದವರು ಶ್ರೀ ವಿವೇಕಾನಂದ ಸ್ವಾಮಿಗಳು. ಅವರು ಅಮೇರಿಕೆಗೆ ಹೊರಡುವುದಕ್ಕಿಂತ ಕೆಲವು ತಿಂಗಳು ಮುಂಚೆ ಕನ್ಯಾಕುಮಾರೀ ಭೂಶಿರದ ಅಡಿಯಲ್ಲಿ ಸಮುದ್ರಸ್ನಾನವನ್ನು ಮಾಡುತ್ತಿದ್ದಾಗ ಒಮ್ಮೆಲೆ ಭಾರತಾಂಬೆಯ ಶ್ರೀಪಾದದ ಬಳಿಯಲ್ಲಿ ನಿಂತ ಹಾಗೆ ಅವರಿಗೆ ಅನಿಸಿದೊಡನೆಯೇ ಅವಳ ಪುರಾತನ ವೈಭವ ಹಾಗೂ ಅರ್ವಾಚೀನ ಅಧಃಪತನಗಳ ತಾರತಮ್ಯದ ದರ್ಶನವಾಗಿ ಜೀವಂತ ತಾಯಿಯ ದುರ್ದಶೆಯನ್ನು ನೋಡಿ ಕಂಗೆಡುವವರಂತೆ ಬಿಕ್ಕಿ ಬಿಕ್ಕಿ ಅತ್ತು ಪ್ರತಿಜ್ಞೆಮಾಡಿ ಅಲ್ಲಿಂದೆದ್ದರು.

ನಾಡನ್ನು ತಾಯಿಯೆಂದು ಕಂಡವರಲ್ಲ ಮೂರನೆಯವರೆಂದರೆ ಶ್ರೀ ಅರವಿಂದ ಯೋಗಿಗಳು. ಅವರು ತಮ್ಮ ಜೀವನದ ಭೌತಿಕ ಮಹಾ ವೈಭವದ ಕಾಲದಲ್ಲಿ ತಮ್ಮ ಸಹಧರ್ಮಿಣಿಗೆ ಬರೆದ ಪತ್ರ ದಲ್ಲಿ— " ನನಗೆ ಮೂರು ಹುಚ್ಚುಗಳು ಹಿಡಿದುಕೊಂಡಿವೆ. ಭಗವ ದನುಗ್ರಹದಿಂದ ನನಗೆ ಲಭಿಸಿದ ವಿದ್ಯಾಬುದ್ಧಿ, ಧನ ದೌಲತ್ತುಗಳ ಫಲವನ್ನೆಲ್ಲ ಆ ಪರಮೇಶ್ವರನಿಗೇ ಅರ್ಪಿಸಬೇಕೆಂಬುದು ನನ್ನ ಮೊದಲ ನೆಯ ಹುಚ್ಚು. ಇನ್ನು ಎರಡನೆಯ ಹುಚ್ಚೆಂದರೆ ಪರಮೇಶ್ವರ ಪ್ರತ್ಯಕ್ಷ

ದರ್ಶನವನ್ನು ಬೇಕಾದಂಥ ಕಠಿಣ ರೀತಿಯಿಂದಲಾದರೂ ದೊರಕಿಸಿ ಕೊಳ್ಳಬೇಕೆಂಬುದು. ಇನ್ನು ನನ್ನ ಮೂರನೆಯ ಹುಚ್ಚು ಯಾವ ದೆಂದರೆ— ಸರ್ವ ಜನರು ದೇಶವೆಂದರೆ ಒಂದು ಜಡ ಪದಾರ್ಥವೆಂದೂ, ನೆಲ-ಹೊಲ, ಹೊಳೆ-ಹಳ್ಳ, ಗಿರಿ-ಗಂಹರಗಳ ಸಮೂಹ ಮಾತ್ರವೆಂದೂ ತಿಳಿದು ಕೊಳ್ಳುವಂತೆ ನಾನು ಭಾವಿಸದೆ ಆವಳೊಬ್ಬ ತಾಯಿಯೆಂದು ಬಗೆದು ಭಕ್ತಿಗೆಯ್ಯುವೆನು; ಅವಳನ್ನು ಪೂಜಿಸುವೆನು. ” ಎಂದು ಉದ್ಘೋಷಿಸಿರುವರು.

ನಾಲ್ಕನೆಯವರಾದ ವಿಶ್ವಕವಿ ಶ್ರೀ ರವೀಂದ್ರನಾಥ ಟಾಗೋರರು ತಮ್ಮ ಕಿನ್ನರಕಂಠದಿಂದ ನಾಡಿನ ಅಧಿಷ್ಠಾತ್ರೀ ದೈವತವನ್ನು ”ಭಾರತ ಭಾಗ್ಯ ವಿಧಾತ ” ನೆಂದು ಬಣ್ಣಿಸಿ ಹಾಡಿರುವರು.

ಕನ್ನಡ ನಾಡತಾಯಿಯನ್ನು ಕಂಡು ಕೊನೆದಾಡುವ ಕೋಗಿಲೆ ಗಳೆಂದಿಗೆ ಬರುವವೋ ನೋಡಬೇಕು !

§ (೪)

“ ಇದೆಲ್ಲಾ ಕವಿಕಲ್ಪನೆ; ಕಟ್ಟುಕಥೆ; ಭಾವನೆಯ ಭ್ರಮೆ. ವಾಸ್ತವ ಸ್ವರೂಪದಲ್ಲಿ ನಾಡುಗಳಿಗೆ ಅಧಿಷ್ಠಾತ್ರೀ ದೇವತೆಗಳಿರುವುದು ಶಕ್ಯವೇ ? ” ಎಂಬುದು ನಿಜವಾಗಿಯೂ ಜೀವದ ಆಳವಾದ ಪ್ರಶ್ನ ವಹುದು. ಈ ಸಮಸ್ಯೆಯನ್ನು ಬಿಡಿಸಿಕೊಳ್ಳದಿದ್ದರೆ ಮೇಲ್ಕಾಣಿಸಿದ ಮಾತುಗಳಿಗೆ ಕಾಸಿನಷ್ಟು ಸಹ ಬೆಲೆಯಿಲ್ಲವೆಂಬುದು ನೂರಕ್ಕೆ ನೂರ ರಷ್ಟು ದಿಟವಾಗಿದೆ.

“ ಕಣ್ಣಿಗೆ ಕಾಣಿಸಿದ್ದೇ ಸತ್ಯ; ಕಾಣಿಸದಿದ್ದರೆ ಏನಿದ್ದರೂ ಅದು ಅಸತ್ಯ. ” ಎಂಬುದು ಇಂದಿನವರಾದ ನಮ್ಮೆಲ್ಲರ ದೃಢವಾದ ಕಲ್ಪನೆ. ಇದೇನೂ ಸಂಪೂರ್ಣವಾಗಿ ಸುಳ್ಳಲ್ಲ. ಇದರಲ್ಲಿಯೂ ಕೆಲಮಟ್ಟಿಗೆ

ನಿಚಾಂಶವಿದೆ. ನಮ್ಮ ಕಣ್ಣಿಗೆ ಕಾಣಿಸುವಷ್ಟು ಘನೀಭೂತವಾಗದಿದ್ದದ್ದು ನಮಗೆ ಪೂರ್ಣಾಂಶದಿಂದ ಇನ್ನೂ ಅನುಭವಕ್ಕೆ ಬಂದಿಲ್ಲವೆಂದಾಗಲಿ, ಅದನ್ನು ಅಷ್ಟೊಂದು ದೃಢತರವಾಗಿ ಕಾಣುವಂಥ ಯೋಗ್ಯತೆಯುಳ್ಳ ಅವಸ್ಥೆಯೇ ಇನ್ನೂ ನಮಗೆ ಉಂಟಾಗಿಲ್ಲವೆಂದಾಗಲೀ ಹೇಳಿದರೆ ಅನುಭವ ವಾದಿಗಳಲ್ಲಿ ಬಹುಜನರಿಗೆ ಸಿಟ್ಟು ಬರಬಹುದು. ಆದರೆ ಇದು ಶುದ್ಧ ತಪ್ಪು. ವೇದಕಾಲದ ಋಷಿಗಳಿಗೆ ವೈದಿಕ ದೇವತೆಗಳು ಕಣ್ಣಿಗೆ ಸಹ ಕಾಣಿಸುತ್ತಿದ್ದರೆಂದೂ, ಅಂಥ ಶಕ್ತಿಯು ನಿಜವಾಗಿಯೂ ಬಾಹ್ಯೇಂದ್ರಿಯಗಳಿಗೆ ಸಹ ಬರುವದೆಂದೂ ಶ್ರೀ ಅರವಿಂದ ಯೋಗಿಗಳು ತಮ್ಮ ಗ್ರಂಥಗಳೊಳಗೆ ಬಹು ಸ್ಥಳಗಳಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಅದು ಬಹಳ ಮೇಲಿನ ಅವಸ್ಥೆ. ಕಣ್ಣಿಗೆ ಕಾಣಿಸದೆಯೂ ಸಹ ಒಮ್ಮೊಮ್ಮೆ ಅನುಭವವು ಸತ್ಯವಾಗಿರುವ ಸಂಭವವಿದ್ದಂತೆ, ಕಾಣಿಸಿಯೂ ಸಹ ಅಸತ್ಯವಾಗಿರುವ ಹೆದರಿಕೆಯು ಅತಿಶಯವಾಗಿ ಇವೆ. ಕಾಣಿಸದಿದ್ದದ್ದು ಸತ್ಯವೇ ಅಲ್ಲವೆಂಬುದೂ ಸುಳ್ಳು; ಕಾಣಿಸಿದ್ದೆಲ್ಲಾ ಸತ್ಯವೇ ಎಂಬುದಂತೂ ಎಷ್ಟೋ ಸಾರೆ ಹೆಚ್ಚು ಸುಳ್ಳು.

ಚರ್ಮಚಕ್ಷುವಿಗೆ ಅಲೌಕಿಕ ರಾಜ್ಯವು ಕಾಣಿಸುವುದು ಅಶಕ್ಯವೆಂದೂ, ಅದು ಅನುಭವಿಸುವುದಕ್ಕೆ ಮಾತ್ರವೆ ಯೋಗ್ಯವಾಗಿದೆಯೆಂದೂ ಗೀತೆ, ಉಪನಿಷತ್ತು, ಬಾಯ್ಬಲ್ಲುಗಳಲ್ಲಿ ಸ್ಪಷ್ಟ ಶಬ್ದಗಳಿಂದ ಉಲ್ಲೇಖಗಳಿರುವವಾದರೂ ತೀರ ತೀರ ಹೆಚ್ಚಿನ ಅವಸ್ಥೆಯಲ್ಲಿ ಹಾಗೂ ಶಕ್ಯವಿದೆಯೆಂಬುದು ಶ್ರೀ ರಾಮಕೃಷ್ಣ ಪರಮಹಂಸರ ಹಾಗೂ ಶ್ರೀ ಅರವಿಂದ ಯೋಗಿಗಳ ಸ್ವಾನುಭವದ ಮಾತಾಗಿದೆ.

ಇಲ್ಲಿ ಒಂದೇ ಮಹತ್ವದ ಮಾತು. ಅದೇನೆಂದರೆ— ಕಾಣಿಸುವುದು ಸತ್ಯವಾಗಿರುವಂತೆ ಪ್ರಗಾಢವಾದ ಭಾವವೂ ಅಷ್ಟೇ ಸತ್ಯವಾಗಿರುತ್ತಿರುತ್ತದೆ. ಕವಿಗಳ ಕಾವ್ಯಕಲ್ಪನೆಗೆ ಸಹ ಆಂತರಿಕವಾದ

ಒಂದಾನೊಂದು ವಾಸ್ತವಿಕ ರಾಜ್ಯದ ಪ್ರತ್ಯಕ್ಷ ಸಂಬಂಧವಿರುವದೆಂದು ಅಯರ್ಲ್ಯಾಂಡಿನ ದೃಷ್ಟಾ ಪುರುಷರೂ ಅನುಭಾವ ಕವಿಗಳೂ ಆದ ದಿವಂಗತ "ಏ. ಈ." (A. E.) ಯವರು ತಮ್ಮ "ದರ್ಶನದೀಪಿಕೆ" ಮತ್ತು "ಕವಿತಾ ಧುರಿ" ಎಂಬ ಅನುಭವ ಗ್ರಂಥಗಳಲ್ಲಿ ಸ್ವಾನುಭವದ ಉದಾಹರಣೆಗಳನ್ನು ಕೊಟ್ಟು ಪ್ರತಿಪಾದಿಸಿದ್ದಾರೆ.

ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಉತ್ತರ ಜೀವನದಲ್ಲಿ ಎಷ್ಟೋ ಸಾರೆ ಹೇಳುತ್ತಿದ್ದ ಮಾತೊಂದು "ಶ್ರೀ ರಾಮಕೃಷ್ಣ ವಚನಾಮೃತ" ವೆಂಬ ಅತ್ಯಂತ ಪ್ರಾಮಾಣಿಕ ಗ್ರಂಥದಲ್ಲಿ ಮೇಲಿಂದ ಮೇಲೆ ಬರುತ್ತದೆ. ಅದಾವುದೆಂದರೆ— "ಮೊದಲು ನಾನು ಇವುಗಳನ್ನೆಲ್ಲ ಈ ಕಣ್ಣಿನಿಂದಲೇ ಕಾಣುತ್ತಿದ್ದೆನು. ಆದರೆ ಈಗ ಭಾವದೃಷ್ಟಿಗೆ ಮಾತ್ರ ಅವು ಕಾಣಿಸುತ್ತವೆ."

ಶ್ರೀ ಅರವಿಂದರ "ಯೋಗಿಕ್ ಸಾಧನ" ವೆಂಬ ಪುಸ್ತಕವಲ್ಲಿಯೂ ಈ ಬಗೆಯ ಜ್ಞಾನಕ್ಕೆ "ಭಾವ" ಎಂಬ ಶಬ್ದವನ್ನೇ ಉಪಯೋಗಿಸಿದ್ದಾರೆ.

ಪಾಶ್ಚಾತ್ಯ ದೇಶಗಳಲ್ಲಿ ಇಂಥ ಜ್ಞಾನದ ತೀರ ಕೆಳಗಿನ ತರಗತಿಯಅನುಭವಗಳನ್ನು ಕಂಡ ಆಧುನಿಕ ಗೂಢ ವಿದ್ಯಾವಾದಿಗಳು ಇದಕ್ಕೆ "ಸಾಯ್ಕೋಮೆಟ್ರಿ" ಅಥವಾ "ಆಂತರಿಕ ಸ್ಪರ್ಶಾನುಭೂತಿ" ಎಂಬ ಹೆಸರನ್ನು ಕೊಟ್ಟಿದ್ದಾರೆ. ಏನೇ ಇರಲಿ. ಸಾಂದ್ರವಾದ ಗಾಢ ಭಾವವೂ ಕೂಡ ಆಂತರಿಕ ವಾಸ್ತವ ಸತ್ಯಕ್ಕೆ ಅಂಟಿಕೊಂಡಿದ್ದಾಗಿರುತ್ತಿರುತ್ತದೆಯೆಂಬುದೂ ಅನುಭವಸಿದ್ಧ ವಿಷಯವೇ ಆಗಿದೆ.

§ (೫)

ಇಡೀ ವಿಶ್ವಕ್ಕೆ ಒಬ್ಬ ದೇವರಾದರೂ ಇದ್ದಾನೋ ಅಥವಾ ಇಲ್ಲವೋ— ಎಂದು ನಾವು ಸಂದೇಹ ಪಡುತ್ತಿರುವಾಗ ನಾಡುನಾಡಿಗೆ

ಒಬ್ಬೊಬ್ಬ ಅಧಿಷ್ಠಾತ್ರಿಯರನ್ನು ಕಲ್ಪಿಸುವುದು ನಮ್ಮ ಬುದ್ಧಿಗೆ ಎಷ್ಟೊ ಹಿಡಿಸದ ಮಾತೆಂದು ಎಲ್ಲರೂ ಗುಣಗುಟ್ಟಬಹುದು. ಹೌದು; ಒಂಬತ್ತು ವರುಷಗಳ ಹಿಂದೆ ಪುರಾತನ ಪಾಶುಪತ ಶೈವರದೊಂದು ಪ್ರಕರಣ ಗ್ರಂಥವನ್ನೋದುತ್ತಿರುವಾಗ ನನಗೂ ಒಮ್ಮೆ ಹೀಗೆಯೇ ಅನಿಸತೊಡಗಿದ್ದಿತು. ಅದರಲ್ಲಿ ಅನೇಕ ಭುವನಗಳ ಹಾಗೂ ಅಸಂಖ್ಯ ರುದ್ರಾದಿ ದೇವತೆಗಳ ವಿವರಣೆಯಿದ್ದಿತು. "ಒಬ್ಬ ದೇವರು ಇದ್ದದ್ದು ನಿಜವೆಂದು ಮನಗಾಣುವದಕ್ಕೇ ಇನ್ನೂ ನನ್ನಿಂದ ಆಗದಿರುವಾಗ ಅನೇಕೇಶ್ವರ ವಾದವೂ ಒಂದು ಬಂದು ಕೊರಳಿಗೆ ಬಿದ್ದರೆ ಇನ್ನೇನು ಗತಿ!" ಎಂದು ನಾನಾಗ ದಿಗಿಲುಗೊಂಡೆನು. ಮುಂದೆ ಒಂದು ವರುಷದೊಳಗಾಗಿ ಯೋಗೀಶ್ವರ ಶ್ರೀ ಅರವಿಂದರದೊಂದು ಅಂಥದೇ ಗ್ರಂಥವು ಪ್ರಕಟವಾಯಿತು! "ಮಾತಾ" ಎಂಬ ಆ ಗ್ರಂಥದಲ್ಲಿ ಅವರು ಪರಮೇಶ್ವರನ ಅನೇಕ ಜಗದೀಶ್ವರೀ ರೂಪಗಳನ್ನು ತಮ್ಮ ಯೋಗಾನುಭವದಿಂದ ಕಂಡು ವರ್ಣಿಸಿದ್ದಾರೆ. ಇಷ್ಟೇ ಅಲ್ಲ. ಮುಖ್ಯ ಈಶ್ವರಿಯರ ಅಸಂಖ್ಯ "ಉದ್ಭವ" ಗಳಿವೆಯೆಂದೂ, ಬಹು ಪುರಾತನ ಕಾಲದಿಂದ ಸರ್ವ ದೇಶಗಳಲ್ಲಿ ಇವರನ್ನೇ ದೇವ-ದೇವಿಯರೆಂದು ಬೇರೆ ಬೇರೆ ಹೆಸರುಗಳಿಂದ ಪೂಜಿಸಲಾಗಿದೆಯೆಂದೂ ಹೇಳಿದ್ದಾರೆ. "These Emanations are the many divine forms and personalities in which men have worshiped Her under different names throughout the ages." ಇವಕ್ಕಿಂತ ಅಗಾಧವಾದ ಸಂಗತಿಯೆಂದರೆ— ಹೋದ ವರುಷವೇ ಶ್ರೀ ಅರವಿಂದರು ಪ್ರಕಟಿಸಿದ "ಯೋಗದ ಮೇಲೆ ಬೆಳಕು" ಎಂಬ ಪುಸ್ತಕದಲ್ಲಿ— ಶಕ್ತಿಗಳ ಹಿಂದೆ ಸಜ್ಞ ವ್ಯಕ್ತಿಗಳ ಅಸ್ತಿತ್ವವಿರುತ್ತದೆಂದೂ, ಈ ವ್ಯಕ್ತಿಗಳ ವಾಸ್ತವ್ಯವು ನಮ್ಮ ಪಿಂಡಾಂಡದೊಳಗೆ ಮತ್ತು ಹೊರಗಿನ ಬ್ರಹ್ಮಾಂಡದೊಳಗೆ ಎಲ್ಲೆಡೆಯಲ್ಲಿರುವುದು ಯೋಗ ದೃಷ್ಟಿಗೆ ಪ್ರತ್ಯಕ್ಷ ಸಿದ್ಧವೆಂದೂ ಬರೆದಿದ್ದಾರೆ. "In the yogic

consciousness one is not only aware of things, but of forces, not only of forces, but of the conscious being behind the forces. One is aware of all this not only in oneself but in the universe."

§ (೬)

"ಬ್ರಹ್ಮಾಂಡದಂತೆ ಪಿಂಡಾಂಡ" ವೆಂಬ ಮಾತು ಗಾದೆಯು ಮಾತಿನ ವರೆಗೆ ಮುಟ್ಟಿ ಹೋಗಿದೆಯಷ್ಟೇ? ನಮ್ಮ ಪಿಂಡಾಂಡ ದೊಳಗಿನ ಯೋಗದ ಪ್ರತ್ಯಕ್ಷ ವಿಷಯಗಳಲ್ಲಿ ಕೆಲವನ್ನು ಇಲ್ಲಿ ಹೇಳಿ ಬ್ರಹ್ಮಾಂಡದೊಳಗಿನ ಶ್ರೀ ಜಗದೀಶ್ವರಿಯ ಸ್ವರೂಪವನ್ನು ನಿರ್ಣಯಿಸುವಾ.

ಯೋಗೀಶ್ವರ ಶ್ರೀ ಅರವಿಂದರು ನಮ್ಮ ಒಳಗಿನ ಜೀವಾತ್ಮನ ಎರಡು ರೂಪಗಳನ್ನು ವರ್ಣಿಸಿದ್ದಾರೆ. ಒಂದು ನಮ್ಮ ಸ್ಥೂಲ ಸೂಕ್ಷ್ಮಾದಿ ಎಲ್ಲ ದೇಹಗಳ ವಿಕಾಸಮುಂತಾದ ಸಂಗತಿಗಳೊಡನೆ ಸಂಬಂಧವುಳ್ಳದ್ದು; ಇನ್ನೊಂದು ಈ ಸಂಬಂಧವನ್ನು ಎಳ್ಳಷ್ಟೂ ಅಂಟಿಸಿಕೊಳ್ಳದ್ದು. ಸಂಬಂಧ ರಹಿತವಾದದ್ದಕ್ಕೆ ಪರಮ ಆತ್ಮವೆಂದೂ ಸಂಬಂಧವುಳ್ಳದ್ದಕ್ಕೆ ಅಂತರಾತ್ಮವೆಂದೂ ನಾಮನಿರ್ದೇಶವನ್ನು ಮಾಡಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರದಲ್ಲಿರುವ 'ಸ್ಪಿರಿಟ್' ಮತ್ತು 'ಸೋಲ' ಎಂಬ ಶಬ್ದಗಳು ಕ್ರಮದಿಂದ ಮೇಲಿನವೆರಡಕ್ಕೆ ಸಮನ್ವಯಿಸುವವು. ಅಂತರಾತ್ಮ, ಸೋಲ, ಸಾಯ್ಕಿಕ್, ಸಾಯ್ಕೀ ಎಂಬ ನಾಮಾಂತರಗಳನ್ನು ಹೊಂದಿರುವ ಈ ಎರಡನೆಯ ವಸ್ತುವು ಆತ್ಮ ಮತ್ತು ಪ್ರಾಣಿತ್ವಗಳನ್ನು ಹೊಂದುವಳಿಯಲ್ಲಿ ಇರಿಸುವ ಮಧ್ಯಸ್ಥ ಕೀಲಕವಾಗಿದೆ. ಇದಕ್ಕೆ ನಾಶವಿಲ್ಲ; ಅಮರವಾಗಿದೆ. ಸ್ಥೂಲ ಸೂಕ್ಷ್ಮಾದಿ ಉಳಿದ ದೇಹಗಳೆಲ್ಲ ಜನ್ಮ ಜನ್ಮಕ್ಕೆ ಹೊಸ ಹೊಸವೇ

ನಿರ್ಮಿಸಲ್ಪಡುತ್ತವೆ. ಆದರೆ ಆತ್ಮನ ಹೊರಮುಗ್ಗಲಿಗಿರುವ ಈ ಅಂತರಾತ್ಮ ಅಥವಾ 'ಸಾಯ್ಕಿಕ್' ಎಂಬುದು ಯುಗಯುಗಗಳಿಂದ ಅವಿನಾಶಿಯಾಗಿಯೇ ಇರುತ್ತದೆ. ಜನ್ಮ ಜನ್ಮಾಂತರಗಳ ಸಂಸ್ಕಾರ ಬೀಜಗಳೆಲ್ಲ ಇದರಲ್ಲಿಯೇ ಸಂಗ್ರಹಿಸಲ್ಪಟ್ಟಿರುತ್ತವೆ. ಇದು ಯಾವಾಗಲೂ ತನ್ನ ಮೇಲಿನ ಪರಮ ಆತ್ಮ ಹಾಗೂ ವಿಶ್ವದೊಳಗಿನ ಪರಮ-ಈಶ್ವರ ಇವರ ರಸಶಿಶುವೆಂದು ತನ್ನೊಳಗೆ ಭಾವಿಸುತ್ತಿರುತ್ತದೆ. ಇದೆಲ್ಲ ವರ್ಣನೆಯು ಶ್ರೀ ಅರವಿಂದರದೇ. "ಏ. ಈ" ಯವರೂ ಈ ಎರಡನ್ನು ಬಲ್ಲರು. ಆದರೆ ಅವರ ಜನ್ಮದಲ್ಲಿ ಸಂಪೂರ್ಣವಾಗಿ ಅನುಭವಕ್ಕೆ ಬಂದದ್ದು ಮಧ್ಯಸ್ಥವಾದ ಅವಿನಾಶೀ ರಸಚೈತನ್ಯವೇ. 'ಏ. ಈ.' ಅವರೆಂದರೆ ಈ ಚೈತನ್ಯದ ಮೂರ್ತಿಮಂತ ಅವತಾರವೇ ಎಂದು ಅವರ ಗ್ರಂಥಗಳನ್ನೋದಿದರೆ ಅನಿಸುವದು. ತಾವು ಈ 'ಸಾಯ್ಕಿ' ಯನ್ನು ಸ್ವಲ್ಪವಾದರೂ ಅರಿಯಲು ಸಮರ್ಥರಾದುದಾಗಿಯೂ, ಮೇಲಿನ ಪರಮ ಆತ್ಮವನ್ನು ಅರಿಯುವದಕ್ಕೆ ಎಷ್ಟೂ ಶಕ್ಯವಾಗಲಿಲ್ಲವೆಂಬುದಾಗಿಯೂ ಅವರು ತಾವೇ ತಮ್ಮ "ಕವಿತಾಸ್ಫೂರ್ತಿ" ಯೆಂಬ ಪುಸ್ತಕದಲ್ಲಿ ಹೇಳಿದ್ದಾರೆ. "While I could comprehend a little about the nature of the *Psyche*, I could not comprehend at all the Spirit which transcend the soul, for, as the seers said of it, it is eternal, invisible and universal."

ಈ ರಸಚೈತನ್ಯವು ಕಾರಣ ಶರೀರ ಗತವಾದ ಆನಂದಮಯವಾದ ಅರಿವು ವೇದಾಂತದಲ್ಲಿ ಇದಕ್ಕೇ ಪ್ರಾಜ್ಞಪುರುಷನೆಂದು ವರ್ಣಿಸಲಾಗಿದೆ. ಈ ಚೈತನ್ಯವು ರಸಮಯವಾಗಿರುವದರಿಂದ ಪಾಶ್ಚಾತ್ಯದೇಶದ ಪುರಾತನರು 'ಸಾಯ್ಕೀ' ಅಥವಾ 'ರತಿದೇವಿ' ಯೆಂದು ಬಣ್ಣಿಸಿದ್ದಾರೆ. ಅವಿನಶ್ವರವಾದ ಕಾರಣ ಶರೀರದ 'ಭಾಸ' ವೇ ಇದಾಗಿರುವದರಿಂದ

ನಾವು ಭಾರತೀಯ ದ್ರಷ್ಟಾರರ ಪ್ರಾಜ್ಞನೆಂಬ ಶಬ್ದವನ್ನೂ, ಪಾಶ್ಚಾತ್ಯ ಪುರಾತನರ ರತಿದೇವಿಯೆಂಬ ಶಬ್ದವನ್ನೂ ಮನ್ನಿಸಿ "ಪ್ರಾಜ್ಞಾ ಲಕ್ಷ್ಮಿ" ಯೆಂಬ ಹೊಸದೊಂದು ಶಬ್ದವನ್ನು ಹುಟ್ಟಿಸಿಕೊಳ್ಳುವಾ.

ಪಿಂಡಾಂಡದೊಳಗಿನ ಈ ಚೈತನ್ಯಕ್ಕೆ ಸಮಾನವಾಗಿರುವ ಬ್ರಹ್ಮಾಂಡದೊಳಗಿನ ಮಹಾ ಚೈತನ್ಯಕ್ಕೇ "**ಜಗದೀಶ್ವರಿ**" ಯೆಂಬ ನಾಮವು ನಿಯೋಜಿಸಲ್ಪಡುತ್ತದೆ. ಶಕ್ತಿಯ ಹಿಂದೆ ಸಜ್ಞವ್ಯಕ್ತಿಯಿರುವುದಾಗಿ ಶ್ರೀ ಅರವಿಂದರ ಯೋಗಾನುಭವ.

## § (೭)

ಸಜೀವ ನಿರ್ಜೀವವೆಂಬ ಭೇದವಿಲ್ಲದೆ ಸರ್ವ ವಸ್ತುಗಳ ಅಸ್ತಿತ್ವಕ್ಕೆ ಈ ಮಧ್ಯಸ್ಥ ಕೀಲಕವೇ ಕಾರಣವಾಗಿರುತ್ತದೆ ಅಂತಲೇ ಇದರ ಕವಚಕ್ಕೆ ಪುರಾತನರು ಕಾರಣದೇಹವೆಂದು ಅಂದಿದ್ದಾರೆ. ಪರಮ ಪುರುಷನು ಇದನ್ನಾಶ್ರಯಿಸಿಯೇ ಸರ್ವ ವಸ್ತು ಮಾತ್ರಗಳಲ್ಲಿ ವ್ಯಾಪ್ತನಾಗಿದ್ದಾನೆ. ಇವರಿಬ್ಬರೂ ಇಲ್ಲದ ವಸ್ತುವೇ ಇರಲಾರದು.

ಸರ್ವ ವಸ್ತುಗಳ ಕಾರಣ ಕವಚಗತವಾದ ಅಮರ ಚೈತನ್ಯವೇ ಅದರದರ ಅಧಿಷ್ಠಾತ್ರಿಯಾಗಿದೆಯೆಂದು ನನ್ನ ಪ್ರಗಾಢವಾದ ಅನಿಸಿಕೆ. ಇದು ಸಜೀವ ವಸ್ತುಗಳಲ್ಲಿರುವಂತೆ ನಿರ್ಜೀವ ಜಡವಸ್ತುಗಳಲ್ಲಿಯೂ ಇರುತ್ತದೆಯೆಂಬುದು ಶಾಸ್ತ್ರ ಸಮ್ಮತವಾಗಿದೆ. ಜೀವ ಜಡಗಳೆಂಬ ಭೇದವಿಲ್ಲದೆ ಎಲ್ಲ ವಸ್ತುಗಳಲ್ಲಿರುವಂತೆ ಅದು ವಾಸ್ತವಿಕ ಮತ್ತು ಕಾಲ್ಪನಿಕವೆಂಬ ಭೇದವಿಲ್ಲದೆ ಕಲ್ಪನಾತ್ಮಕ ಹಾಗೂ ಭಾವನಾತ್ಮಕ ವಸ್ತುಗಳಲ್ಲಿಯೂ ಇರುತ್ತದೆಯೆಂಬುದಕ್ಕೆ ನಮ್ಮ ಪುರಾತನ ಗ್ರಂಥಗಳಲ್ಲಿ ಸಾಕಷ್ಟು ಪ್ರಮಾಣಗಳು ನನಗೆ ಲಭಿಸಿರುವವು. ಯಾಕೆಂದರೆ ಕಾಲ್ಪನಿಕ ಹಾಗೂ ಭಾವನಾತ್ಮಕವೆಂಬವುಗಳು ಸಹ ನಮ್ಮ ಪಿಂಡಾಂಡದ

ಹಾಗೂ ಬ್ರಹ್ಮಾಂಡದ ಕೆಲವೊಂದು ಅಪರಿಚಿತ ಕೋಶಗಳಲ್ಲಿ ವಾಸ್ತವಿಕ ವಸ್ತುಗಳೇ ಆಗಿರುತ್ತಿರುತ್ತವೆಯೆಂಬುದು ಯೋಗಿ ಜನ ಪ್ರತ್ಯಕ್ಷವಾದ ವಿಷಯವಾಗಿದೆ. ಶ್ರೀ ಅರವಿಂದರು ತಮ್ಮ "ಯೋಗಿಕ್ ಸಾಧನ" ವೆಂಬ ಗ್ರಂಥದ ಜ್ಞಾನ ಪ್ರಕರಣದಲ್ಲಿ— "ಯಾವದೊಂದು ಅಪರಿಚಿತ ವ್ಯಕ್ತಿ, ವಸ್ತು ಇಲ್ಲವೆ ವಿಷಯ ಇವುಗಳ ಬಗೆಗೆ ಯೋಗಿಗಳಿಗೆ ತಿಳಿದು ಕೊಳ್ಳುವ ಅಗತ್ಯವುಂಟಾದರೆ ಅವರು ನಮ್ಮಂತೆ ತಾರ್ಕಿಕ ವಿಚಾರ ವನ್ನು ಮಾಡುವ ಗೊಡವೆಗೆ ಹೋಗದೆ ತಮ್ಮ ಅವಸ್ಥೆಯನ್ನು ಆತ್ಮದ ತನಕ ಏರಿಸುವರು. ಆಗ ಅಬಾಧಿತವಾದ ಜ್ಞಾನವು ಲಭಿಸುವದು. ಯಾಕೆಂದರೆ ಅಂಥ ಸ್ಥಿತಿಯಲ್ಲಿ ಯೋಗಿಯೊಳಗಿನ 'ಪ್ರಾಜ್ಞ' ಹಾಗೂ ಪರೀಕ್ಷಿಸಲ್ಪಡುವ ವಸ್ತು, ವ್ಯಕ್ತಿ ಅಥವಾ ವಿಷಯ ಇವುಗಳೊಳಗಿನ 'ಪ್ರಾಜ್ಞ' ಇವೆರಡರ ಪರಸ್ಪರ ಸ್ಪರ್ಶವುಂಟಾಗುತ್ತದೆ. ಯಾವದೊಂದನ್ನು ತಿಳಿದುಕೊಳ್ಳಬೇಕಾದಾಗ ಸ್ವಯಂ ನಾನು ಹೀಗೆಯೇ ಮಾಡುತ್ತಿರುತ್ತೇನೆ. ಆಗ ನನಗೆ ಅವಿಕಲವಾದ ಜ್ಞಾನವುಂಟಾಗುತ್ತದೆ."

ಋಷಿ ಸದೃಶರಾದ ಶ್ರೀ ವಿಜ್ಞಾನಾಚಾರ್ಯ ಜಗದೀಶಚಂದ್ರ ಬೋಸರು ಸಸ್ಯರಹಸ್ಯದ ತಮ್ಮ ಅಲೌಕಿಕ ಶೋಧಗಳನ್ನೆಲ್ಲ ಇಂಥ ಶಕ್ತಿಯಿಂದಲೇ ಸಾಧಿಸಿರುವುದಾಗಿ ಸ್ವತಃ ತಾವೇ ತಮ್ಮ ಸ್ವಹಸ್ತದಿಂದ ಬರೆದಿದ್ದಾರೆ. ಅದು ಹೇಗೆಂದರೆ:— "ಒಂದು ಆಕರ್ಷಣವಿದೆ. ಅದು ಸರ್ವ ಆಚ್ಛಾದನಗಳನ್ನೆಲ್ಲ ಹಾರಿಸಿಬಿಡುವದು; ಅದು ನಿಕಟದಲ್ಲಿರುವು ದನ್ನು ಅತಿ ನಿಕಟಕ್ಕೆ ತರುವದು; ತಾನು ಮತ್ತು ಅನ್ಯವೆಂಬುದನ್ನು ಮರೆಯಿಸಿ ಬಿಡುವದು. ಸಮವೇದನವೇ ಈ ಆಕರ್ಷಣವು. ಕೇವಲ ಸಹಾನುಭೂತಿ ಶಕ್ತಿಯಿಂದಲೇ ನನ್ನ ಜೀವನದಲ್ಲಿ ನಿಜ ಸತ್ಯವು ಪ್ರಕಾ ಶಿತವಾಗಿದೆ."

ಇದನ್ನೆಲ್ಲ ಪರ್ಯಾಲೋಚಿಸಿದರೆ ನಮ್ಮೊಳಗಿನಂತಹದೇ ಒಂದು ಅಭಾವನೀಯವಾದ ದಿವ್ಯ ವಸ್ತುವು ಸರ್ವ ವಸ್ತು ಮಾತ್ರಗಳಲ್ಲಿಲ್ಲ

ಇದೆಯೆಂಬುದು ಪುನವರಿಕೆಗೆ ಬಾರದಿರದು. ಆ ದಿವ್ಯ ವಸ್ತುವೇ ರಸಮಯವಾದ, ಆನಂದಮಯವಾದ, ಅನಂತಕಾಲಿಕವಾದ, ಅವಿನಶ್ವರವಾದ ಕಾರಣ ಕವಚವು. ಅದರಲ್ಲಿಯೇ ಆಯಾ ವಸ್ತುವಿನ ಆಧಿಷ್ಠಾತ್ರಿಯ ವಾಸ್ತವ್ಯ.

§ (೮)

ನಮ್ಮ ಸ್ಥೂಲದೇಹ ವ್ಯತಿರಿಕ್ತವಾದ ಕಾರಣಾದಿ ದೇಹಗಳು ನಮ್ಮ ಈ ದೇಹದ ಒಳಗೆಲ್ಲ ವ್ಯಾಪಿಸಿಕೊಂಡಿದ್ದುದಲ್ಲದೆ ಈ ಜಡಕೋಶದ ಹೊರಗೆ— ಪುಟ್ಟಪೂರಾ ಹೊರಗೆ — ತಲೆಯ ಮೇಲ್ಗಡೆಗೆ ಮತ್ತು ಕಾಲುಗಳ ಕೆಳಗಡೆಗೆ ವ್ಯಾಪಿಸಿಕೊಂಡಿವೆಯೆಂದು ಶ್ರೀ ಅರವಿಂದರ ತೀರ ಇತ್ತೀಚೆಗಿನ ಗ್ರಂಥಗಳಲ್ಲಿ ಹೇಳಲಾಗಿದೆ. ಅಂದರೆ ನಮ್ಮ ಈ ಮೈಯ ಒಳಗಲ್ಲದೆ ಹೊರಗೆ ಸಹ ಕೆಲವೊಂದು ಅಲ್ಪಾಂತರದ ವರೆಗೆ ಸುತ್ತು ಮುತ್ತು, ಮೇಲೆ ಕೆಳಗೆ ಹೀಗೆ ಎಲ್ಲಕಡೆಗೆ ಹಬ್ಬಿಕೊಂಡಿವೆಯೆಂದು ಅರ್ಥ. ಅದಕ್ಕೆಂತಲೇ ನಾನು “ಕಾರಣ ಕವಚ” ಎಂಬ ಶಬ್ದವನ್ನು ಉಪಯೋಗಿಸಿದ್ದೇನೆ. ನಿಜವಾಗಿಯೂ ಈ ಕವಚವು ವಸ್ತುಗಳ ಹಾಗೂ ಪ್ರಾಣಿಗಳ ರಕ್ಷಣ ಕವಚವೂ ಹೌದು. ಆತ್ಮ ಮತ್ತು ಪೃಥಗ್ವಸ್ತು ಇವೆರಡನ್ನು ಕೂಡಿಸುವುದೇ ಈ ಕಾರಣ ಕೋಶದ ಕೆಲಸವಾಗಿರುವದರಿಂದ ಅದು ಯಾವಾಗಲೂ ನಮ್ಮ ಹಾಗೂ ಪದಾರ್ಥಗಳ ಸುತ್ತು ಮುತ್ತಲೆಲ್ಲ ವ್ಯಾಪಿಸಿಕೊಂಡಿದ್ದು ನಾಶವಾಗದಂತೆ ಕಾಯುತ್ತಿರುತ್ತದೆ. ಅದರದರ ಅಧಿಷ್ಠಾತ್ರಿಯು ಅದರದರ ರಕ್ಷಕಳೆಂಬುದು ಸಹಜವಾದ ಮಾತಾಗಿದೆ. ಅವಳ ಅನುಮತಿಯಿಲ್ಲದೆ ಯಾವ ಆಘಾತವೂ ಪ್ರಾಣಿ ಅಥವಾ ವಸ್ತುವಿಗೆ ತಗಲಲಿಕ್ಕೆ ಶಕ್ಯಗಳಿಲ್ಲ.

ನಮ್ಮ ಹಾಗೂ ವಸ್ತು ಮಾತ್ರಗಳ ಒಳಹೊರಗೆ ಕಾರಣ ಕವಚವು ವ್ಯಾಪಿಸಿಕೊಂಡಿರುವಂತೆ ಪೃಥ್ವಿವಿಯ ಕಾರಣ ಕವಚವೂ ಅದರ

ಒಳಹೊರಗೆ ವ್ಯಾಪಿಸಿ ಇದ್ದಿರಲೇಬೇಕಲ್ಲವೇ ? ಆ ಕವಚ ಗತಚೇತನವೇ ಅದರ ಅಧಿಷ್ಠಾತ್ರಿಯು. ಅವಳು ಎಲ್ಲೆಲ್ಲಿಯೂ ಇರುವಳೆಂತಲೇ ಪೃಥಿವಿಯ ಮೇಲಿನ ಸರ್ವ ಸಂಗತಿಗಳು ಸುಸೂತ್ರವಾಗಿ ಜರಗುತ್ತವೆ.

ನಮ್ಮ ದೈನಂದಿನದ ಜೀವನ ಕ್ಷೇತ್ರವನ್ನು ನೋಡಿದರೆ ಯಾವಾಗಲೂ ಅಪಾಯಗಳೊಳಗಿಂದಲೇ ನಾವು ದಾರಿಯನ್ನು ನಡೆಯುತ್ತಿರುತ್ತೇವೆ. ಆದರೆ ಅಪಾಯ ಸಂಭವಿಸುವುದು ಎಷ್ಟು ಸಾರೆ ? ಎಲ್ಲಿಯೋ ನೂರಾರು ಪ್ರಸಂಗಗಳಲ್ಲಿ ಒಂದರ್ಧ ಅಪಾಯ ತಟ್ಟುತ್ತವೆ. ಈ ಅಭಾವನೀಯವಾದ ರಕ್ಷಣ ಶಕ್ತಿಯ ಅಸ್ತಿತ್ವವು ಜಗದೀಶ್ವರಿಯದೇ ಕುರುಹು. ನಮ್ಮ ಹಾಗು ವಸ್ತುಗಳ ಪಿಂಡಾಂಡಗತ " ಪ್ರಾಜ್ಞಾಲಕ್ಷ್ಮಿ " ಯೂ ಯಾವಾಗಲೂ ನಮ್ಮನ್ನು ಕಾಯುತ್ತಲೇ ಇರುತ್ತಾಳೆ. ಅಂತಲೇ ಜನಸಾಮಾನ್ಯರಲ್ಲಿ ಒಂದು ಭಾವನೆಯು ಪ್ರಚಾರದಲ್ಲಿದೆ. ಅದೇನೆಂದರೆ— " ದಿನಕ್ಕೆ ಮುನ್ನೂರಾ ಅರುವತ್ತು ಕುತ್ತುಗಳು ನಮ್ಮನ್ನು ನುಂಗುವುದಕ್ಕೆ ಹೊಂಚುಹಾಕಿಕೊಂಡು ಕುಳಿತಿರುತ್ತವೆ. ಆದರೆ ಈಶ್ವರನು ಕಾಯುತ್ತಾನೆಂದು ನಾವು ಬಾಳಿ ಬದುಕುತ್ತೇವೆ. "

ಹೀಗೆ ಮಾತೆಯು ಸರ್ವಸಂರಕ್ಷಕಳಾಗಿದ್ದಾಳೆ.

## § ( ೯ )

ಇನ್ನು ಶಾಸ್ತ್ರಾಧಾರವು ಅವಶ್ಯವಾಗಿ ಬೇಕಷ್ಟೇ ? ಯಜುರ್ವೇದಕ್ಕೆ ಸಂಬಂಧಿಸಿದ ತೈತ್ತಿರಿಯ ಶಾಖಾಂತರ್ಗವಾದ ಶ್ರೌತಸೂತ್ರಗಳಲ್ಲಿ ಬರುವ ಪುರುಷ ಯಾಗಕ್ಕೆ ಸಂಬಂಧಪಟ್ಟ ಒಂದುನೂರಾ ಎಂಭತ್ತು ಅಭಿಮಾನಿ ದೇವತೆಗಳ ಪಟ್ಟಿಯಲ್ಲಿ ಮಾದರಿಯ ಸಲುವಾಗಿ ಹತ್ತೆಂಟನ್ನು ಇಲ್ಲಿ ಉಲ್ಲೇಖಿಸುವೆನು:—

"ವೇಗಾಭಿಮಾನೀದೇವ, ಪುಷ್ಟ್ಯಭಿಮಾನೀದೇವ, ಅನ್ನಾಭಿಮಾನೀದೇವ, ಜಲಾಭಿಮಾನೀದೇವ, ಕೋಪಾಭಿಮಾನೀದೇವ, ಶೋಕಾಭಿಮಾನೀದೇವ, ವನಾಭಿಮಾನೀದೇವ, ಸರೋವರಾಭಿಮಾನೀದೇವ, ವಾಸಸ್ಥಾನಾಭಿಮಾನೀದೇವ, ನಿರ್ಜನಸ್ಥಾನಾಭಿಮಾನೀದೇವ, ಪರ್ವತಾಭಿಮಾನೀದೇವ, ತುಲಾಭಿಮಾನೀದೇವ, ಮಾರ್ಗಾಭಿಮಾನೀದೇವ, ಭೂಮಿದೇವತಾ, ಅಗ್ನಿದೇವತಾ, ವಾಯುದೇವತಾ, ಅಂತರೀಕ್ಷದೇವತಾ, ಅಹರ್ದೇವತಾ, ರಾತ್ರಿದೇವತಾ........" ಇತ್ಯಾದಿ.

ವೇದಗಳ ಯಾಜ್ಞಿಕ ವ್ಯಾಖ್ಯೆಯನ್ನು ಹೇಳುವ "ಬ್ರಾಹ್ಮಣ" ಗಳೆಂಬ ಗ್ರಂಥಗಳಲ್ಲಿಯಂತೂ ಯಾಜ್ಞಿಕ ಕ್ರಿಯೆಗೆ ರಾಗಿಯ ಮುದ್ದೆ ಮುಂತಾದವುಗಳನ್ನು ಸಿದ್ಧಪಡಿಸುವಾಗ ಉಪಯೋಗಿಸುವ ಪ್ರತಿಯೊಂದು ವಸ್ತುವಿಗೆ ಸಂಬಂಧಪಟ್ಟ ಮಂತ್ರಗಳನ್ನು ನೋಡಿದರೆ ಪ್ರತಿಯೊಂದು ಪದಾರ್ಥದ ಅಧಿಷ್ಠಾತ್ರಿಯನ್ನು ಸ್ತೋತ್ರ ಮೂಲಕವಾಗಿ ಪ್ರಸನ್ನೀ-ಕರಿಸಿಕೊಳ್ಳದೆ ಅವರು ಕಾರ್ಯವನ್ನೇ ಮಾಡುತ್ತಿದ್ದಿಲ್ಲವೆಂದು ಕಂಡು ಬರುತ್ತದೆ. ಉದಾಹರಣೆಗಾಗಿ— ಶತಪಥ ಬ್ರಾಹ್ಮಣದಲ್ಲಿ— ಕಣಜವನ್ನಿಟ್ಟ ಗಡವಂಚಿಯ (ಶಕಟದ) ಮೇಲೇರುವ ಮುಂಚೆ ಆ ಶಕಟದ ಸ್ತೋತ್ರ, ಬಳಿಕ ಕಣಜದ ಸ್ತೋತ್ರ, ಆ ಮೇಲೆ ಕಣಜದೊಳಗಿನ ಒಟ್ಟು ರಾಗಿಯ ಸ್ತೋತ್ರ, ಅಲ್ಲಿಂದ ಕೈಯ್ಯಲ್ಲಿ ತೆಗೆದುಕೊಂಡ ರಾಗಿಯ ಸ್ತೋತ್ರ, ತಿರುಗಿ ಕೆಳಗೆ ಇಳಿಯುವ ಮೊದಲು ಭೂಮಿಯ ಸ್ತೋತ್ರ, ಆ ಮೇಲೆ ಮೊರದಲ್ಲಿ ಬರುಕುವ ಮೊದಲು ಮೊರದ ಸ್ತೋತ್ರ, ಬಳಿಕ ಮೃಗಚರ್ಮವನ್ನು ನೆಲಕ್ಕೆ ಹಾಸುವಾಗ ನೆಲ ಮತ್ತು ಚರ್ಮ ಇವೆರಡರ ಸ್ತೋತ್ರ, ಅದರ ಮೇಲೆ ಬೀಸುವ ಕಲ್ಲನ್ನಿಡುವಾಗ ಕಲ್ಲು ಮತ್ತು ಚರ್ಮ ಇವೆರಡರ ಸ್ತೋತ್ರ........ ಇತ್ಯಾದಿ ಹೀಗೆ ಏಕೆ ? ಎಂಬುವದಕ್ಕೆ ಅಲ್ಲಲ್ಲಿ ಸಮಾಧಾನವೂ ಹೇಳಲಾಗಿದೆ. "ವಸ್ತುಗಳು

ಒಂದಕ್ಕೊಂದು ಪ್ರತಿಕೂಲವನ್ನು ಮಾಡಬಾರದೆಂಬುದೇ ಇದಕ್ಕೆ ಕಾರಣವು. ”

ಉಪನಿಷತ್ತುಗಳ ಆರಂಭದ ಶಾಂತಿ ಮಂತ್ರಗಳಲ್ಲಿ “ ಉಪನಿಷತ್ತಿನಲ್ಲಿ ಪ್ರತಿಪಾದಿತವಾದ ಆತ್ಮವಿದ್ಯೆಯು ನನ್ನನ್ನು ನಿರಾಕರಿಸಲ್ಪಡದಿರಲಿ; ಹಾಗೂ ನನ್ನಿಂದ ಅದು ನಿರಾಕರಿಸಲ್ಪಡದಿರಲಿ. ” ಎಂಬ ಪ್ರಾರ್ಥನಾ ವಾಕ್ಯಗಳಿವೆ.

“ ಆತ್ಮವು ಯಾರನ್ನು ಆರಿಸಿಕೊಳ್ಳುವದೋ ಅವರಿಗೆ ಆತ್ಮಜ್ಞಾನವಾಗುವದು ” ಎಂದು ಕಠೋಪನಿಷತ್ತು ಸಾರುತ್ತದೆ. “ ದೇವನು ಪ್ರಸನ್ನನಾಗಿ ಯಾರಿಗೆ ಕೃಪೆ ಮಾಡುವನೋ ಅವರಿಗೇ ದಿವ್ಯ ಭಕ್ತಿಯು ಲಭಿಸುತ್ತದೆ ” ಎಂಬುದಂತೂ ಭಕ್ತಿಶಾಸ್ತ್ರಗಳಲ್ಲೆಲ್ಲ ಪ್ರಸಿದ್ಧ.

ಭರತ ಮುನಿಯ ನಾಟ್ಯಶಾಸ್ತ್ರದ ನರ್ತನ ವಿಭಾಗದಲ್ಲಿ— ವೀಣೆ ಹಿಡಿಯುವಾಗ, ಗೆಜ್ಜೆ ಕಟ್ಟುವಾಗ, ಉಡುಪನ್ನು ಧರಿಸುವಾಗ, ತಾಳ-ಮದ್ದಲೆಗಳನ್ನು ಕೈಯ್ಯಲ್ಲಿ ತೆಗೆದುಕೊಳ್ಳುವಾಗ ಮೊದಲಿಗೆ ಆಯಾ ವಸ್ತುಗಳನ್ನು ದೇವ-ದೇವಿಯರೆಂದು ತಿಳಿದು ಪ್ರಾರ್ಥಿಸುವ ಶ್ಲೋಕಗಳು ವಿಪುಲವಾಗಿ ಇವೆ.

ಕನ್ನಡ ನಾಡಿನ ಪ್ರಖ್ಯಾತ ಜ್ಞಾನಿಗಳಾದ ಶ್ರೀ ನಿಜಗುಣ ಶಿವಯೋಗಿಗಳ ವಿವೇಕಚಿಂತಾಮಣಿಯಲ್ಲಿ— “ ಸರ್ವ ಭುವನಂಗಳುಂ ರುದ್ರರಿಂ ಪಾಲಿತವಾಗಿ, ರುದ್ರಾಧಿಷ್ಠಿತವಾಗಿ, ರುದ್ರಾತ್ಮಕದಿಂ ರುದ್ರಸುಖ ಪ್ರಚುರವಾಗಿ ರುದ್ರಶಕ್ತ್ಯುತ್ತರದಿಂ ರುದ್ರಪ್ರಪಂಚವಾಗಿ, ರುದ್ರಮಯವೆನಿಸಿರ್ಕುಂ ” ಎಂದು ಹೇಳಿದೆ.

ಕನ್ನಡ ನಾಡಿನ ವಿಖ್ಯಾತ ಅನುಭಾವಿಯಾದ ರತ್ನಾಕರಸಿದ್ಧನು ತನ್ನ "ಭರತೇಶ ವೈಭವ" ವೆಂಬ ಕಾವ್ಯದಲ್ಲಿ ಭರತೇಶನ ಪರ್ವ ಯೋಗದ ಧ್ಯಾನವನ್ನು ವರ್ಣಿಸುವಾಗ—

"ವನದೇವಿ, ಪುರದೇವಿ, ಜಲದೇವಿ, ಜೈನಶಾಸನದೇವಿಯರು ನೆರೆದೆಲ್ಲ || ಮನುವಂಶತಿಲಕನ ಯೋಗವ ನೋಡಿ ಮೂಗಿನ ಮೇಲೆ ಬೆರಳಿಟ್ಟರಾಗ ||" ಎಂದು ವಿವಿಧ ಅಭಿಮಾನಿ ದೇವತೆಗಳನ್ನು ವರ್ಣಿಸಿದ್ದಾನೆ.

ಇನ್ನು ಕೊನೆಯ ನಿರ್ಣಯವು ನಿಜವಾಗಿಯೂ ಶ್ರೀ ವಿದ್ಯಾರಣ್ಯರ ಮೇಲೆ ಅವಲಂಬಿಸಬೇಕಾದದ್ದು ನ್ಯಾಯವಷ್ಟೆ? ಅವರ ದಿವ್ಯ ಗ್ರಂಥ ವಾದ "**ಪಂಚದಶಿ**" ಯಲ್ಲಿ ಚಿತ್ರದೀಪ ಪ್ರಕರಣದ ೨೦೬ ರಿಂದ ೨೦೯ ರ ವರೆಗಿನ ಶ್ಲೋಕಗಳನ್ನು ಅವಲೋಕಿಸಿರಿ:—

"ಈಶ ಸೂತ್ರ ವಿರಾಡ್ವೇಧೋ ವಿಷ್ಣು, ರುದ್ರೇಂದ್ರ, ವಹ್ನಯಃ | ವಿಘ್ನ, ಭೈರವ, ಮೈರಾಲ, ಮರಿಕಾ, ಯಕ್ಷರಾಕ್ಷಸಾಃ || ವಿಪ್ರ, ಕ್ಷತ್ರಿಯ, ವಿಟ್, ಶೂದ್ರಾ, ಗವಾಶ್ವ, ಮೃಗ ಪಕ್ಷಿಣಃ | ಅಶ್ವತ್ಥ, ವಟ, ಚೂತಾದ್ಯಾ, ಯವ, ವ್ರೀಹಿ, ತೃಣಾದಯಃ || ಜಲ, ಪಾಷಾಣ, ಮೃತ್, ಕಾಷ್ಠ, ವಾಸ್ಯಾ, ಕುದ್ದಾಲಕಾದಯಃ | **ಈಶ್ವರಾಃ ಸರ್ವ ಏವೈತೇ ಪೂಜಿತಾಃ ಫಲದಾಯಿನಃ** || ಯಥಾ ಯಥೋಪಾಸತೇ ತಂ ಫಲ ಮೀಯುಸ್ತಥಾತಥಾ | ಫಲೋತ್ಕರ್ಷಾಪಕರ್ಷೌತು ಪೂಜ್ಯ ಪೂಜಾನುಸಾರತಃ ||"

ವಿರಾಟ ವಿಶ್ವ ಸೂತ್ರದಲ್ಲಿ ಘೋಷಿಸಲ್ಪಟ್ಟ ತ್ರಿಮೂರ್ತ್ಯಾದಿ ದೇವತೆಗಳೂ, ಯಕ್ಷ ರಾಕ್ಷಸಾದಿ ಗಣಗಳೂ, ವಿಪ್ರ ಕ್ಷತ್ರಿಯಾದಿ

ಮಾನವರೂ, ಗೋ ತುರಗಾದಿ ಪಶು-ಪಕ್ಷಿಗಳೂ, ಅರಳಿ ಆಲ ಮೊದಲಾದ ವೃಕ್ಷಗಳೂ, ಜವೆ ರಾಗಿ ಮೊದಲಾದ ಹುಲ್ಲುಗಳೂ, ನೀರು-ಮಣ್ಣು-ಕಲ್ಲು-ಕಟ್ಟಿಗೆ-ಗುದ್ದಲಿ-ಸಲಿಕೆ ಮೊದಲಾದ ವಸ್ತುಗಳು ಇವು ಎಲ್ಲವುಗಳೂ ಈಶ್ವರರೇ; ಪೂಜಾಯೋಗ್ಯರೇ; ಫಲಪ್ರದರೇ. ಹೇಗೆ ಹೇಗೆ ಉಪಾಸನೆ ಮಾಡಿದರೆ ಹಾಗೆ ಹಾಗೆ ಫಲವು ಲಭಿಸುವದು. ಫಲದ ಸಮೃದ್ಧಿಯೂ ನ್ಯೂನತೆಯೂ ಪೂಜಾವಸ್ತು ಮತ್ತು ಪೂಜಾರೀತಿ ಇವುಗಳನ್ನು ಅನುಸರಿಸಿ ಇರುತ್ತದೆ."

ಹೀಗಿರಲು ನಾಡುಗರಿಗೆ ನಾಡಿನ ಅಧಿಷ್ಠಾತ್ರೀ ದೇವತೆಯ ಉಪಾಸನೆಯು ಫಲಕಾರಿಯಾಗದೆ ಇದ್ದೀತೇ? ಓಂ ಜಯ ಭುವನೇಶ್ವರೀ!!

# ಪರಿಶಿಷ್ಟ

( ಶ್ರೀ. ಬೇಂದ್ರೆಯವರ ಒಂದು ಪತ್ರದಿಂದ )

## " ಪಡೆದು ದುಡಿದವ ಜಾಣ "

ನಾನು ಬಲ್ಲೆ; ' ಗೆಲವಿಹುದು ' ! ಆದರೆ— — ಆದರೇನು ? ' ದೇವನಲ್ಲಿ ನಿವೃತ್ತಿ ' ಇದೊಂದೇ ಉಪಾಯ.! ನಮ್ಮ ಕನ್ನಡ-ನಾಡಿನ ನರದಲ್ಲಿ ಹರಿವ ತುಂಗೆಯ ಸಂಗೀತವಾದರೂ ಇದನ್ನೇ ಹಾಡುತ್ತಿದೆ. ಭೋಗಲಂಪಟವಾದ ಕನ್ನಡ ನಾಡನ್ನು ಬಸವ ಅಲ್ಲಮಾದಿ ಕಾರಣಿಕರು ' ದೇವನಲ್ಲಿ ನಿವೃತ್ತ ' ರಾಗಿ ಆ ಮೇಲೆ ' ದೇವನಿಂದ ಪ್ರವೃತ್ತ ' ರಾಗಿ ಉದ್ಧರಿಸಿದರು. ಒಕ್ಕಟ್ಟಿಲ್ಲದೆ ಇಕ್ಕಟ್ಟಿನಲ್ಲಿ ಬಿದ್ದಿದ್ದ ಕಾರ್ಯಪರಾಙ್ಮುಖ ಕರ್ನಾಟಕವನ್ನು ಧುರಂಧರ ಮಾಡಲು ಮಧ್ವ ವಿದ್ಯಾರಣ್ಯಾದಿಗಳು ಆ ಮಾರ್ಗವನ್ನೇ ಅನುಸರಿಸಿದರು. ವ್ಯವಹಾರ ಲೋಲುಪರಾದ ಕನ್ನಡಿಗರನ್ನು ದಾಸಕೂಟದವರು ಮತ್ತೆ ಅದೇ ರೀತಿಯಿಂದ ಮೇಲಕ್ಕೆತ್ತಿದರು. ಹೀಗೆ ೧೨-೧೪-೧೬ ಶತಮಾನಗಳಲ್ಲಿ ಮೂರು ಸಲದ ಧರ್ಮಗ್ಲಾನಿಯನ್ನು ಕರ್ನಾಟಕದ ಸೀಮಾ ಪುರುಷರು, ಕನ್ನಡದವ್ವನ ಪವಾಡ ಪುರುಷರು, ಹೀಗೆ ಹೋಗಲಾಡಿಸಿದರು.

' ಅಮರಸ್ಯ ಪುತ್ರಾಃ ' ಎಂದು ಶ್ರುತಿಯು ಸಂಬೋಧಿಸಿದ್ದು ಅಂಥವರಿಗೆ. ಈ ಸಂಬೋಧನವು ಮುಗಿಲ ಮಲ್ಲಿಗೆಯಂದದ ಕುಸುರಿನ ಮಾತಲ್ಲ. ಅಂಥ ಜೀವನವಿದೆ. ಅದನ್ನು ಕಂಡು ಫಲವಿಲ್ಲ; ಉಂಡು ಫಲವಿದೆ. ಜಗಜ್ಜೈತ್ರ ಸಾಮ್ರಾಟರೂ, ದಿಗಂತ ಕೀರ್ತಿಯ ಕವಿಗಳೂ

ಕಲಾವಿದರೂ ಅವಿದಿತ ಕೀರ್ತಿಯ ಸಂತ ಸಜ್ಜನರೂ ಹೆಚ್ಚು ಕಡಿಮೆ ಆ ಜೀವನವನ್ನುಂಡವರಾಗಿದ್ದಾರೆ.

ಪ್ರತಿಯೊಂದು ಜೀವವು ಗರ್ಭಿತವಾಗಿ ಅವತಾರಿಯಾಗಿದೆ. ಆದರ ಒಂಬತ್ತು ತಿಂಗಳನ್ನು ತುಂಬಿಸುವದೇ ಯೋಗ.

ಇದು ಇಪ್ಪತ್ತನೆಯ ಶತಮಾನ. ಈಸಲ ನಾವು ಇಮ್ಮಡಿ ಹುರುಪಿನಿಂದ ಶುದ್ಧ ಪ್ರೇರಣೆಯ ಮಂದಾಕಿನಿಯನ್ನು ಭೂಲೋಕಕ್ಕೆ ಭಾಗೀರಥಿಯಾಗಿ ತರಲಿಕ್ಕೆ ಬೇಕು. ಇದಕ್ಕೆ ದೇವನಲ್ಲಿ ನಿವೃತ್ತಿಯು ಸಂಪೂರ್ಣವಾಗಲಿಕ್ಕೆ ಬೇಕು. ಆ ಮೇಲೆ ಅಪೂರ್ವ ಪ್ರವೃತ್ತಿ; ಅಪೂರ್ವ ಲೀಲೆ. ಹೀಗೆ ನಾವು ನಿವೃತ್ತಿ ಪ್ರವೃತ್ತಿಗಳ ಸವ್ಯಸಾಚಿತ್ವ ದಿಂದ ಧನುರ್ಧರರಾಗುತ್ತಲೇ ನಮ್ಮಲ್ಲಿಯೇ ಅಲ್ಲವೆ ಯೋಗೇಶ್ವರ? ಆ ಮೇಲೆ ಶ್ರೀಯೂ ವಿಜಯವೂ ಬೆಂಬತ್ತಿ ಬರುವವು.

ಈ ನಾಡು ಅವನ ಹೊಲ ಇದರ ಒಕ್ಕಲಿಗನವ
ನಾನೀನು ರೆಂಟೆ ಕುಂಟೆ ||

ಏನಾದರೇನು? 'ಗೆಲವಿಹುದು' ನೀನಿರಬೇಡ
ಸೋಲೆಂಬ ಚಿಂತೆಗಂಟೆ || ೧ ||

ಜಗದ ಪಟ್ಟವನೇರಿ ಕುಳಿತಿಹ ಜಗದ್ಗುರುವು
ನಮ್ಮ ಕರುನಾಡಿನಲಿ ಕಾಲನಿಟ್ಟು ||

ಮುಗಿದು ಎದೆ ಮುಗುಳನ್ನು ಅಡಿಯ ಹುಡಿಯಾಗೋಣ
ಇಲ್ಲ ಸಲ್ಲದ ಬಗೆಗಳೇಕೆ ಇಷ್ಟು || ೨ ||

‘ ಸೋಲು ’ ಎಂಬುದು ಕೇಳು ! ಮೃತ್ಯುಲೋಕದ ಸೊಲ್ಲು
‘ ಗೆಲವು ’ ಒಂದೇ ಬಲ್ಲ ನಮ್ಮನಲ್ಲ ||

ಸೋಲು ಹುಂಬರಗುಲ್ಲು; ಗೆಲವು ಕಾಣ್ಬರ ಸೊಲ್ಲು;
ಸೋಲುವವ ತಾನೆಂದು ಶರಣನಲ್ಲ || ೩ ||

ಪಡೆದಪ್ಪನಾಗದೇ ದುಡಿದಪ್ಪನಾದವಗೆ
ಚಿಂತಿ ನೆರೆಯುವದೊಂದು ಸಂತೆಯಾಗಿ ||

ಪಡೆದು ದುಡಿದವ ಜಾಣ, ವ್ಯಸ್ತನಾದವ ಕೋಣ
ಆಗಬಾರದು ಪಿಂತೆ ಮುಂತೆ ಯಾಗಿ || ೪ ||

‘ **ದೇವನಲ್ಲಿ ನಿವೃತ್ತಿ; ದೇವನಿಂದ ಪ್ರವೃತ್ತಿ** ’ ಈ ಹಾದಿ
ಅರಿಯಬೇಕು ||

ಜೀವ ಬಂಧುವೆ ! ಕೇಳು- ಉಳಿದ ಜಂಜಾಲವನು
ತಾನಾಗಿ ಪುರೆಯ ಬೇಕು || ೫ ||

ರಸಿಕರಿಗೆ ಹಬ್ಬ ! ವಿಚಾರಿಗಳಿಗೆ ಸುಗ್ಗಿ !!

ನಮ್ಮ

# ಅರವಿಂದ ಗ್ರಂಥಮಾಲೆಯ

## ಹೊಸ ವರುಷದ ಪ್ರಕಟನೆ.

ಯೋಗೀಶ್ವರ ಅರವಿಂದರು ಅನ್ನುವಂತೆ—"ನಮ್ಮ ನಾಡಿನ ಹೀನ ದೆಸೆಗೆ ಪಾರತಂತ್ರ್ಯವಾಗಲಿ, ಧರ್ಮಹೀನತೆಯಾಗಲಿ, ದಾರಿದ್ರ್ಯವಾಗಲಿ ಕಾರಣವಾಗಿರದೆ ವಿಚಾರ ಶಕ್ತಿಯ ಅಭಾವವೇ ಅದಕ್ಕೆ ಮುಖ್ಯ ಕಾರಣವಾಗಿದೆ. ಹಲವರಿಗೆ ವಿಚಾರಮಾಡುವ ಶಕ್ತಿಯೇ ಇಲ್ಲ; ಆ ಶಕ್ತಿಯಿದ್ದ ಕೆಲವರಿಗೆ ವಿಚಾರಮಾಡುವ ಇಚ್ಛೆಯಿಲ್ಲ. ಪಾಶ್ಚಾತ್ಯರನ್ನು ನೋಡಿರಿ; ಅವರು ಪ್ರಗಾಢವಾದ ವಿಚಾರಶಕ್ತಿಯ ಬಲದಿಂದ ಇಂದು ಜಗತ್ತನ್ನೇ ನಡುಗಿಸುತ್ತಿದ್ದಾರೆ. ಅಲ್ಲ ಒಬ್ಬ ಕೂಲಿಕಾರನು ಕೂಡ ಅತ್ಯಂತ ಮಹತ್ತ್ವದ ವಿಷಯಗಳನ್ನು ಕುರಿತು ವಿಚಾರಮಾಡುವುದಕ್ಕೆ ಸಮರ್ಥನಿರುತ್ತಾನೆ. ಆದರೆ ನಮ್ಮಲ್ಲಿ ನೋಡಿರಿ. ತೀರ ಸಾಮಾನ್ಯ ವಿಷಯಗಳ ಬಗ್ಗೆ ಮಾತ್ರ ವಿಚಾರ ಮಾಡುವುದಕ್ಕೆ ಇವರಿಗೆ ತವಕ ವಿರುತ್ತದೆ." ನಮ್ಮ ಈ ವಿಚಾರದಾರಿದ್ರ್ಯವು ದೂರವಾಗಬೇಕಾದರೆ ಜಗತ್ತಿನೊಳಗಿನ ಋಷಿ ಸಮಾನರಾದ ಮಹಾ ವಿಚಾರಿಗಳ ತತ್ತ್ವಗಳನ್ನೊಳಗೊಂಡ ಗ್ರಂಥಗಳ ಪರಿಶೀಲನವೇ ಮುಖ್ಯೋಪಾಯವೆಂದು ನಮ್ಮ ಭಾವನೆ. ಈ ಭಾವನೆಗೆ ತಕ್ಕಂತೆ ನಮ್ಮ ತಾಯ್ನಾಡಿಗೆ ವಿಚಾರ ಜಾಗೃತಿಪರವಾದ ವಾಙ್ಮಯವನ್ನು ಒದಗಿಸಿಕೊಡುವುದೇ ನಮ್ಮ ಗ್ರಂಥಮಾಲೆಯ ಉದ್ದೇಶವಾಗಿದೆ.

ಇಂಥ ಮಹಾ ಆರಾಧನೆಯನ್ನು ಈಡೇರಿಸುವದಕ್ಕೆ ನಮ್ಮ ಚಿಕ್ಕ ಕೈಗಳಿಗೆ ಶಕ್ತಿ ಸಾಲದಾದರೂ, ನಾಡಿನ ಅಣ್ಣಂದಿರೆಲ್ಲ ನಮ್ಮ ಬೆನ್ನು

ಚಪ್ಪರಿಸಿದರೆ, ಅಸಾಧ್ಯವೆಲ್ಲ ಸುಸಾಧ್ಯವಾಗಬಲ್ಲದೆಂಬ ದೃಢವಾದ ಶ್ರದ್ಧೆಯೂ, ಒಂದು ವರುಷದ ಅನುಭವವೂ ನಮಗಿದೆ.

ಎರಡು ತಿಂಗಳಿಗೊಂದರಂತೆ ವರುಷಕ್ಕೆ ಆರು ಪುಸ್ತಕಗಳು. ಅಲ್ಲದೆ ಕಾಣಿಕೆಯ ಪುಸ್ತಕವೊಂದು. ಇಷ್ಟಕ್ಕೆಲ್ಲ ಕೂಡಿ, ಅಂಚೆವೆಚ್ಚ ಸಹಿತವಾಗಿ ವರುಷಕ್ಕೆ ಮೂರೂವರೆ ರೂಪಾಯಿ ಮಾತ್ರ.

---

# ಹೊಸ ವರುಷದ ಯೋಜನೆ

## (೧) ಬಾಳಿನ ಬೆಲೆ

( ಟಾಲ್‌ಸ್ಟಾಯರ ಕಥೆಗಳು )

ಅನುವಾದಕರು: — **ಶ್ರೀ. ಸಿಂಪಿ ಲಿಂಗಣ್ಣ.**

ಮಹಾತ್ಮ ಟಾಲ್‌ಸ್ಟಾಯರು ಮಹರ್ಷಿಗಳೂ ಅಹುದು; ಸರಸ ಸಾಹಿತಿಗಳೂ ಅಹುದು. ಅವರ ಉತ್ತರ ಜೀವನದಲ್ಲಿ ಜನ್ಮತಾಳಿದ ಈ ಕಥೆಗಳಲ್ಲಿ ಅವರ ಇವೆರಡೂ ಶಕ್ತಿಗಳ ಸಂಗಮವನ್ನು ಕಾಣಬಹುದು. ತತ್ವಬೋಧದಲ್ಲಿ ಇವು ಉಪನಿಷತ್ತಿನ ಕಥೆಗಳಿಗೆ ಸರಿಗಟ್ಟುವರೆ, ರಸವಂತಿಕೆಯಲ್ಲಿ ವಿಶ್ವಸಾಹಿತ್ಯದ ಸ್ಥಾನವನ್ನು ಆಕ್ರಮಿಸಿಕೊಂಡಿರುವವು. ಮೂಲದೊಳಗಿನ ಅನ್ಯದೇಶಿಯ ಹೆಸರುಗಳಿಗೆ ಬದಲಾಗಿ ನಮ್ಮವುಗಳನ್ನು ಉಪಯೋಗಿಸಿದ್ದಲ್ಲದೆ ಭಾಷೆಯೂ, ರೀತಿಯೂ ಉತ್ತರ ಕರ್ನಾಟಕಕ್ಕೆ ಸಹ ಅನುಕೂಲಿಸುವಂತೆ ಅನುವಾದಿಸಲ್ಪಟ್ಟಿದೆ. ಜಗತ್ತಿಗೇ ಮರುಳುಗೊಳಿಸಿದ "ಮನುಷ್ಯನು ಬದುಕುವುದು ಏತರಿಂದ ?" ಎಂಬ ವಿಖ್ಯಾತ ಕಥೆಯೂ ಈ ಏಳು ಕಥೆಗಳಲ್ಲಿ ಬಂದಿದೆ.

## (೧) ಯಾವುದೇನು?

(ಸಾಮಾಜಿಕ ವ್ಯಂಗ್ಯ ನಾಟಕ)

ಲೇಖಕರು:— ಶ್ರೀ. ಶಿವರಾಮ ಕಾರಂತರು.

ಕಾರಂತರ ನಾಟಕವೆಂದರೆ ಹೆಚ್ಚಿಗೆ ಹೇಳುವದೇ ಬೇಡ. ನಾಟಕ, ಕಾದಂಬರಿ, ವಿಡಂಬನಸಾಹಿತ್ಯ ಮುಂತಾದವುಗಳಲ್ಲಿ ಇವರು ಸಿದ್ಧಹಸ್ತರು. ಇವರ ಪುಸ್ತಕಗಳಿಗೆ ಕೈ ಹಚ್ಚಿದವರು ಸಹ ಬಹಳ ಜೋಕೆಯಿಂದ ಇರಬೇಕೆನಿಸುತ್ತದೆ. ಯಾಕೆಂದರೆ ಇವರು ತಮ್ಮದೊಂದು ಪ್ರಸ್ತಾವನೆಯಲ್ಲಿ "ಇದು ಸುತ್ತಲೂ ಲತ್ತಿ ಕೊಡುವ ಕತ್ತಿ" ಎಂದು ಹೇಳಿಕೊಂಡಿದ್ದಾರೆ. ಕರ್ನಾಟಕದ "ಸರ್ವದಮನ"ರಾದ ಇವರ ಈ ಸಾಮಾಜಿಕ ನಾಟಕವನ್ನು ಓದಿಯೇ ಸವಿಯನ್ನು ತಿಳಿಯಬೇಕು.

---

## (೨) ಅವ್ಯಕ್ತ

(ವಿಜ್ಞಾನಾಚಾರ್ಯ ಸರ್ ಜಗದೀಶಚಂದ್ರ ಬೋಸರ ವಿವಿಧ ಪ್ರಬಂಧಗಳು.)

ಅನುವಾದಕರು:— **ಶ್ರೀ. ಕಾಪಸೆ ರೇವಪ್ಪನವರು.**

ಶ್ರೀ. ಜಗದೀಶಚಂದ್ರರ ಆಶ್ಚರ್ಯಕರವಾದ ಶೋಧಗಳಿಗೆ ಇಂದು ಜಗತ್ತೇ ಬೆರಗು ಕಚ್ಚಿದೆಯಷ್ಟೆ? ಈ ಪುಸ್ತಕದಲ್ಲಿ ಅವರ ಆ ಅಮೌಲ್ಯ ಶೋಧಗಳ ವರ್ಣನೆಯು ಸುಲಭವೂ, ಸುರಸವೂ ಆದ ಶೈಲಿಯಲ್ಲಿ ಸ್ವತಃ ಅವರ ಲೇಖಿನಿಯಿಂದಲೇ ಪ್ರಕಟಿತವಾಗಿದೆ. ಇದರಲ್ಲಿ ವನಸ್ಪತಿ ಜೀವನದ ಅಗಾಧ ಅನುಭವಗಳನ್ನು ಹೃದಯಂಗಮವಾಗಿ ವಿವರಿಸಿದ್ದಲ್ಲದೆ ಸ್ವತಃ ಅವರ ಜೀವನದ ಅಮೌಲ್ಯವಾದ ಪ್ರಸಂಗಗಳು ಅವರ ಋಷಿವಾಣಿಯಿಂದಲೇ ಉಲ್ಲೇಖಿಸಲ್ಪಟ್ಟಿವೆ.

ಇದರಲ್ಲಿ ನಾವು ಅವರ ಬುಷಿತ್ವವನ್ನು ಮನಗಾಣುವದರಿಂದ ಇಮ್ಮಡಿ ಹರುಷಿತರಾಗುವೆವು. ನಮ್ಮ ಜೀವನಕ್ಕೆ ಇದು ಮಹಾ ಉತ್ಸಾಹವನ್ನೂ ತೇಜವನ್ನೂ ವಿಪುಲವಾಗಿ ಒದಗಿಸುವದು. ಇದು ಬೊಂಧ-ಬೋಧಗಳೆರಡರ ಗಂಗಾ ಯಮುನಾ ಸಂಗಮವಾಗಿದೆ.

---

## (೪) ಸರಸ ಸಂಸಾರ

( ಡಿಕಿನ್ಸರು ಬರೆದ ದಾಂಪತ್ಯಚಿತ್ರ )

ಅನುವಾದಕರು:— **ಶ್ರೀ. ಈಶ್ವರ ಸಣಕಲ್ಲ.**

ಸ್ವಭಾವ ಚಿತ್ರವನ್ನು ನಿರೂಪಿಸುವದರಲ್ಲಿ ಪ್ರಭುತ್ವಶಾಲಿಗಳಾದ " ಚಾರ್ಲ್ಸ್ ಡಿಕಿನ್ಸ್ " ರು ಜಗದ್ವಿಖ್ಯಾತ ಕಾದಂಬರಿಕಾರರು ದಾಂಪತ್ಯ ಜೀವನದ ಮಾಧುರ್ಯವನ್ನೂ ಸೌಂದರ್ಯವನ್ನೂ ಅದರ ವಿವಿಧ ಲಹರಿಗಳನ್ನೂ ಕಂಡು ತಣಿಯಬೇಕೆಂದಿದ್ದರೆ ಅವರ ಈ ಪುಸ್ತಕವನ್ನು ಓದಬೇಕು. ಅದರಲ್ಲಿಯ ಪ್ರಕರಣಗಳ ಹೆಸರು ನೋಡಿದರೇ ಸಾಕು. ಅವು:—

| | |
|---|---|
| (೧) ನವೀನ ದಂಪತಿ | (೬) ಉದಾಸೀನ ದಂಪತಿ |
| (೨) ಲೌಕಿಕ ದಂಪತಿ | (೭) ಪ್ರಶಂಸನೀಯ ದಂಪತಿ |
| (೩) ಪ್ರೇಮಿಕ ದಂಪತಿ | (೮) ಚಮತ್ಕಾರ ದಂಪತಿ |
| (೪) ತರ್ಕಪ್ರಿಯ ದಂಪತಿ | (೯) ಆತ್ಮವಾದೀ ದಂಪತಿ |
| (೫) ಸಂತಾನಾಸಕ್ತ ದಂಪತಿ | (೧೦) ಸಾವಧಾನೀ ದಂಪತಿ |

(೧೧) ವೃದ್ಧ ದಂಪತಿ

ಇದನ್ನು ಅನುವಾದಿಸಿದ ಶ್ರೀ. ಈಶ್ವರ ಸಣಕಲ್ಲರ ಹೆಸರನ್ನು ಕನ್ನಡಿಗರು ಕಾಣದ ಮಾಸಿಕಗಳಿಲ್ಲವೆಂದು ಹೇಳಿದರೆ ಅವರ ಪರಿಚಯವು ಸಾಕು.

## ( ೫ ) ಪೂರ್ಣಯೋಗ

( ಶ್ರೀ ಅರವಿಂದರ ಯೋಗ ಗ್ರಂಥಗಳೆರಡರ ಯುಗ್ಮ )

ಅನುವಾದಕರು:— **ಶ್ರೀ. ಮಧುರಚೆನ್ನ**

ಕಲಿಯುಗವು ಸರಿದು ಸತ್ಯಯುಗವು ಬರಲಿದೆಯೆಂದು ಸಾರುತ್ತಲಿರುವ ಯೋಗೀಶ್ವರ ಶ್ರೀ ಅರವಿಂದರು ನವಮನ್ವಂತರ ಪ್ರವರ್ತಕರೆಂದು ಅವರ ಗ್ರಂಥಗಳನ್ನು ಓದುವಾಗ ಅನಿಸುತ್ತಿರುತ್ತವೆ. ಅವರ ಪ್ರಕಾಂಡವಾದ ಹೆಬ್ಬೊತ್ತಿಗೆಗಳಲ್ಲೆಲ್ಲ ವಿವಿಧ ಮುಖದಿಂದ ವಿವರಿಸಲ್ಪಟ್ಟ "ಪೂರ್ಣಯೋಗ" ದ ಸರ್ವ ಸೂತ್ರಗಳು ಅಡಕವಾಗಿರುವ "ಯೋಗ ಮತ್ತು ಅದರ ಉದ್ದೇಶ" ಹಾಗೂ "ಯೋಗಿಕ್ ಸಾಧನ" ಎಂಬ ಎರಡು ಅಪೌಲ್ಯ ಗ್ರಂಥಗಳನ್ನು ಕನ್ನಡಿಸಿ ಹೀಗೆ ಒಂದೇ ಪುಸ್ತಕವಾಗಿ ಪ್ರಕಟಿಸಲಿರುವೆವು. ಈ ಪುಸ್ತಕವು ಅವರ ಸಮಸ್ತ ಜ್ಞಾನದ ಬೀಗದ ಕೈಯ್ಯಾಗಿದೆ. ಇದಲ್ಲದೆ ಈ ಯೋಗದ ದ್ವಾದಶ ವತ್ಸರಗಳ ಗಾಢ ಪರಿಚಯವುಳ್ಳ ಅನುವಾದಕರು ವಿಸ್ತೃತವಾದ ಪರಿಶಿಷ್ಟವನ್ನು ಬಹು ಕೂಲಂಕಷವಾಗಿ ಬರೆದಿದ್ದಾರೆ. ಬರಲಿರುವ ಕಾಲದ ದಿವ್ಯ ಯೋಗದ ಸರ್ವಾಂಗೀಣ ಪರಿಚಯುವನ್ನು ಈ ಅನುವಾದದಲ್ಲಿ ಪಡೆಯಬಹುದು.

---

## ( ೬ ) ಅಲಿಖಿತ

( ಕಾದಂಬರಿ )

ಲೇಖಕರು:— **ಪ್ರೊ. ಮುಗಳಿ ರಂಗರಾಯರು** ಎಂ. ಎ., ಬಿ. ಟಿ.

"ಬಾಳುರಿ" ಹಾಗೂ "ಸೇವಾ ಪ್ರದೀಪ" ಈ ಎರಡು ಕಾದಂಬರಿ ಮತ್ತು ನಾಟಕಗಳಿಂದ ಕನ್ನಡಿಗರ ಕುತೂಹಲಕ್ಕೆ

ಕಾರಣರಾಗಿರುವ ಪ್ರೊ. ಮುಗಳಿಯವರು ಬರೆದ ಈ ಸಾಮಾಜಿಕ ಕಾದಂಬರಿಯಲ್ಲಿ ನಮಗೆ ಅವರ "ಬಾಳುರಿ" ಯೊಳಗಿನ ಹೃದಯ ವಿದಾರಕ ಲೇಖನಿಯು ಪುನಃ ಪರಿಚಯವಾಗದಿರದು. ಅವರ ಭಾಷೆಯೊಳಗಿನ ತೂಕ, ಸರಣಿಯೊಳಗಿನ ಸೌಮ್ಯತೆ ಇವು ಈಗಾಗಲೇ ನಾಡನ್ನು ಬೆರಗುಗೊಳಿಸಿವೆ.

---

## ಕಾಣಿಕೆಯ ಪುಸ್ತಕ

# (೭) ವೀರ-ಪಥಿಕ

( ಅರಬ್ಬಿಯದ ಅಭಿಮನ್ಯು )

ಕವಿ:— "**ಕಾಡಹಕ್ಕಿ**" ( **ಪಿ. ಧೂಲಾ.** )

ತಮ್ಮ ತಮ್ಮ ಜೀವನವನ್ನು ವಿಶಿಷ್ಟ ಧ್ಯೇಯದ ಪಡಿಯಚ್ಚಿನಲ್ಲಿ ಎರಕ ಹೊಯ್ಯುವ ಧ್ಯೇಯವಾದೀಯುವಕರ ಜೀವನ ಪಥದಲ್ಲಿ ಬರುವ ದುರಂತ ಉತ್ಥಾನ ಪತನಗಳ ಹೃದಯೋಚ್ಛ್ವಾಸದ ತರಂಗಗಳೇ ಈ ಕವಿತೆಗಳು. ಹೊರಗಿನ ಒಳಗಿನ ಅಪರಿಮಿತ ವಿಘ್ನಬಾಧೆಗಳನ್ನು ಎದುರಿಸಿ ಧ್ಯೇಯದೆಡೆಗೆ ಸಾಗುವ ವೀರ ಪಥಿಕರ ಹಾದಿಯ ಹಾಡುಗಳಿವು. ಶ್ರೀ. ಮಧುರಚೆನ್ನರ ಟೀಕೆ ಟಿಪ್ಪಣಿಗಳೂ ಇದಕ್ಕಿವೆ. ಈ ಕಾಣಿಕೆಯ ಪುಸ್ತಕವನ್ನು ಎರಡನೆಯ ವರ್ಷಾರಂಭದಲ್ಲಿಯೇ ಕೊಡುತ್ತೇವೆ.

—–0—–

# ನಡೆಯುವ ವರ್ಷದ ಪುಸ್ತಕಗಳು

## (೧) ನಂದನವನ

ಕತೆಗಾರರು:— ಶ್ರೀ. ಕಾಪಸೆ ರೇವಪ್ಪ.

ನುಡಿನುಡಿಗೂ ಹೊಸ ಬೆಡಗು ಸುರಿಸುವ ಏಳು ಚಿತ್ರಕ ಕಥೆಗಳು ಬಣ್ಣದಿಂದ ಚಿತ್ರಬರೆಯುವ ಲೇಖಕರು ಇಲ್ಲಿ ಶಬ್ದಗಳಿಂದ ಬರೆದಿರುವ ಚಿತ್ರಗಳನ್ನು ನೋಡಿದರೆ ಓದುಗರ ಹೃದಯಕ್ಕೆ ಅದೊಂದು ಬಗೆಯ ಅತ್ಯಾಶ್ಚರ್ಯವಾಗದಿರದು.

"ಮಲ್ಲಿಗೆದಂಡೆ" ಮತ್ತು "ಗರತಿಯ ಹಾಡು" ಗಳನ್ನು ಸಂಗ್ರಹಿಸಿ ಕನ್ನಡ ತಾಯಿಯ ಕಳೆಯನ್ನು ಹೆಚ್ಚಿಸಿದ ಶ್ರೀ. ಕಾಪಸೆ ಯವರ ಅಂತರಂಗಿಕ ಜೀವನದ ಅಮೌಲ್ಯ ಗದ್ಯ ಕಾವ್ಯಗಳಾದ "ಬಿಲ್ವದಳ" ಮತ್ತು "ಭವ್ಯಸ್ವಪ್ನ" ಎಂಬುವುಗಳು ಈ "ನಂದನವನ" ದ ಪಾರಿಜಾತ ಪುಷ್ಪಗಳು. ಇಂದಿಲ್ಲ ನಾಳೆ ಇವೆರಡೂ ಕನ್ನಡಿಗರ ವಿಪುಲ ಕುತೂಹಲದ ಆಗರವಾಗದಿರವು. ಉಳಿದ ಕತೆಗಳು ಕಾವ್ಯ ಜ್ಯಾತಿಗೆ ಸೇರಿದವುಗಳಲ್ಲವಾದರೂ ಅದರ ಹೊಳಪು ಇಲ್ಲದ ಒಂದು ಪುಟವು ಸಹ ಸಿಗದು. ಇದನ್ನೋದಿ ಮನದಣಿಯಿರಿ.

—— ಬೆಲೆ ೧೦ ಆಣೆ.

## (೨) ಬಾಳಿನಲ್ಲಿ ಬೆಳಕು

( ಮಹರ್ಷಿ ಟಾಲ್‌ಸ್ಟಾಯರ ಆತ್ಮ ಚರಿತ್ರ )

ಅನುವಾದಕರು:—

**ಶ್ರೀ. ಮಧುರಚೆನ್ನ ಮತ್ತು ಶ್ರೀ. ಸಿಂಪೀ ಲಿಂಗಣ್ಣ.**

ಜೀವನದ ಉದ್ದೇಶವನ್ನು ಧರ್ಮ ದೇವಾಲಯಗಳಲ್ಲಿ ದಿಗ್ದೇಶದ ಶಾಸ್ತ್ರಗಳಲ್ಲಿ, ಕೀರ್ತಿ ಗೌರವಗಳಲ್ಲಿ ಅರಸಿ ಅರಸಿ ಕಾಣದೆ ಬಳಲಿ

ಬೆಂಡಾದಾಗ ಅದು ಹಳ್ಳಿಗರ ಸರಳ ಜೀವನದಲ್ಲಿಯೋ ಮೈಸೂರಿದ್ದರ ಎದೆ ಕರಗಿಸುವ ಕರುಣ ಕತೆ ಇದರಲ್ಲಿದೆ. ವಿಚಾರ ಪ್ರಧಾನರಾದ ಆಧುನಿಕ ಸಾಧಕರಿಗೆ ಬರುವ ಶತ ಶತ ಕಷ್ಟನಷ್ಟಗಳ ರೀತಿಗಳನ್ನೆಲ್ಲ ಇದರಲ್ಲಿ ಕಾಣಬಹುದು. ಅದರಲ್ಲಿಯೂ ಮಹರ್ಷಿ ಟಾಲ್‌ಸ್ಟಾಯರಂಥ ಅಲೌಕಿಕ ಪ್ರತಿಭಾ ಶಾಲಿಗಳು ಬರೆದ ತಮ್ಮ ಸ್ವತಹದ ಪ್ರಾಂಜಲ ಜೀವನ ಚರಿತ್ರೆಯಿದು.

——

## (೩) ಮಿಲನ

ಲೇಖಕರು:— **ಸಿಂಪೀ ಲಿಂಗಣ್ಣ**

ಇದೊಂದು ಪ್ರೇಮ ಕಾವ್ಯ. ಪ್ರೇಮ ಕಾವ್ಯವೆಂದ ಕೂಡಲೆ ಕಾಮುಕರ ಕಳವಳ ಕಾತರಗಳಿಗೂ, ತವಕ ತಾಮಸಗಳಿಗೂ ಇದರಲ್ಲಿ ಅಗ್ರಪಟ್ಟವಿರಬಹುದೆಂದು ಭಾವನೆಯಾಗುವದು ಸಹಜ. ಆದರೆ ಇದು ನಲ್ಲ-ನಲ್ಲೆಯರ ಪೂರ್ವರಾಗದ ಶೃಂಗಾರ ಸಾಧನೆಯ ರಂಗಸ್ಥಳವಾಗಿರದೆ ಧ್ಯೇಯಕ್ಕಾಗಿ ನಿಗ್ರಹ ವ್ರತವನ್ನು ಕೈಕೊಳ್ಳುವ ವೀರ ದಂಪತಿಗಳ ತಪೋಭೂಮಿಯಾಗಿದೆ.

ಮೊದಲಿನಿಂದ ಕೊನೆಯ ವರೆಗೆ ಇಡಿ ಒಂದೇ ಕಾವ್ಯವಾಗಿರುವದು ಆಧುನಿಕ ಕನ್ನಡ ಕವನ ಸಾಹಿತ್ಯದಲ್ಲಿ ಇದೊಂದೆ. ಇದರಂಥ ಸುಂದರವೂ ಸಚಿತ್ರವೂ ಆದ ಮುದ್ರಣವು ಉತ್ತರ ಕರ್ನಾಟಕದಲ್ಲಿ ಬಹಳ ವಿರಳ. ಶ್ರೀ. ಸಿಂಪೀ ಲಿಂಗಣ್ಣನವರ ಸಹಜವಾದ ಲಲಿತವಾದ ನುಡಿಯ ಬೆಡಗನ್ನು ನೋಡಬೇಕೆ? ಇಕೊಳ್ಳಿ:—

“ ತನು ಮನವ ಶಕ್ತಿತ್ರಯ ನೀಡಿ ಜಗಪದತಲಕೆ
ಬೆಳೆಸುವದು ಲೋಕಸುಖ ಶಾಂತಿಗಳನು ।

ಮನುಜ ಜನ್ಮದ ಮರ್ಮ ಇದುವೆ ಕೇಳ್ ಮಡದಿಯಳೆ
ಪರಮೋಚ್ಚ ಭಕ್ತಿ ಇದೆ ತಿಳಿಯೆ ನೀನು ॥ ”

ಇಂಥ ಸುಂದರವಾದ ಪುಸ್ತಕಕ್ಕೆ ಬೆಲೆ ೧೨ ಆಣೆ.

---

## (೪) ಭಾರತೀಯ ನವಜನ್ಮ

( ಶ್ರೀ ಅರವಿಂದ ಯೋಗಿಗಳ ದಿವ್ಯ ನಿರೀಕ್ಷಣೆ )

ಅನುವಾದಕರು:— **ಶ್ರೀ. ದ. ರಾ. ಬೇಂದ್ರೆಯವರು** ಎಂ. ಎ.

ಭಾರತದ ಭವಿತವ್ಯವೇನು ಹೇಗಿದೆ? ಬರಲಿರುವ ಹೊಸಕಾಲದ ರೂಪರೇಖೆಗಳಾವವು? ಭಾರತೀಯ ಪುರಾತನ ಸಂಸ್ಕೃತಿಯನ್ನು ಅದು ಹೇಗೆ ಒಳಗೊಳ್ಳುವದು? ನಮ್ಮ ಪುರಾತನದ ನಿಜವಾದ ರಹಸ್ಯವಾದರೂ ಏನು? ಇವೆಲ್ಲ ಪ್ರಶ್ನೆಗಳನ್ನು, ಸತ್ಯಯುಗವು ತಿರುಗಿ ಬರಲಿದೆ ಎಂದು ಸಾರುವ ಯೋಗದೃಷ್ಟಿ ಸಂಪನ್ನರಾದ ಶ್ರೀ ಅರವಿಂದ ಘೋಷರು ಪುರಾತನ ನೂತನ ವಿವಿಧ ಘಟನೆಗಳ ನಿರ್ದೇಶದೊಂದಿಗೆ ಈ ಪುಸ್ತಕದಲ್ಲಿ ವಿವೇಚಿಸಿದ್ದಾರೆ.

ವ್ಯೂಹ ವ್ಯೂಹವಾಗಿರುವ ಅವರ ಭಾಷಾ ಶೈಲಿಯನ್ನು ಸಾಹಿತ್ಯದ ಸವ್ಯಸಾಚಿಗಳಾದ ಶ್ರೀ. ಬೇಂದ್ರೆಯವರು ಕನ್ನಡದ ಕನ್ನಡಿ

ಯಲ್ಲಿ ಹೇಗೆ ಕೌಶಲ್ಯದಿಂದ ಪಡಿಮೂಡಿಸಿರುವರೆಂಬುದನ್ನು ಓದಿಯೇ ತಿಳಿದುಕೊಳ್ಳಬೇಕು. ಕಲಕತ್ತೆಯಲ್ಲಿ ಮುದ್ರಿತವಾದ ಯೋಗೀಶ್ವರ ಅರವಿಂದರ ಸುಂದರವಾದ ಚಿತ್ರವೂ ಮತ್ತು ಅನುವಾದಕರ ಛಾಯಾಚಿತ್ರವೂ ಪುಸ್ತಕದ ಶೋಭೆಯನ್ನು ಇನ್ನಿಷ್ಟು ಹೆಚ್ಚಿಸಿವೆ.

ಇದರ ಬೆಲೆ ೧೨ ಆಣೆ

---

## (೫) ಬಂಧನದ ಆಚೆ

( ಕಾದಂಬರಿ )

ಲೇಖಕರು: - **ಪದ್ಮರಾಜ ಹುನಗುಂದ** ( ವಾಙ್ಮಯ ವಿಶಾರದ )

"ಹೆಂಗಸು" ಎಂದರೆ ಗಂಡಸಿನ ಸೊಗಸಿನಾಟದ ಸಲುವಾಗಿ ಆಣಿಯಾಗಿರಿಸಿದ ಮಾಟದ ಬೊಂಬೆಯಲ್ಲ. ಅವಳಿಗೂ ಮಾನವ ಸಹಜವಾದ ವಿಚಾರ— ವಿಕಾರಗಳಿವೆ; ಹೃದಯವಿದೆ; ಆಕಾಂಕ್ಷೆಯಿದೆ. ಮಾನವ ಜಾತಿಯ ವಿಕಸನದಲ್ಲಿ — ಪರಿಪೂರ್ಣತೆಯ ಪ್ರಯತ್ನದಲ್ಲಿ — ಗಂಡಸಿಗೆ ಸಮನಾಗಿ ಅವಳಿಗೂ ಸ್ಥಾನವಿದೆ. ಬುದ್ಧಿಯು ಒಪ್ಪುವಂತೆ ಮತ್ತು ಹೃದಯವು ಅಪ್ಪುವಂತೆ ಮನೋರಮ ಶೈಲಿಯಲ್ಲಿ ಹೃದಯಂಗಮ ಕಥಾವಸ್ತುವನ್ನು ಅಂದವಾಗಿ ಆರಿಸಿ ಲೇಖಕರು ಈ ದಿವ್ಯ ಸಂದೇಶವನ್ನು ನಮ್ಮ ಸಮಾಜಕ್ಕೆ ಅರುಹಿದ್ದಾರೆ.

ಇದರ ಬೆಲೆ ೧ರೂ. ೮ ಆ.

## (೬) ಕನ್ನಡಿಗರ ಕುಲಗುರು

### ( ಶ್ರೀ ವಿದ್ಯಾರಣ್ಯರು )

ಲೇಖಕರು:— **ಮಧುರಚೆನ್ನ** ಮತ್ತು ಸಿಂಪೀ ಲಿಂಗಣ್ಣ

ಕನ್ನಡ ನಾಡಿಗೆ ಅಮೃತ ಸೇಚನವನ್ನು ಮಾಡಿದ ಶ್ರೀ ವಿದ್ಯಾರಣ್ಯ ಮುನಿವರ್ಯರ ಜೀವನ ಹಾಗು ಅವರ ವಿಚಾರ ಇವುಗಳ ತೀರ ಹೊಸ ಬಗೆಯ ನಿರೀಕ್ಷಣವು ಈ ಪುಸ್ತಕದ ಸರ್ವಸ್ವವಾಗಿದೆ. ಈ ರೀತಿಯ ಜೀವನ ನಿರೀಕ್ಷಣವೂ ವಿಚಾರ ವಿಮರ್ಶೆಯೂ ಆದದ್ದು ಕನ್ನಡದಲ್ಲಿ ಇದೇ ಮೊದಲು. ಶುದ್ಧ ಸನ್ಯಾಸದೊಳಗಿನ ವಿಶ್ವಸಂಸಾರವೆಂತಹದು, ಶುದ್ಧ ಸಂಸಾರದೊಳಗಿನ ಋಷಿ ಜೀವನವೆಂತಹದು ಎಂಬುದನ್ನು ಇದರಲ್ಲಿ ಕಾಣಬಹುದು. ಅಲ್ಲದೆ ಶ್ರೀ. ಕಾಪಸೆಯವರು ಚಿತ್ರಿಸಿದ ಶ್ರೀ ಭುವನೇಶ್ವರೀ ಮಾತೆಯ ತೀರ ಹೊಸ ರೀತಿಯ ಚಿತ್ರವೊಂದು ಇದರಲ್ಲಿದೆ.

—0—

# ಒಪ್ಪೋಲೆ.

---

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೨ | ೯ | ತರಗ | ತುರಗ |
| ೫ | ೯ | ದೃಷ್ಟಿಯಿಂದ | ದೃಷ್ಟದಿಂದ |
| ,, | ೧೦ | ಬಂದಿರು | ಬಾರದಿರು |
| ೧೧ | ೧೦ | ಸ್ಕಾಟಲಂಡಿನ | ಸ್ಕಾಟಲಂಡಿನ |
| ೧೮ | ೫ | ಅಣ್ಣಂದಿರು | ಅಜ್ಜಂದಿರು |
| ೨೧ | ('ಗದಾಸುದರ್ಶನ' ಪದ್ಯವು ಶ್ರೀ. ಟಿ. ವ್ಹಿ. ಜಿ. ಅವರದು.) | | |
| ೨೭ | ೨೧ | ಸಿದ್ಧಾರ್ಥನಿಗೆ | ಸಿದ್ಧಾರ್ಥನು |
| ,, | ೨೨ | (ಆತನು ಎಂಬ ಶಬ್ದವನ್ನು ಬಿಡಬೇಕು) | |
| ೩೧ | ೧೨ | ಶಾಂತಗಳು | ಶಾಂತಕವಿಗಳು |
| ೩೩ | ೭ | ನಿನ್ನದು | ನಿಮ್ಮದು |
| ,, | ೧೬ | ಅಧಿವಾರಿ | ಅಧಿಕಾರಿ |
| ೩೯ | ೧ | ಸತ್ತಾತ್ಮ | ಸತ್ತಾತ್ಮಕ |
| ,, | ೩ | ರಾಜ್ಯಗಳ | ರಾಜ್ಯವು |
| ,, | ೧೪ | ರಾಜಧರ್ಮ | ಸನಾತನ ರಾಜಧರ್ಮ |
| ೪೦ | ೨೩ | ಸಪ್ತವಾಕ್ಷೈ | ಸಪ್ತವಾಷ್ಟೈ |
| ೪೪ | ೨೧ | ಪದ್ಮಾಪೀಠ | ಪದ್ಮಪೀಠ |